# ಅಪರಂಜಿ

ತಿಳಿನಗೆಯ ಕಾರಂಜಿ



ಏಪ್ರಿಲ್ - 2012





# ಅಪರಂಜಿ

ತಿಳಿನಗೆಯ ಕಾರಂಜಿ







ಸಂಪುಟ 29

ಸಂಚಿಕೆ – 7

ಏಪ್ರಿಲ್ – 2012



ಸಂಪಾದಕ ಮಂಡಳಿ

ಸಂಪಾದಕರು
ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು
ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

ಟ್ರಸ್ಟಿಗಳು
ಶ್ರೀ ಎಂ. ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಜಿ. ನಾಗೇಶ್
ಶ್ರೀ ವಿ.ಆರ್. ನಾಥ್
ಶ್ರೀ ಎ.ಆರ್. ರಾಜಗೋಪಾಲ್
ಶ್ರೀ ಕೆ. ರವೀಂದ್ರ ರಾವ್

ವಿಶೇಷ ಆಹ್ವಾನಿತರು
ಶ್ರೀ ಆರ್. ಶೇಷಗಿರಿರಾವ್
ಶ್ರೀ ಆರ್.ಎಸ್. ಪ್ರಶಾಂತ್

ಗೌರವ ಸಲಹೆಗಾರರು
ಶ್ರೀ ಅ.ರಾ.ಸೇ.



**ಚಂದಾ ವಿವರ:**
ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತ್ತು ವರ್ಷದ ಚಂದಾ: ರೂ. 750/-

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ


## ಈ ಸಂಚಿಕೆಯಲ್ಲಿ.....


| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 2 |
| ನಮ್ಮ ನಿಮ್ಮಲ್ಲಿ | **ಶಿವಕುಮಾರ್** | 3 |
| ಮಠ. ಮಠ. ಮಧ್ಯಾಹ್ನ | **ಗಣೇಶ ಹೆಗ್ಗಡೆ** | 5 |
| ಸಕಾಲಕ್ಕೆ ಸಖತ್ ತಯಾರಿ | **ಇ.ಆರ್. ರಾಮಚಂದ್ರನ್** | 8 |
| ಕುಗ್ರಾಮ ವಾಸಿಯ..... | **ಆನಂದ** | 10 |
| ಗಾಂಧಿ ಕ್ಲಾಸು | **ಕುಂ. ವೀರಭದ್ರಪ್ಪ** | 13 |
| ತುಂತುರು | **ದಂನಾಆ** | 20 |
| ಲೇಟೆಸ್ಟ್ ನಿಶ್ಚಿತಾರ್ಥ | **ಶ್ರೀನಿವಾಸ ಕುಂಡಂತಾಯ** | 21 |
| ನಾನು ಓದಿದ ಪುಸ್ತಕ | **ಕೃಷ್ಣ ಸುಬ್ಬರಾವ್** | 26 |
| ಚಪಲ ಚಿತ್ತನ ಚಪ್ಪಲಿ.... | **ಎಚ್.ಜಿ. ಸೋಮಶೇಖರ್ ರಾವ್** | 30 |
| ಬೈಗುಳಗಳು ಬಂದರೆ.... | **ಮಾಲತಿ ಮುದಕವಿ** | 35 |
| ಹುರುಳಿಕಟ್ಟು | **ಎಚ್. ಗೋಪಾಲಕೃಷ್ಣ** | 37 |


**ಮುಖಪುಟ ವ್ಯಂಗ್ಯಚಿತ್ರ – ಜಿ.ಎಸ್. ನಾಗನಾಥ್**


*ಮುದ್ರಣ : ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ : ಒಮೇಗಾ ಲೇಸರ್‌ಟೆಕ್*
*ಪ್ರಕಾಶಕರು :* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು – 560 003. email: aparanji@hotmail.com



*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು – 560 068. ದೂರವಾಣಿ: 080-26688488. email: beluruRamamurthy@gmail.com

# ಅಪರಂಜಿ ಕಿಡಿ

● ಪ್ರಕಾಶ್



ಮೆಜೆಸ್ಟಿಕ್ ಸುತ್ತ ವಾಹನ ನಿಲುಗಡೆ ಬದಲಾವಣೆ – ಸುದ್ದಿ

**● ಅರ್ಥವಾಯಿತು !!**

★★★

ಆಪ್ತರ ಸರಣಿ ಸಭೆ; ಬಿ.ಎಸ್.ವೈ. ನಿಗೂಢ ನಡೆ – ಪತ್ರಿಕೆ

**● ಗವಾಕ್ಷಿಯಿಂದ ಬರುತ್ತಾರೋ ??**

★★★

ಕಾಂಗ್ರೆಸ್ ಕೈಯ್ಯಲ್ಲಿ ಫೇಟ್‌ಲೈನ್ ಇಲ್ಲ ಅಂತ ಅಪರಂಜಿ ಕಣಿ ಹೇಳಿದ್ದು ನಿಜವಾಯಿತು !!

★★★

ವಕೀಲರು – ಪೋಲೀಸರ ಸಂಘರ್ಷ : ಆಯೋಗ ರಚನೆ – ಸುದ್ದಿ

**● ಅಂಗೈ ಹುಣ್ಣಿಗೆ ಕನ್ನಡಿ !!**

★★★

ಪ್ರಯಾಣ ಬೇಜಾರು, ಆದರೆ ಮಗಳ ಬಲವಂತ ಅಂತ ಹಿರಿಯರು ಹೇಳಿದ್ರೆ

**● ಕಿಂಗ್‌ಫಿಷರ್‌ನಲ್ಲಿ ಬುಕ್ ಮಾಡಿ ಅಂದರಂತೆ !!**

★★★

## *ಯುಗಾದಿ ಸುಸುದ್ದಿ*

ಅಪರಂಜಿ ಪತ್ರಿಕೆಯ ಮೊದಲ ಸಂಚಿಕೆಯಿಂದ ಮೊದಲುಗೊಂಡು ಕಳೆದ ಇಪ್ಪತ್ತೆಂಟು ವರ್ಷಗಳ ಎಲ್ಲ ಸಂಚಿಕೆಗಳನ್ನೂ ಸಿ.ಡಿ. ರೂಪದಲ್ಲಿ ಹೊರತಂದಿದ್ದೇವೆ.

ಬೆಂಗಳೂರಿನ ಭಾರತೀಯ ವಿದ್ಯಾಭವನದವರ ಈ ಸ್ತುತ್ಯ ಪ್ರಯತ್ನಕ್ಕೆ ಅಪರಂಜಿ ಆಭಾರಿ. ಕೊರವಂಜಿಯ ಸಿ.ಡಿ. ಜೊತೆಜೊತೆಗೆ ಈ ಅಪರಂಜಿ ಸಿ.ಡಿ.ಗಳು ಭಾರತೀಯ ವಿದ್ಯಾಭವನದ ಅಂಗಳದಲ್ಲಿರುವ ಪ್ರಿಸಂ ಪುಸ್ತಕ ಭಂಡಾರದಲ್ಲಿ ದೊರಕುತ್ತವೆ.

# ನಮ್ಮ ನಿಮ್ಮಲ್ಲಿ

ಗೆಳೆಯ ರಾಮಾನುಜ ನಮ್ಮನ್ನೆಲ್ಲಾ ಗರ್ವಾಲೆ ಶಾಲೆಯಲ್ಲಿ ನಡೆಯಲಿದ್ದ ಭವನೋತ್ಸವಕ್ಕೆ ಆಹ್ವಾನಿಸಿದಾಗ ''ಇದೇನಿದು ಈ ಗರ್ವಾಲೆ? ಯಾವುದೋ ಕಾರ್ಪೊರೇಟ್ ಸಂಸ್ಥೆಯ ಸಹಾಯದಿಂದ ನಡೆಸುತ್ತಿರುವ ಶಾಲೆ ಇರಬೇಕು'' ಅಂದುಕೊಂಡೆ. ಅಲ್ಲಿಗೆ ಹೋದಮೇಲೆ ಅದು ಮಡಿಕೇರಿಗೆ ಸಮೀಪದಲ್ಲಿರುವ ಒಂದು ಹಳ್ಳಿಯ ಹೆಸರೆಂಬ ಅಂಶ ತಿಳಿಯಿತು. ಪ್ರಕೃತಿಯ ರಮಣೀಯತೆಗೆ ಈ ಶಾಲೆಯ ಪರಿಸರ ನಿಜಕ್ಕೂ ಹೆಸರುವಾಸಿ. ಅಪರಂಜಿ ಬಳಗದ ನಮ್ಮೆಲ್ಲರ ಜೊತೆಗೆ ಶ್ರೀಮತಿ ವಾಣಿ ಸುರೇಶ್ (ಅಮೆರಿಕಾ ಪತ್ರ) ಮತ್ತು ಅವರ ಪತಿ ಸುರೇಶ್ ಬಂದಿದ್ದರು. ಅಂದು ಸಂಜೆ ನಡೆದ ಉತ್ಸವದಲ್ಲಿ ನಾವೆಲ್ಲಾ ಸೇರಿ ಒಂದು ನಗೆ ಕಾರ್ಯಕ್ರಮ ಕೊಟ್ಟೆವು. ಇದರ ಅಂಗವಾಗಿ ಶ್ರೀಮತಿ ವಾಣಿ ಅವರು ಹಳೆಯ ಹಿಂದಿ ಸಿನಿಮಾ ಹಾಡೊಂದನ್ನು ಕನ್ನಡಕ್ಕೆ ಭಾಷಾಂತರಗೊಳಿಸಿ ಅದನ್ನು ಬಹು ಸುಶ್ರಾವ್ಯವಾಗಿ ಹಾಡಿದರು. ಹೆಚ್ಚುಗಾರಿಕೆ ಅಂದರೆ ಕನ್ನಡ ಹಾಡನ್ನೂ ಸಹಾ ಮೂಲ ಹಿಂದಿ ಹಾಡಿನ ರಾಗದಲ್ಲೇ ಹಾಡಿದ್ದು. ಸಮಾರಂಭ ಮುಗಿದ ಮೇಲೆ ಶಾಲೆಯ ಅಂಗಳದಲ್ಲಿ ಹಚ್ಚಿದ್ದ ಬೆಂಕಿಯ ಸುತ್ತ ಕುಳಿತು ಹರಟಿದ ಕ್ಷಣಗಳು ಅವಿಸ್ಮರಣೀಯ. ಆ ಸಂಜೆ ವಾಣಿ ರಚಿಸಿ ಹಾಡಿದ ಆ ಹಿಂದಿ ಹಾಡಿನ ಮೂಲ ಸಾಹಿತ್ಯ ಹಾಗೂ ಭಾಷಾಂತರಗಳನ್ನ ಇಲ್ಲಿ ನೀಡಿದ್ದೇನೆ. ಹಾಡು ಹಾಡಿಕೊಂಡು ಸಂತಸಿಸುವ ಖುಷಿವಂತರು ಅಗತ್ಯವಾಗಿ ಈ ಸರಕನ್ನು ತಮ್ಮ ಬಚ್ಚಲುಮನೆ ಗಾಯನಕ್ಕೆ ಬಳಸಿಕೊಳ್ಳಿ.

**- ಶಿವಕುಮಾರ್**

# ಆಪಕೀ ನಜರೋನೆ ಸಮ್‌ಝು
# ನಿಮ್ಮ ಕಣ್ಗಳ ಅರಿವು

ಆಪ್ ಕೀ ನಜರೋನೆ ಸಮ್‌ಝು ಪ್ಯಾರ್ ಕೇ ಕಾಬಿಲ್ ಮುಝೆ
ದಿಲ್ ಕಿ ಐ ಧಢಕನ್ ಬೆಹರ್ ಜಾ ಮಿಲ್ ಗಯೀ ಮನ್‌ಝಿಲ್ ಮುಝೆ
ಆಪಕೀ ನಜರೋನೆ ಸಮ್‌ಝು

ನಿಮ್ಮ ಕಣ್ಗಳ ಅರಿವು ಇಂತು, ನಾನು ಒಲವಿಗೆ ಅರ್ಹಳು
ಎದೆಯ ಕಾತರ ನಿಲ್ಲಲೀಗ ದಡವ ಸೇರಿಹೆನಿಂದು ನಾ
ನಿಮ್ಮ ಕಣ್ಗಳ ಅರಿವು ಇಂತು

ಜೀ ಹಮೇ ಮನ್‌ಜೂರ್ ಹೈ ಆಪಕಾ ಏ ಫೈಸಲಾ
ಕೆಹ ರಹೀ ಹೈ ಹರ್ ನಜರ್ ಬಂದಪರ್‌ವರ್ ಶುಕರಿಯಾ
ದೋ ಜಹಾನ್ ಕಿ ಆಜ್ ಖುಶಿಯಾ ಹೋಗಯಿ ಹಾಸಿಲ್ ಮುಝೆ
ಆಪಕೀ ನಜರೋನೆ ಸಮ್‌ಝು

ಈ ನಿಮ್ಮೀ ನಿರ್ಧಾರವೆನ್ನ ಮನಸಿನಾಳಕೆ ಒಪ್ಪಿಗೆ
ನನ್ನ ಎಲ್ಲ ಕುಡಿಗಣ್ಣ ನೋಟ ನಮಿಸುತಿವೆ ಆ ದೇವನ
ನನ್ನ ಜೀವನ ಬೆಸೆದುಕೊಂಡಿರಿ ನಗುತ ನಿಮ್ಮೊಳು ಇಂದಿಗೆ
ಎದೆಯ ಕಾತರ ನಿಲ್ಲಲೀಗ ದಡವ ಸೇರಿಹೆನಿಂದು ನಾ
ನಿಮ್ಮ ಕಣ್ಗಳ ಅರಿವು ಇಂತು

ಆಪ್‌ಕೀ ಮನ್‌ಝಿಲ್ ಹೂ ಮೇ ಮೇರಿ ಮನ್‌ಝಿಲ್ ಆಪ್ ಹೈ
ಕ್ಯಾ ಮೇ ತೂಫಾನ್ ಸೇ ಡರೂ ಮೇರೆ ಸಾಹಿಲ್ ಆಪ್ ಹೈ
ಕೋಯಿ ತೂಫಾನೋಂಸೆ ಕೆಹದೇ ಮಿಲ್ ಗಯೀ ಸಾಹಿಲ್ ಮುಝೆ
ಆಪಕೀ ನಜರೋನೆ ಸಮ್‌ಝು

ನಿಮ್ಮ ಗುರಿಯದು ಈಗ ನಾನು, ನನ್ನ ಗುರಿ ನೀವಲ್ಲವೇ
ಮಳೆಗೆ ಸಿಡಿಲಿಗೆ ಅಂಜಲೇಕೆ ನಿಮ್ಮ ಆಸರೆ ಎನಗಿದೆ
ದಡವ ಸೇರಿಹೆನೆಂದು ತಿಳಿಸಿರಿ ಆರ್ಭಟದ ಆ ಸಿಡಿಲಿಗೆ
ಎದೆಯ ಕಾತರ ನಿಲ್ಲಲೀಗ ದಡವ ಸೇರಿಹೆನಿಂದು ನಾ
ನಿಮ್ಮ ಕಣ್ಗಳ ಅರಿವು ಇಂತು

ಪಡ್ ಗಯೀ ದಿಲ್ ಪರ್ ಮೇರೀ ಆಪ್ ಕೀ ಪರ್‌ಛಾಯಿಯಾ
ಹರೇ ತರಫ್ ಬಜನೇ ಲಗೀ ಸೈಕಡೋಂ ಶಹನಾಯಿಯಾ
ಹನ್‌ಸಕೇ ಅಪನೀ ಜಿಂದಗೀ ಮೇ ಕರ್ ಲಿಯಾ ಷಾಮಿಲ್ ಮುಝೆ
ಆಪಕೀ ನಜರೋನೆ ಸಮ್‌ಝು...

ನನ್ನ ಈ ಹೃದಯದೆಡೆಯಲಿ ನಿಮ್ಮ ನೆರಳದು ಹರಡಿದೆ
ನೂರು ಮುರಳಿಯ ಮಧುರ ಗಾನವು ಆಗಸವನೆ ತುಂಬಿದೆ
ನನ್ನ ಪಾಲಿಗೆ ಇಂದು ಸಂದಿದೆ ಎರಡು ಜಗಗಳ ಸಂತಸ
ನಿಮ್ಮ ಕಣ್ಗಳ ಅರಿವು ಇಂತು, ನಾನು ಒಲವಿಗೆ ಅರ್ಹಳು
ಎದೆಯ ಕಾತರ ನಿಲ್ಲಲೀಗ ದಡವ ಸೇರಿಹೆನಿಂದು ನಾ
ನಿಮ್ಮ ಕಣ್ಗಳ ಅರಿವು ಇಂತು

# ಮಠ.....ಮಠ....ಮಧ್ಯಾಹ್ನ

**- ಗಣೇಶ ಹೆಗ್ಗಡೆ**

**ರೀ....** ನಿಮ್ಮ ಫ್ರೆಂಡ್ ಕಿಟ್ಟಿ ಫೋನ್ ಮಾಡಿದ್ದಾರೆ, ಅಲ್ಲೇ ರಿಸೀವ್ ಮಾಡಿ ಎಂದು ಇವಳು ಅಡುಗೆ ಮನೆಯಿಂದ ಕೂಗಿದಾಗ ದಡ ಬಡ ಎದ್ದೆ. ಕಿಟ್ಟಿಯದು ಮೊದಲೇ ಕಾಯಿನ್ ಬೂತ್ ಕೇಸು, ತಡ ಮಾಡಿದಷ್ಟು ಚಿಲ್ಲರೆ ಪ್ರಾಬ್ಲಮ್ ಅವನದು. ಗಡಿಯಾರ ನೋಡಿಕೊಂಡೆ ಮಧ್ಯಾಹ್ನ 11 ಗಂಟೆ.

ಗುರೂ, ಟೀವಿ ಆನ್ ಮಾಡಿದ್ದೀಯ? ಕರೆಂಟ್ ಇದೆ ತಾನೆ? ಇನ್ನು ಹತ್ತು ನಿಮಿಷದಲ್ಲಿ ಅಲ್ಲಿ ಇರುತ್ತೀನಿ. ಎಂದ ಕಿಟ್ಟಿ

ಯಾಕ್ಲೆ? ಏನ್ ಸಮಾಚಾರ?

'ಅಯ್ಯೋ, ನಿನಗೆ ಸೀರಿಯಸ್‌ನೆಸ್ಸೇ ಇಲ್ಲ, ಇವತ್ತು ಬೈಎಲೆಕ್ಷನ್ ರಿಸಲ್ಟು.... ಜೊತೆಗೆ ಬಜೆಟ್ ಮಂಡನೆ ಬೇರೆ.....'

**ಮೋಕ್ಷ ಮಾರ್ಗದಲ್ಲಿರಬೇಕಾದ ಮಠಾಧೀಶರುಗಳು ಕಪಾಳ ಮೋಕ್ಷದ ಹಾದಿ ಹಿಡಿಯುವುದನ್ನು ನಾವು ಟೀವಿಯಲ್ಲಿ ಮುಂದೆ ಕಾಣಬಹುದು!**

ರಿಸೀವರ್ ಕುಕ್ಕಿದ ಶಬ್ಧ ಕೇಳಿಸಿತು. ಹಾಲಿಗೆ ಬಂದು ಟೀವಿ ಆನ್ ಮಾಡಿದೆ. ಕೈ ಮುಂದಿತ್ತು ಕಮಲ ಮತ್ತಷ್ಟು ಕೆಸರನ್ನು ತುಂಬಿಕೊಂಡಿತ್ತು. ನಮ್ಮ ಕಿಟ್ಟಿ ಬರುವುದರೊಳಗೆ ನಿಮಗೆ ಅವನ ಸಂಕ್ಷಿಪ್ತ ಪರಿಚಯ ಮಾಡಿಕೊಡಬೇಕು. ನಾವಿಬ್ಬರೂ ಬಾಲ್ಯದಿಂದಲೂ ಗಳಸ್ಯ ಕಂಠಸ್ಯ, ಕಿಟ್ಟಿ ಬಡ ಮಾಸ್ತರ ಕುಟುಂಬದಿಂದ ಬಂದವನು. ಬಡತನವನ್ನು ಬೆನ್ನಿಗೇ ಕಟ್ಟಿಕೊಂಡು ಇವತ್ತಿಗೂ ಹಾಗೇ ಬದುಕುತ್ತಿರುವವನು. ಅವನ ಪಾಲಿಗೆ ನಾನು ಪ್ರಣವ್ ಮುಖರ್ಜಿ. ಸ್ವಾಭಿಮಾನಿ ಕಿಟ್ಟಿ ಸಂಬಳದ ದಿನ ತಪ್ಪದೆ ನನ್ನ ಸಾಲದ ಬಾಬ್ತು ಚುಕ್ತ ಮಾಡಿ ಅಂದು ಸಂಜೆಯೇ ಮರು ಸಾಲಕ್ಕೆ ಅರ್ಜಿ ಗುಜರಾಯಿಸಿಕೊಳ್ಳುವ ಸಜ್ಜನಿಕೆಯ ಮೂರ್ತಿ. ಈಗ ಎಲ್.ಸಿ.ಡಿ.....ಎಲ್.ಇ.ಡಿ. ಟೀವಿ ಯುಗ ಪ್ರಾರಂಭವಾಗಿದ್ದರೂ ಇನ್ನೂ ಬ್ಲಾಕ್ ಅಂಡ್ ವೈಟ್ ಯುಗದಲ್ಲೇ ಕಾಲಹರಣ ಮಾಡುತ್ತಿರುವ ದುರದೃಷ್ಟವಂತ. ಮೊನ್ನೆ ಮಾರ್ಕೆಟ್‌ನಲ್ಲಿ ಅಚಾನಕ್ ಆಗಿ ಸಿಕ್ಕ ಕಿಟ್ಟಿ,

ಗುರೂ...... ನನ್ನ ಟೀವಿ ಯಾಕೋ ವಿಧಾನಸೌಧವಾಗಿದೆ ಎಂದು ಒಗಟಾಗಿ ಹೇಳಿದ.

ಹಾಗೆಂದ್ರೇನ್ಲೆ? ಎಂದು ತಬ್ಬಿಬ್ಬಾಗಿ ಕೇಳಿದಾಗ ಎರಡಕ್ಕೂ ಸ್ಪೀಕರ್ ಪ್ರಾಬ್ಲಮ್ಮು ಎಂದು ಗೊಳ್ಳನೆ ನಕ್ಕ.

ನಾನು, ಇವಳು ಡೆಲ್ಲಿಯಲ್ಲಿದ್ದ ಮಗಳ ಮನೆಗೆ ಹೋಗಬೇಕಾದ ಸಂದರ್ಭ ಬಂದಾಗ ಕಿಟ್ಟಿ ನೆನಪಿಗೆ ಬಂದು ನೀನೂ ನಮ್ ಜೊತೆ ಬಾ. ಪ್ಲೇನಿನಲ್ಲಿ ಹೋಗಿ ಬರೋಣ. ನಿನ್ನ ಚಾರ್ಜು ನಾನೇ ಭರಿಸ್ತೀನಿ, ನಿನ್ನ ಕಂಪೆನಿ ನನಗೆ ಮುಖ್ಯ ಎಂದು ಬೇಡಿಕೊಂಡಿದ್ದೆ.

ಬೇಡ ಗುರೂ, ಎಲ್ಲ ಬೆಲೆಗಳು ಗಗನಕ್ಕೆ ಹಾರ್ತಾ ಇದೆ ಅಂತಾ ನೀನೇ ಹೇಳ್ತಾ ಇರ್ತಿ. ಈ ಬೆಲೆಗಳ ಮಧ್ಯೆ ಗಗನದಲ್ಲಿ ನಾನೆಲ್ಲಾದ್ರು ಕಳೆದು ಹೋದ್ರೆ ನನ್ನ ಹುಡುಕೋದು ಬಹಳ ಕಷ್ಟ ಎಂದು ಪಂಚೆಯ ತುದಿಯಿಂದ ಯಾರಿಗೂ ಗೊತ್ತಾಗದ ಹಾಗೆ ಕಣ್ಣೊರೆಸಿಕೊಂಡಿದ್ದ. ಈಗ ನಮ್ಮಿಬ್ಬರದ್ದೂ ರಿಟೈರ್ಡ್ ಕೇಸು. ಆದರೆ ಸ್ನೇಹಕ್ಕೆ ರಿಟೈರ್ಡೇ? ಅದಕ್ಕೆ ಸಾವಿಲ್ಲ, ಅಂತ್ಯವಿಲ್ಲ. ಗೇಟು ಶಬ್ಧವಾಯಿತು. ಕಿಟ್ಟಿ ಬಂದ. ಒಳಗೆ ಬನ್ನಿ ಎಂದು ಇವಳು ತುಂಬು ಹೃದಯದಿಂದ ಸ್ವಾಗತಿಸಿದಳು. ಇವಳಿಗೆ ಕಿಟ್ಟಿ ಎಂದರೆ ವಿಶೇಷ ಅಭಿಮಾನ. ಕುರ್ಚಿ ಎಳೆದುಕೊಂಡ ಕಿಟ್ಟಿ ಮುಖ್ಯಮಂತ್ರಿಗಳ ಬಜೆಟ್ ಭಾಷಣ ನೋಡಿ,

ಈ ಬಜೆಟ್ ಮಂಡನೆ ನಡೀತಿರೋದು ವಿಧಾನಸೌಧದಲ್ಲೋ ಅಥವಾ ರೆಸಾರ್ಟಿನಲ್ಲೋ? ಎಂದು ಅನುಮಾನಗೊಂಡು ಕೇಳಿದ. ಯಾವ ಶಾಸಕರ ಕೈಯಲ್ಲೂ ಮೊಬೈಲೇ ಕಾಣಿಸುತ್ತಿಲ್ಲ ಅಂತಂದ ಮೇಲೆ ಇದು ವಿಧಾನಸಭೆಯೇ ಎಂದು ಸಮಜಾಯಿಷಿ ನೀಡಿದೆ. ಕೃಷಿ ಬಜೆಟ್ ನಂತರ ವಿವಿಧ ಇಲಾಖೆಗಳಿಗೆ ಮಂಜೂರಾಗುವ ಅನುದಾನ ಘೋಷಣೆ ಆರಂಭವಾಗಿತ್ತು. ಪ್ರತಿ ಇಲಾಖೆಗೂ ನೂರರಿಂದ.....ಸಾವಿರ ಕೋಟಿ ಮೀಸಲು. ಈಗ ಜಾತಿವಾರು ಮಠಗಳ ಸರದಿ ಬಂದಿತು.

ಸಾವಿರ ಕೋಟಿ....ಎಂದರೆ ಎಷ್ಟು ಸೊನ್ನೆ ಗುರೂ? ಎಂದ ಕಿಟ್ಟಿ, ನನಗೂ ಯಾಕೋ ಕನ್‌ಫ್ಯೂಸ್ ಆಯಿತು. ಇವಳೂ ಲೆಕ್ಕದಲ್ಲಿ ವೀಕು. ಅವಮಾನವಾದೀತೆಂದು ಹೆದರಿ ಕಾಫಿ ತರುವ ನೆಪದಲ್ಲಿ ಮೆಲ್ಲನೆ ಅಡುಗೆ ಕೋಣೆಗೆ ಜಾರಿಕೊಂಡಳು. ಮಠ, ಮಾನ್ಯಗಳಿಗೆ ಕೋಟಿಗಟ್ಟಲೆ ನೆರವಿನ ವಾಗ್ದಾನ ಕೇಳಿದ ಕಿಟ್ಟಿ, ನಮ್ಮಂತಹ ಬಡವರ ಬಗ್ಗೆ ಸುದ್ದಿಯೇ ಇಲ್ಲವಲ್ಲ ಎಂದು ಪೇಚಾಡಿಕೊಂಡು ಈ ಮಠಗಳಿಗೂ ಸರ್ಕಾರಕ್ಕೂ ಏನು ಕನೆಕ್ಷನ್? ಎಂದು ಮುಗ್ಧವಾಗಿ ಪ್ರಶ್ನಿಸಿದ.

ಅಯ್ಯೋ ಪೆದ್ದೆ. ಈ ಸರ್ಕಾರಗಳ ಮೌತ್ ಪೀಸ್ ಈ ಮಠಗಳು. ಎಂ.ಎಲ್.ಎ.ಗಳು, ಮಂತ್ರಿಗಳು ಒಂಥರಾ ಟೀವಿ ಚಾನೆಲ್‌ಗಳಿದ್ದ ಹಾಗೆ. ಈ ಚಾನೆಲ್‌ಗಳ ರಿಮೋಟ್ ಕಂಟ್ರೋಲ್ ಮಠಾಧೀಶರ ಕೈಯಲ್ಲೇ. ಹಿಂದೆ ಒಂದು ಕಾಲವಿತ್ತು, ಮಠದ ಸ್ವಾಮಿಗಳು ಜೋಳಿಗೆ ಹಾಕಿಕೊಂಡು ಹಳ್ಳಿ-ಹಳ್ಳಿಯಲ್ಲಿ ಪಾದಯಾತ್ರೆ ಮಾಡಿ, ಭಿಕ್ಷೆ ಎತ್ತಿ, ಆಶ್ರಯದಾತ ಬಡ ವಿದ್ಯಾರ್ಥಿಗಳಿಗೆ ದಾರಿದೀಪವಾಗಿದ್ದರು. ಜ್ಞಾಪಿಸಿಕೋ, ನೀನೂ ಹತ್ತು ವರ್ಷ ಅಂತಹ ಮಠಗಳಿಂದ ಮರುಹುಟ್ಟು ಪಡೆದುಕೊಂಡು ಬಂದವನು. ಈಗಿನ ಪರಿಸ್ಥಿತಿ ತದ್ವಿರುದ್ಧ. ಕಾಲ ಹೀಗೆ ಮುಂದುವರೆದರೆ ಮುಂದೆ ಮಠಾಧೀಶರುಗಳೇ ರಾಜಕಾರಣಕ್ಕೆ ಸಕ್ರಿಯವಾಗಿ ಧುಮುಕಿ ಎಲೆಕ್ಷನ್ನಿನಲ್ಲಿ ಗೆದ್ದು ವಿಧಾನಸೌಧದಲ್ಲಿ ಕುಳಿತುಕೊಳ್ಳುವ ಪರಿಸ್ಥಿತಿಯೂ ಬರಬಹುದು.

ನನ್ನ ವಿವರಣೆ ಕೇಳಿ ಬೆಚ್ಚಿ ಬಿದ್ದ ಕಿಟ್ಟಿ ಹಾಗಾದ್ರೆ ಮುಂದಿನ ದಿನಗಳಲ್ಲಿ ವಿಧಾನ ಮಂಡಲದ ಕಲಾಪಗಳು ಸ್ವಾರಸ್ಯವಾಗಿರುತ್ತೆ ಅನ್ನು ಅಂದ.

ಆಗ್ಲೂ....ಈಗ್ಲೂ ಹೆಚ್ಚಿನ ವ್ಯತ್ಯಾಸವಿರುವುದಿಲ್ಲ. ಚರ್ಚೆಗಳಲ್ಲಿ ಜಾತಿವಾರು ಜಗಳ ನಡೆದು, ಮೋಕ್ಷಮಾರ್ಗದಲ್ಲಿರಬೇಕಾದ ಮಠಾಧೀಶರುಗಳು ಕಪಾಳ ಮೋಕ್ಷದ ಹಾದಿ ಹಿಡಿಯುವುದನ್ನು ನಾವು ಟೀವಿಯಲ್ಲಿ ಮುಂದೆ ಕಾಣಬಹುದು ಎಂದೆ.

ತತ್‍ಕ್ಷಣ ಟೀವಿ ಆರಿಸು. ನಾನು ಮನೆಗೆ ಹೋಗುತ್ತೇನೆ ಎಂದವನೆ ಕಿಟ್ಟಿ ಆತಂಕಗೊಂಡು ಎದ್ದ.

ರೀ ಅವರಿಗ್ಯಾಕ್ರಿ ಮಠಗಳ ಸುದ್ದಿ ತೆಗೆದು ಹೀಗೆ ಹೆದರಿಸ್ತಾ ಇದೀರಿ. ಮಟ.... ಮಟ ಮಧ್ಯಾಹ್ನ ಊಟ ಮಾಡಿಕೊಂಡು ಹೋಗಿ ಎಂದು ಹೇಳಿ ಆಜ್ಞಾಪಿಸಿದಳು ಇವಳು.

ಮಟ...ಮಟ... ಮಧ್ಯಾಹ್ನಕ್ಕೆ ಹೆದರುವ ಆಸಾಮಿ ಅವನಲ್ಲ, ಅವನು ಮಲ್ಲಾಡಿಹಳ್ಳಿಯ ಪ್ರಾಡಕ್ಟ್, ಆದರೆ ಈ ಮಠ.....ಮಠ..... ಮಧ್ಯಾಹ್ನದ ಬಜೆಟ್ ಘಟನಾವಳಿಗಳಿಗೆ ಭಯಭೀತಗೊಂಡನೆ? ಎಂಬ ಅನುಮಾನ ನಿಜಕ್ಕೂ ನನ್ನನ್ನು ಕಾಡಿತು!

❖

---

## ರೈಮ್

| | |
|---|---|
| *ಜಾನಿ ಜಾನಿ?* | *ಬಿಪಿ ಷುಗರ್?* |
| *...ಯೆಸ್ ಪಪ್ಪ* | *ಹೈ ಪಪ್ಪ* |
| *ಕಾರ್ಪೊರೇಟ್ ಜಾಬ್?* | *ವಾರ್ಷಿಕ ಬೋನಸ್?* |
| *...ಯೆಸ್ ಪಪ್ಪ* | *ಜೋಕ್ ಪಪ್ಪ* |
| *ತುಂಬಾ ಟೆನ್ಷನ್?* | *ಇನ್‍ಕ್ರಿಮೆಂಟ್?* |
| *...ಯೆಸ್ ಪಪ್ಪ* | *ಲೊ ಪಪ್ಪ* |
| *ತುಂಬಾ ಕೆಲಸ?* | *ಪರ್ಸನಲ್ ಲೈಫ್?* |
| *...ಯೆಸ್ ಪಪ್ಪ* | *ಹೋಯಿತು ಪಪ್ಪ* |
| *ಫ್ಯಾಮಿಲಿ ಲೈಫ್?* | *ಪ್ರಮೋಷನ್?* |
| *ನೊ ಪಪ್ಪ* | *ಹ್ಹ ಹ್ಹ ಹ್ಹ....* |

– ಶುಬ್ಜ

# ‘ಸಕಾಲ’ಕ್ಕೆ ಸಖತ್ ತಯಾರಿ!

**– ಇ.ಆರ್. ರಾಮಚಂದ್ರನ್**

**ನಮ್ಮ** ಅಜ್ಜಿ ಅವರ ಪಟಾಲಮ್ ಎಕ್ಸ್‌ಪ್ರೆಸ್ ಜತೆ ಮಾಮೂಲಿನಂತೆ ಹರಿಕಥೆ ಕೇಳೊದಕ್ಕೆ ಹೊರಟರು.

ಆ ದಿನ ಅಚ್ಯುತದಾಸರು ಕರ್ಣನ ಅಪಾರವಾದ ದಾನ ಮಾಡುವ ವ್ಯಕ್ತಿತ್ವವನ್ನು ವಿವರಿಸುತ್ತಿದ್ದರು.

ಅಜ್ಜಿ ಗ್ರೂಪ್ ಕೊನೆಯಲ್ಲಿ ಕೂತಿತ್ತು.

‘ಬ್ರಾಹ್ಮಣನ ವೇಷದಲ್ಲಿ ಬಂದ ಇಂದ್ರನಿಗೆ ಕವಚ ಮತ್ತು ಕರ್ಣಕುಂಡಲವನ್ನೇ ಕಿತ್ತು ಕೊಟ್ಟ ಕರ್ಣ, ನಿಜವಾಗಿಯೂ ದಾನ ಶೂರ ಕರ್ಣ. ದೇಹದ ಒಂದು ಭಾಗವನ್ನೇ ದಾನ ಮಾಡಿದ.’

ಇನ್ನೆರೆಡು ವರ್ಷಕ್ಕೆ ರಿಟೈರಾಗಲಿರುವ, ಗವರ್ನಮೆಂಟ್ ಹಾಸ್ಪಟಲಿನ ಸೀನಿಯರ್ ನರ್ಸ್ ಗಾಯಿತ್ರಿ ಪಿಸುಗುಟ್ಟಿದರು. ‘ನಮ್ಮ ಹಾಸ್ಪಟಲ್ಗೆ ಸಿ.ಎಂ. ಆಫೀಸಿನಿಂದ ಸರ್ಕ್ಯುಲರ್ ಬಂದಿದೆ. ಎಲ್ಲಾ ಸಕಾಲಕ್ಕೆ ಮಾಡ್ಬೇಕೂ.. ಇಲ್ದಿದ್ರೆ ಪ್ರಮೋಷನ್ ಗೋತ ಅಂತೆ. ನಮ್ಮ ನೆಫ್ರಾಲಜಿ ಡಿಪಾರ್ಟಮೆಂಟ್ನಲ್ಲಿರೋ ಡಾಕ್ಟರುಗಳು ಬಡವ್ರ ಪೇಷಂಟ್ಗಳಿಂದ ಏನೋ ಸುಳ್ಳು ಕಾಯಿಲೆ ಹೇಳಿ ಕಿಡ್ನಿ ಆಪರೇಷನ್ಮಾಡಿ, ಅರಬ್ಬರಿಗೆ, ಸಿಂಗಪೂರ್ನ ಭಾರೀ ಕುಳ ಪೇಷಂಟುಗಳಿಗೆ ಹತ್ತು ಹದಿನೈದು ಲಕ್ಷಕ್ಕೆ ಮಾರ್ತಾ ಇದಾರೆ. ಕಿಡ್ನಿಗೆ ಬಹಳ ಡಿಮ್ಯಾಂಡ್, ವೈಟಿಂಗ್ ಲಿಸ್ಟ್ ಬಾಲದ ಹಾಗೆ ಬೆಳದಿದೆ. ಎಲ್ಲಾ ಸಕಾಲಕ್ಕೆ ಆಗ್ಬೇಕೂಂತ, ಸಿ.ಎಂ. ಪ್ರೆಶರ್ ಹಾಕಿರೋದ್ರಿಂದ ಇನ್ನಷ್ಟು ಸೇಲ್ಸ್ಮನ್ನುಗಳು ಹಾಕಿ, ಹಳ್ಳಿಹಳ್ಳಿಯಿಂದಲೂ ಪೇಷಂಟ್‌ಗಳ್ನ ಹೊಡಕೊಂಡ್ಬಂದು ಅವರಿಗೆಲ್ಲಾ ತಲಾ 2000 ರೂ. ಕ್ಯಾಷ್, ಜೊತೆಗೆ ಸ್ಯಾಮ್ಸಂಗ್ ಗೆಲಾಕ್ಸಿ ಮೊಬೈಲ್ ಮತ್ತು ದರ್ಶನ್ ಪಿಕ್ಚರ್ಗೆ 10 ಬಿಟ್ಟಿ ಟಿಕೆಟ್ ಕೊಡ್ತಾ ಇದಾರೆ.’

> **ಸಿ.ಎಂ. ನಿಂದ ಸರ್ಕ್ಯುಲರ್ ಬಂದಿದೆ. ಎಲ್ಲಾ ಸಕಾಲಕ್ಕೆ ಸರಿಯಾಗಿ ಮಾಡ್ಬೇಕೂಂತ ಅಂದ್ರೆ ಇವರೇನು ಮಾಡಲಿಕ್ಕೆ ಹೊರಟಿದ್ದಾರೆ!**

‘ಅಯ್ಯೋ ರಾಮ!’

ಮುಂದೆ ಅಚ್ಯುತದಾಸರು, ಕೃಷ್ಣ ಅಕ್ಷಯ ಪಾತ್ರೆಯಲ್ಲಿ ಉಳಿದಿದ್ದ ಒಂದು ಅಗಳನ್ನು ತಿಂದು, ಮೂಗಿನ ತುದಿಯಲ್ಲೇ ಕೋಪವಿರುವ ದೂರ್ವಾಸ ಮುನಿ ಮತ್ತು ಅವರ ಎಲ್ಲಾ ಶಿಷ್ಯವೃಂದದ ಹಸಿವೆಯನ್ನು ಒಂದು ಕ್ಷಣದಲ್ಲಿ ಹೋಗಿಸಿದ್ದನ್ನು ವಿವರಿಸುತ್ತಿದ್ದರು. ಅತಿಥಿ ಸತ್ಕಾರ ಮಾಡಲಾಗದೆ ದ್ರೌಪದಿ ದೂರ್ವಾಸನ ಕೋಪಕ್ಕೆ ಒಳಗಾಗುವ ಸಂಭವ ಉಂಟಾಗುವ ಮೊದಲೇ ಕೃಷ್ಣ ಅವಳನ್ನು ಹೇಗೆ ಕಾಪಾಡಿದ ಅಂತ ಹಾಡಿ ಹೊಗಳಿದರು.

ದಿನಸಿ ಅಂಗಡಿ ದಮಯಂತಿ ಸಣ್ಣದನಿಯಲ್ಲಿ ಶುರು ಮಾಡಿದರು.

‘ಇದು ಕೇಳ್ತಿದ್ಹಂಗೆ ಜ್ಞಾಪಕ ಬಂತು.... ಮೊನ್ನೆ ನೋಡಿ..... ರಾತ್ರಿ ಹತ್ತು ಘಂಟೆ ಸಮಯ. ಯಾರಿಗೋ ಹೋಗಬೇಕಾಗಿದ್ದ ಎಸ್‌ಎಮ್‌ಎಸ್ ನಮ್ಮೆಜಮಾನ್ರ ಮೊಬೈಲ್ಗೆ ಬಂತು. ಅದರಲ್ಲಿ

ಸಿ.ಎಂ.ನಿಂದ ನಮಗೆ ಸರ್ಕ್ಯುಲರ್ ಬಂದಿದೆ ಎಲ್ಲಾ ಸಕಾಲಕ್ಕೆ ಸರಿಯಾಗಿ ಮಾಡ್ಬೇಕೂಂತ. ನಿಮ್ಮಿಂದ ಸೋನಾ ಮಸೂರಿಗೆ ಬೆರಸಬೇಕಾದ ಕಲ್ಲಿನ ಚೂರು ಈ ಸರ್ತಿ ಕಡಿಮೆ ಬಂದಿದೆ. ತುಪ್ಪಕ್ಕೆ ಬೆರಸಬೇಕಾದ ಹಂದಿ ಕೊಬ್ಬನ್ನೂ ಕಡಿಮೆ ಕಳಿಸಿದ್ದೀರಿ... ಸರ್ಫಗೆ ಮಿಕ್ಸ್ ಮಾಡ್ಬೇಕಾದ ವಿಭೂತಿ ಕೂಡ ಕಡಿಮೆ... ಎಲ್ಲಾನು ಲೇಟಾಗೂ ಕಳಿಸಿದ್ದೀರಿ... ಹೀಗಾದ್ರೆ ಹೇಗೆ? ಬೇಗ ಸಕಾಲಕ್ಕೆ ಸರಿಯಾಗಿ ಕಳಿಸ್ಕೊಡಿ ಅಂತ.'

'ಹೀಗೂ ಉಂಟೆ, ಎಲ್ಲಾ ಮೋಸ !' ಗ್ರೂಪಿನ ಕಲೆಕ್ಟೀವ್ ಉದ್ಗಾರ.

ಅಚ್ಯುತದಾಸರ ಹರಿಕಥೆ ಸಾಗಿತ್ತು.

ಮುಂದೆ ಏಕಲವ್ಯ ತನ್ನ ಮನೋ ಗುರು ದ್ರೋಣಾಚಾರ್ಯರಿಗೆ ತನ್ನ ಬೆರಳನ್ನೇ ಗುರುದಕ್ಷಿಣೆಯಾಗಿ ಕೊಟ್ಟಿದ್ದನ್ನು ಕಣ್ಣಲ್ಲಿ ನೀರು ಬರುವ ಹಾಗೆ ಹೇಳಿದರು. ಧ್ಯೇಯ ಮತ್ತು ಕರ್ತವ್ಯ ನಿಷ್ಠೆಯಿಂದ ಶಿಷ್ಯ ಏನು ಕೂಡ ಸಾಧಿಸಬಲ್ಲ ಅಂತ ಏಕಲವ್ಯ ತೋರಿಸಿಕೊಟ್ಟ ಎಂದರು.

ಯೂನಿವರ್ಸಿಟಿ ಯಮುನಾಬಾಯಿ ಪಿಸುಗುಟ್ಟಲು ಶುರು. ಅವ್ರು ಕ್ಲರ್ಕ್ ಕೆಲಸ ಮಾಡಿ ಈಗೀಗ ರಿಟೈರಾಗಿದಾರೆ.

'ನನ್ಸೊಸೆ ಹರಿಣಿ ಹಾಲ್ ಟಿಕೆಟ್ ಡಿಪಾರ್ಟಮೆಂಟ್ನಲ್ಲಿದ್ದಾಳೆ. ಮೊನ್ನೆ ಹೇಳ್ತಿದ್ದಳು... ಸಿ.ಎಂ. ಸರ್ಕ್ಯುಲರ್ ಬಂತು. ಎಲ್ಲಾ ಸಕಾಲಕ್ಕೆ ಸರಿಯಾಗಿ ಮಾಡ್ದಿದ್ರೆ ಯೂಜೀಸಿ ಸ್ಕೇಲ್ ಕೊಡಲ್ಲಾ, ಪ್ರಮೋಷನ್ನೂ ಖೋತ ಅಂತ. ಅದಕ್ಕೇ ಈ ವರ್ಷ ಕ್ಲರ್ಕುಗಳೆಲ್ಲಾ ಸೇರಿ, + ಟೂ, ಸೀಈಟಿ, ಕ್ಯಾಟ್ ಕೊಶ್ಚನ್ ಪೇಪರ್ಗಳು ಒಂದೆರೆಡು ದಿನ ಮುಂಚೆಯೇ ಸ್ಟೂಡೆಂಟ್ಗಳಿಗೆ ಸಿಕ್ಕೋಹಾಗೆ ಕೆಫೆ ಡೇ, ಬರಿಷ್ಟಾ, ಕೆಎಸ್ಸಿಎ ಮತ್ತು ಪಬ್‌ಗಳಲ್ಲಿ ಮಾರ್ತಾರಂತೆ. ಒಂದು ಪೇಪರ್ಗೆ ಐದು ಸಾವಿರ; ಫುಲ್ ಎಕ್ಸಾಮ್ದು ಐವತ್ತು ಸಾವಿರ. ಸಕಾಲಕ್ಕೆ ಎಲ್ಲೆಡೆ ಸಿಗೋಹಾಗೆ ಮಾಡ್ಬೇಕೂಂತ ಪ್ಲ್ಯಾನ್.'

'ಅಯ್ಯೋ ಶಿವನೆ!'

'ಹೌದೂರಿ! ಗ್ರೇಸ್ ಮಾರ್ಕು ಸಿಸ್ಟಮ್ನೂ ರೆಡಿ ಮಾಡೀದಾರಂತೆ ಈ ವರ್ಷ. ಐದು ಮಾರ್ಕು ಬೇಕೂಂದ್ರೆ ಐವತ್ತು ಸಾವಿರ, ಹತ್ತು ಮಾರ್ಕಿಗೆ ಒಂದು ಲಕ್ಷ, ಪೂರ್ತಿ ಪರೀಕ್ಷೆ ಪಾಸ್ಮಾಡ್ಬೇಕಂದ್ರೆ ಮೂವತ್ತು ನಲವತ್ತು ಸೈಟಂತೆ. ರೇಟೆಲ್ಲಾ ಟ್ಯಾಬ್ಯುಲೇಷನ್ ಮಾಡಾಗಿದಿಯಂತೆ.'

'ಹೀಗಾದ್ರೆ ದೇವ್ರೇ ಗತಿ!'

ಅಷ್ಟು ಹೊತ್ತಿಗೆ ಅಚ್ಯುತದಾಸರು ಅಂದಿನ ಹರಿಕಥೆ ಮುಗಿಸಿ 'ಪವಮಾನ' ಹಾಡಿ ಮಂಗಳಾರತಿ ಮಾಡಿಸಲು ಸಿದ್ಧರಾದರು. ತೀರ್ಥ ತರಲು ಸ್ವಲ್ಪ ಹೊತ್ತಾಯಿತು.

'ಗಂಗಾನದಿಯಿಂದ ಖುದ್ದಾಗಿ ತರಿಸಿದ್ದಾರೆ ಗಂಗಾಜಲ.... ಸಕಾಲಕ್ಕೆ ಹರಿದ್ವಾರದಿಂದ ಬಂದಿಳಿದಿದೆ. ಇದನ್ನು ತರಿಸಿದವರು 200 ಮೇಲ್ಪಟ್ಟು ಪಬ್ಲಿಕ್ ಸೆಕ್ಟರ್ ಆಫೀಸರುಗಳ ಹೆಸರು ದುರುಪಯೋಗ ಮಾಡಿ, ಅವರುಗಳ ಹೆಸರಿನಲ್ಲಿ ಎಸ್‌ಬಿಎಂನಿಂದ ಏಳು ಕೋಟಿ ರೂಪಾಯಿ ಹೊಡೆದಿರುವುದಾಗಿ ಪೇಪರ್ನಲ್ಲಿ ಬಂದಿದೆ. ಸಿಬಿಐ ತನಿಖೆ ಶುರುಮಾಡಿದ್ದಾರೆ' ಅಂದ್ರು ರಿಟೈರ್ಡ್ ಪೊಲೀಸ್ ಇನ್ಸ್ಪೆಕ್ಟರ್ ಹೆಂಡ್ತಿ ಪ್ರಮೀಳ.

ತಲೆಯ ತುಂಬ, ಅಚ್ಯುತದಾಸರ ಹರಿಕಥೆ ಇರ್ಲಿ, ಆಗುತ್ತಿರೋ ಸ್ಕ್ಯಾಮ್ ಪುರಾಣಗಳನ್ನು ತುಂಬಿಕೊಂಡು ಪಟಾಲಂ ಸದಸ್ಯರು ಮನೆಯ ಕಡೆ ಭಾರವಾದ ಹೆಜ್ಜೆ ಹಾಕಿದ್ರು.

# ಕುಗ್ರಾಮ ವಾಸಿಯ ನಗರವಾಸ್ತವ್ಯ

**- ಆನಂದ**

**ಆಗ** ಕುಮಾರಸ್ವಾಮಿ. ನಂತರ ಯಡ್ಯೂರಪ್ಪ. ಮೊನ್ನೆ ಮೊನ್ನೆ ರಾಹುಲ್ ಬಾಬ. ಎಲ್ಲರೂ ಗ್ರಾಮ ವಾಸ್ತವ್ಯ ಮಾಡಿದವರು. ಬೇರು ಮಟ್ಟದಲ್ಲಿರುವ ಶ್ರೀಮಾನ್ಯನ ಸ್ಥಿತಿಗತಿ ಅರಿಯಲು ಅವನ ಹಟ್ಟಿಗೇ ಹೋಗಿ ಅವನೊಡನೆ ಮಾತುಕತೆ ನಡೆಸಿ, ಉಂಡು ತಿಂದು ಮಲಗಿ ಬಂದಿದ್ದು ಸುದ್ದಿ ಮಾಡಿತು. ಅವನ ಸ್ಥಿತಿಗತಿ ಇವರಿಗೆ ಎಷ್ಟು ತಿಳಿಯಿತೋ ಗೊತ್ತಿಲ್ಲ ಆದರೆ ಇವರನ್ನು ಉಪಚರಿಸಿದವರ ಸ್ಥಿತಿಗತಿ ಮಾತ್ರ ಸುಧಾರಿಸಿಲ್ಲ ಎಂಬುದು ಮಾತ್ರ ನಿರ್ವಿವಾದ.

ಅದಿರಲಿ. ದೊಡ್ಡವರ ಗೊಡವೆ ಬೇಡ. ಅವರು ಮಡಗಿದಂತಿರಲಿ.

ಇದರ ಉಲ್ಟಾ ಸಿನಾರಿಯೊ ಕಲ್ಪಿಸಿಕೊಂಡರೆ ಹೇಗಿರುತ್ತದೆ?

ಅಂದರೆ ವಿವಿಐಪಿಗಳ ಸ್ಥಿತಿಗತಿ ಅರಿಯಲು ಶ್ರೀಸಾಮಾನ್ಯನೊಬ್ಬ ನಗರಕ್ಕೆ ಬಂದು ಅವರು ಮಾಡಿದಂತೆ ಮಾತುಕತೆ ನಡೆಸಿ, ಉಂಡು ತಿಂದು ಮಲಗಿ ಹೋದರೆ ಹೇಗಿರಬಹುದು?

**ಗುದ್ಲೆಪ್ಪ ಶಿಗಪ್ಪ ಚಗಟೇರಿ ಎಂಬಾತ ದೂರದ ಬೀದರನಿಂದ ನಗರಕ್ಕೆ ಬಂದದ್ದಾದರೂ ಏಕೆ?**

ಅದರಂತೆ ಗುದ್ಲೆಪ್ಪ ಶಿಗಪ್ಪ ಚಗಟೇರಿ ಮೊನ್ನೆ ದೂರದ ಬೀದರ್‌ನಿಂದ ಕೇವಲ 150 ಕಿ.ಮೀ. ಆಚೆ ಇರುವ ಕಲ್ಲಹಟ್ಟಿ ಎಂಬ ಕುಗ್ರಾಮದಿಂದ ಬೆಂಗಳೂರಿಗೆ ಬಂದು ಶ್ರೀಮಾನ್ಯರ ಸೇವೆಯಲ್ಲಿ ನಿರತರಾಗಿರುವ ಶ್ರೀಮಂತ ನಾಯಕರೇ ತುಂಬಿರುವ ಜಯಮಹಲ್, ಸದಾಶಿವನಗರ, ಕುಮಾರಕೃಪ ಮುಂತಾದ ಬಡಾವಣೆಗಳಲ್ಲಿ ಅಡ್ಡಾಡಿದ.

ಈ ನಮ್ಮ ನಾಯಕರ ಸಮಸ್ಯೆಗಳೇನು? ತೊಂದರೆಗಳೇನು? ಅವರು ಹೇಗೆ ಒದ್ದಾಡುತ್ತಿದ್ದಾರೆ? ಅವುಗಳ ನಿವಾರಣೆಗೆ ಸರ್ಕಾರ ಹೇಗೆ ಕಾರ್ಯಾಚರಣೆಯಲ್ಲಿ ತೊಡಗಬೇಕು? ಸರ್ಕಾರದ ಮೇಲೆ ತಾನು ಹೇಗೆ ಒತ್ತಡ ತರಬಹುದು ಎಂಬುದನ್ನು ತಿಳಿಯುವುದೇ ಅವನ ಉದ್ದೇಶವಾಗಿತ್ತು. 'ನಮ್ಮ ಸಮಸ್ಯೆಗಳನ್ನು ಆಲಿಸುವುದೇ ಅವರ ಕೆಲಸವಾಗಿ ಹೋಗಿದೆ. ಅವರ ಸಮಸ್ಯೆಗಳನ್ನು ಆಲಿಸುವವರು ಯಾರು? ಈ ನಿಟ್ಟಿನಲ್ಲಿ ನಾನು ಅಳಿಲು ಸೇವೆ ಸಲ್ಲಿಸಲು ಮುಂದಾಗಿದ್ದೇನೆ' ಎಂದವರು ಅಪರಂಜಿಗೆ ಮಾತ್ರ ನೀಡಿದ ವಿಶೇಷ ಸಂದರ್ಶನದಲ್ಲಿ ತಿಳಿಸಿದರು.

ಎಂ.ಜಿ. ರಸ್ತೆಯಿಂದ ತಮ್ಮ ಕಾಲ್ನಡಿಗೆ ಪ್ರಾರಂಭಿಸಿದ ಗು.ಶಿ. ಚಗಟೇರಿ ಮೊದಲು ಮಾಜಿ ಮುಖ್ಯ ಮಂತ್ರಿಗಳ ಮನೆಗೆ ಭೇಟಿ ನೀಡಿದರು. ಅವರನ್ನು ಆತ್ಮೀಯವಾಗಿ ಬರಮಾಡಿಕೊಂಡ

ಮಾ.ಮು.ಮ. ಅವರಿಗೆ ಫ್ರೆಶ್ ಫ್ರೂಟ್ ಜ್ಯೂಸ್ ನೀಡಿ ಅವರ ಬಾಯಾರಿಕೆಯನ್ನು ತಣಿಸಿದರು. ನಂತರ ಕಿಂಗ್ ಫಿಶರ್ ಚಿಲ್ಲ್ಡ್ ಬಿಯರ್‌ನಿಂದ ಸತ್ಕರಿಸಲು ಹೊರಟಾಗ ಚಗಟೇರಿ ಮೊದಲು ಬೇಡವೆಂದರೂ ನಂತರ ಆತಿಥೇಯರು ಮನನೊಂದಾರೆಂದು ಅದನ್ನು ಗುಟಕರಿಸುತ್ತಾ ಅವರೊಡನೆ ಅವರ ಕಷ್ಟ ಸುಖ ವಿಚಾರಿಸತೊಡಗಿದರು. ತಾವು ಲಕ್ಷ ಕೋಟಿ ರೂಪಾಯಿ ಬಜೆಟ್‌ನಿಂದ ಜನಸೇವೆ ಮಾಡಲು ಹಾತೊರೆಯುತ್ತಿದ್ದರೂ, ಅನೇಕ ಹೋಮ ಹವನ, ಹಲವಾರು ಸ್ವಾಮೀಜಿಗಳ ಆಶೀರ್ವಾದಗಳಿದ್ದರೂ, ತಮ್ಮ ಈ ಸೇವಾಸದಾನಂದ ತಮಗೆ ಇನ್ನೂ ದೊರೆಯದ ಬಗ್ಗೆ ತಮ್ಮ ಖೇದವನ್ನು ಗು.ಶಿ. ಚಗಟೇರಿಯೊಂದಿಗೆ ಹಂಚಿಕೊಂಡಾಗ ಅವರ ದು:ಖ ಸಹ ಹೆಚ್ಚಾಗಿ ಅದನ್ನು ಮುಳುಗಿಸಲು ಚಗಟೇರಿ ಇತರ ಪೇಯಗಳ ಮೊರೆ ಹೋಗಬೇಕಾಯಿತು.

'ಚಗಟೇರಿ ಅವರು ಬರುವ ವಿಷಯ ನನಗೆ ದಿಢೀರೆಂದು ತಿಳಿಯಿತು. ಆಗ ನನಗೆ ಅಚ್ಚರಿ. ನನ್ನ ಕಷ್ಟ ಸುಖ ಅರಿಯಲು ಶ್ರೀಸಾಮಾನ್ಯ ನನ್ನ ಮನೆ ಬಾಗಿಲಿಗೆ ಬರುವುದು ಸಾಮಾನ್ಯ ಸಂಗತಿ ಅಲ್ಲ, ನಾನು ಪೋಷಿಸಿ ಬೆಳೆಸಿದ ಅನೇಕ ನಾಯಕರೇ ನನ್ನನ್ನು ಕಡೆಗಣಿಸಿರುವಾಗ ಚಗಟೇರಿಯವರ ಭೇಟಿಯಿಂದ ಶ್ರೀಸಾಮಾನ್ಯನಲ್ಲಿ ನನ್ನ ನಂಬಿಕೆ ಇನ್ನಷ್ಟು ಹೆಚ್ಚಾಗಿದೆ. ಅವರ ಬಗ್ಗೆ ನಾನು ಇನ್ನಷ್ಟು ಕಾಳಜಿ ವಹಿಸಬೇಕಾಗಿದೆ ಎಂಬ ಅರಿವು ನನ್ನಲ್ಲಿ ಮೂಡಿದೆ. ಇದಕ್ಕಾಗಿ ಮು.ಮ. ಪದವಿಗಾಗಿ ನಾನು ಇನ್ನಷ್ಟು ತೀವ್ರವಾಗಿ ಹೋರಾಡುವೆ' ಎಂದು ಗದ್ಗದಿತರಾಗಿ ನುಡಿದರು.

ಅಲ್ಲಿಯೇ ಉಳಿದುಕೊಂಡ ಅವರು ಮರುದಿನ ಷವರ್ ಸ್ನಾನ ಮಾಡಿ, ಕಾಂಟಿನೆಂಟಲ್ ಬ್ರೇಕ್‌ಫಾಸ್ಟ್ ಜತೆ ಸ್ಪೆಷಲ್ ಡಾರ್ಜಿಲಿಂಗ್ ಚಾ ಕುಡಿದು. ಮಾ.ಮು.ಮ. ಅವರಿಂದ ಬೀಳ್ಕೊಂಡು ಇನ್ನೊಬ್ಬ ಮಾಜಿ ಮುಖ್ಯ ಮಂತ್ರಿಗಳ ಮನೆಗೆ ಹೊರಟಾಗ ಅವರು ಈಗ ಸದ್ಯಕ್ಕೆ ತಮ್ಮ ಅಧಿಕೃತ ಮನೆಯಲ್ಲಿ ಇಲ್ಲದೆ ಅಧಿಕ ಮನೆಯಲ್ಲಿದ್ದಾರೆಂದೂ ಅದು ತೀರಾ ಖಾಸಗಿ ಆಗಿರುವದರಿಂದ ಯಾರ ಭೇಟಿಗೂ ಅನುಮತಿ ಇಲ್ಲ ಎಂದು ತಿಳಿದಾಗ ಒಂದು ಮನೆಯನ್ನೇ ನಿಭಾಯಿಸುವುದು ಕಷ್ಟವಾಗಿರುವಾಗ ಬೆಂಗಳೂರಿನಂತಹ ದುಬಾರಿ ಷಹರಿನಲ್ಲಿ ಎರಡೆರಡು ಮನೆ ನಡೆಸುವ ಸಮಸ್ಯೆಯ ಅರಿವು ಚಿಗಟೇರಿ ಅವರಿಗೆ ಅರಿವಾಗಿ ಅವರು ಇಂತಹ ಸ್ಥಿತಿ ಎಲ್ಲರಿಗೂ ಬಾರದಿರಲಿ ಎಂದು ಪ್ರಾರ್ಥಿಸಿದರು – ಮನದಲ್ಲೇ.

ಜಯಮಹಲ್, ಸದಾಶಿವನಗರ, ಕುಮಾರಕೃಪ, ಆರ್.ಟಿ.ನಗರ ಮುಂತಾದ ವಿವಿಐಪಿ, ವಿಐಪಿ ಬಡಾವಣೆಗಳಲ್ಲಿ ಅಡ್ಡಾಡಿ ಅನೇಕ ಬಂಗಲೆಗಳಲ್ಲಿ ವಾಸಿಸುತ್ತಿರುವವರ ಬವಣೆಗಳನ್ನು ಖುದ್ದು ನೋಡಿ, ಆಲಿಸಿದ ನಂತರ ಅಪರಂಜಿಯೊಂದಿಗೆ ಮಾತನಾಡಿದ ಚಗಟೇರಿ 'ಒಂದು ಈ ಭೇಟಿ ನನ್ನ ಕಣ್ಣು ತೆರೆಸಿದೆ. ನಾನು ನೋಡಿದ್ದು, ಕೇಳಿದ್ದು ನನ್ನ ಭ್ರಮೆಯನ್ನು ಹೋಗಲಾಡಿಸಿವೆ. ಕೇವಲ ನನ್ನಂತಹವರಿಗೆ ಮಾತ್ರ ಸಮಸ್ಯೆಗಳು ಇವೆ ಎಂದು ಭಾವಿಸಿದ್ದೆ. ಇಲ್ಲ, ಶ್ರೀಮಂತರಿಗೂ ಸಮಸ್ಯೆಗಳಿವೆ. ದೀನ ದಲಿತರ ಸೇವೆಗೆಂದು ಶೇಖರಿಸಿರುವ ಹಣದ ಮೇಲೆ ಆದಾಯ ತೆರಿಗೆ ಇಲಾಖೆ ಕಣ್ಣು ಹಾಕಿರುವುದು, ಸಮಾಜ ಸೇವೆಗಾಗಿ ಊರೂರು ತಿರುಗುತ್ತಿದ್ದರೆ ಇಲ್ಲಿ ಹೆಂಡತಿ ಇನ್ನೊಬ್ಬನೊಡನೆ ಸ್ವಚ್ಛಂದವಾಗಿ ವಿಹರಿಸುತ್ತಿರುವುದು, ಯಾವ

ಬಿಪಿ ಮಾತ್ರೆಯಿಂದಲೂ ಗುಣವಾಗದ ರಕ್ತದ ಒತ್ತಡ, ಅನುಯಾಯಿಗಳ ಆಸೆಬುರುಕತನ, ಬೇನಾಮಿ ಆಸ್ತಿ ಕೈ ಬಿಟ್ಟು ಹೋಗುತ್ತಿರುವುದರಿಂದ ಆಗುತ್ತಿರುವ ಕಳವಳ, ಟೀವಿ ಮಂದಿಯ ಸ್ಟಿಂಗ್ ಆಪರೇಷನ್..' ಹೀಗೆ ಪಾಪ ಒಂದೇ ಎರಡೇ ಅವರ ಸಮಸ್ಯೆಗಳು. ಇದೆಲ್ಲಾ ಖುದ್ದಾಗಿ ನೋಡಿದ ಮೇಲೆ ನಾನೊಬ್ಬ ಭಾರತೀಯನೆಂದು ಹೇಳಿಕೊಳ್ಳಲು ನನಗೆ ನಾಚಿಕೆ ಆಗುತ್ತಿದೆ ಎಂದು ಆವೇಶಭರಿತರಾಗಿ ನುಡಿದರು.

ಮುಂದೇನು ಎಂದು ಚಗಟೇರಿ ಅವರನ್ನು ಕೇಳಿದಾಗ ಅವರು ''ದೆಹಲಿಗೆ ಹೋಗಿ ಪ್ರಧಾನಿಗಳನ್ನು ಭೇಟಿ ಮಾಡಿ ಅವರಿಗೆ ನಾನು ಕಂಡಿದ್ದನ್ನು ವಿವರಿಸಿ ಇವರ ಬವಣೆಯನ್ನು ನೀಗಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳಿ'' ಎಂದು ವಿವರಿಸುತ್ತೇನೆ ಎಂದರು.

ಈ ವಿಷಯಗಳ ಬಗ್ಗೆ ವಿವಿಐಪಿಗಳನ್ನು ವಿಚಾರಿಸಿದಾಗ ಅವರು 'ಚಗಟೇರಿ ಅವರ ನಗರವಾಸ್ತವ್ಯದಿಂದ ಏನೂ ಪ್ರಯೋಜನವಾಗುವುದಿಲ್ಲ, ನಮ್ಮ ಪರಿಸ್ಥಿತಿ ಹೀಗೇ ಇರುತ್ತದೆ' ಎಂದು ಹತಾಶರಾಗಿ ನುಡಿದರು.

ಇದರಿಂದ ವಿಚಲಿತಗೊಳ್ಳದ ಚಗಟೇರಿ 'ರಾಹುಲ್, ಯಡ್ಯೂರಪ್ಪ, ಕುಮಾರಸ್ವಾಮಿ ಮುಂತಾದವರು ಗ್ರಾಮ ವಾಸ್ತವ್ಯ ಮಾಡಿದಾಗಲೂ ಇಂತಹ ಸಿನಿಕ ಪ್ರತಿಕ್ರಿಯೆ ಬಂದಿತ್ತು. ನನಗೇನೂ ಬೇಸರವಿಲ್ಲ, ನಾನು ನನ್ನ ನಗರವಾಸ್ತವ್ಯ ಮುಂದುವರೆಸಿ ವಿವಿಐಪಿಗಳ ಆತಿಥ್ಯ ಸ್ವೀಕರಿಸುವೆ' ಎಂದರು.

*ಆಧಾರ: ದಿ ಅನ್ ರಿಯಲ್ ಟೈಂಸ್‌ನ ಒಂದು ಬರಹ*

---

## ಅದ್ಭುತ ದೀಪ

***ಒಮ್ಮೆ ಒಬ್ಬ ಮಹಿಳೆಗೆ ಒಂದು ಅದ್ಭುತ ದೀಪ ಸಿಕ್ಕಿತು. ಅದನ್ನು ಉಜ್ಜಿದಾಗ ಅಲ್ಲಾವುದ್ದೀನ್ ಕತೆಯಲ್ಲಿ ಬಂದಂತೆ ಭೂತ ಪ್ರತ್ಯಕ್ಷವಾಯಿತು. ಏನು ಬೇಕು ಕೇಳಿ? ಎಂದು ಕೇಳಿತು ಭೂತ.***

***ನನ್ನ ಗಂಡ ನನ್ನನ್ನು ಮಾತ್ರ ನೋಡುತ್ತಿರಬೇಕು;***

***ನಾನೇ ಅವನ ಪ್ರಾಣವಾಗಿರಬೇಕು;***

***ನನ್ನ ಬಳಿ ಯಾವಾಗಲೂ ಮಲಗಿರಬೇಕು;***

***ಬೆಳಿಗ್ಗೆ ಎದ್ದ ತಕ್ಷಣ ನನ್ನನ್ನು ಹಿಡಿದುಕೊಂಡು ಅವನು ಹೋದೆಡೆ ಕರೆದುಕೊಂಡು ಹೋಗಬೇಕು.***

***'ತಥಾಸ್ತು' ಎಂದ ಭೂತ ಅವಳನ್ನು ಒಂದು ಬ್ಲಾಕ್‌ಬೆರಿ ಫೋನ್‌ನನ್ನಾಗಿ ಪರಿವರ್ತಿಸಿತು.***

**– ಧೃತರಾಷ್ಟ್ರ**

# ಗಾಂಧಿ ಕ್ಲಾಸು

- ಕುಂ. ವೀರಭದ್ರಪ್ಪ

ಕನ್ನಡದ ಗ್ರಾಮೀಣ ಪ್ರದೇಶದ ಲೇಖಕರಲ್ಲಿ ಕುಂ.ವೀ. ಅಗ್ರಗಣ್ಯರು. ''ದಣಿವರಿಯದ ಲೇಖಕ'' ಎಂದೇ ಹೆಸರು ಮಾಡಿರುವ ಕುಂ.ವೀ. ಹಲವಾರು ಜನ್ಮಗಳಿಂದಲೇ ಬರೆಯುತ್ತಿದ್ದಾರೆ ಅನಿಸುವ ಹಾಗೆ ಅಗಾಧ ಸಾಹಿತ್ಯ ಕೃಷಿ ನಡೆಸಿರುವವರು. ಕಳೆದ ಸಾಲಿನಲ್ಲಿ ಅವರು ಅರಮನೆ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಗಳಿಸಿದರು. ಪ್ರಸ್ತುತ ಲೇಖನವನ್ನು ಅವರ ಆತ್ಮ ಕಥನ ಗಾಂಧಿ ಕ್ಲಾಸು ಕೃತಿಯಿಂದ ತೆಗೆದುಕೊಂಡಿದ್ದೇವೆ. ಆತ್ಮಕಥನದ ಮೊದಲ ಹಲವು ಭಾಗಗಳು ರಾಯಲ ಸೀಮಾ ಪುಸ್ತಕದಲ್ಲಿ ಪ್ರಕಟಗೊಂಡು ಅಪಾರ ಮೆಚ್ಚುಗೆ ಪಡೆಯಿತು.

**ಒಂದು ಫೋಟೋ ಪ್ರಸಂಗವು....**

**ಮೇ**ಲ್ಗಿರಿ ತಿಮ್ಮನಿಗೆ ಫೋಟೋ ತೆಗೆಯುವುದಾಗಿ ಮಾತು ಕೊಟ್ಟಿದ್ದೇನಷ್ಟೆ ಅವತ್ತು ಬೆಳಗ್ಗೆ ಇನ್ನೂ ಎಂಟಾಗಿರಲಿಲ್ಲ, ಶಾಲೆಗೆ ಹೊರಡುವ ತರಾತುರಿಯಲ್ಲಿದ್ದಾಗ ಯಾರೋ ಕೆಮ್ಮಿದಂತಾಯಿತು... ಗುರಬಸಪ್ಪ ''ಯ್ಯೋನ್ನಾವೋ.... ಪಿಳ್ಳೇನ ನ್ವಾಡಾಕೆ ವಂಟಗೈತೆ'' ಎಂದಾಗಲೇ ತಿರುಗಿ ನೋಡಿದ್ದು, ತಿಮ್ಮ ನಖಶಿಖಾಂತ ಮದುಮಗನಂತೆ ಸಿಂಗಾರ ಮಾಡಿಕೊಂಡು ಬಂದಿದ್ದ. ಸೀತಾರಾಮರೆಡ್ಡಿ, ರೌಡಿಮನಿ ಲಸುಮಿರೆಡ್ಡಿ ಎಂಕಟರೆಡ್ಡಿಯೇ ಮೊದಲಾದ ಋತ್ವಿಕ್ಕುಗಳು ಆತನನ್ನು ಕೀಟಲೆ ಮಾಡುವ ಸಲುವಾಗಿ ಅಷ ದಿಕ್ಕುಗಳಿಂದಾಗಮಿಸಿ ಮನೆ ತುಂಬಲಾರಂಭಿಸಿದ್ದರು. ಒಬ್ಬೊಬ್ಬರ ಕೀಟಲೆಯಿಂದ..........

ಹುಡುಗನಾಗಿಯೇಬಿಟ್ಟನೆನ್ನುವಾಗ ''ಅಯ್ ಸಾಮಿ ಡಬ್ಬಿನ ತಗಂಡು ಲಗೂನ ವಂಡೆಪ್ಪೋ'' ಎಂದು ಅವಸರ ಮಾಡಿದ...

''ಈಟೊತ್ತಿಗೆ ಬಂದೇನ್ಮಾಡ್ಲಿ ತಿಮ್ಮಣ್ಣಾ.... ಉಂಡುಗಿಂಡು ಸಜ್ಜಾಗಿರ್ರಿ, ಬರ್ತೀನಿ.'' ಎಂದೆ. ''ಅಯ್ ಹಂಗ್ಯಾಕಮ್ತಿ ಸಿವಾ.... ನಮ್ಮನ್ಯಾಗೆಲ್ಲಾ ಉಂಡುಗಿಂಡು ಸಜ್ಜಾಗಿ ಕುಂತ್ಗಂಡ್ಯಾರೆಪ್ಪೋ.....''

''ಸಾಲೆಗೋಗಿ ಹುಡ್ರೀಗೆ ಮಕಾನ ತೋರಿಸಿ ಬರ್ತೀನಿ, ನಿನೊಂಡು''

''ಅಯ್ ಸಿವಾ.... ಆ ನಿನ ಸೆಂಟದಿಸ್ಕೂಲಿಗೆ ಬ್ಯೆಂಕಿ ಹಚ್ಲಿ.... ನೀನು ಬೊಂದು ನಮ್ಮನ ತೆಗೀ ಮೊದ್ಲ...'' ಎಂದ, ಕುಡಿದಿದ್ದರಿಂದಾಗಿ ಆತನಿಗೆ ನಾಲಗೆ ಮೇಲೆ ಕಂಟ್ರೋಲಿರಲಿಲ್ಲ.

ಮೂಲಿಮನಿ ಗೌಡರು ನನ್ನ ಕಿವೀಲಿ ಬಾಯಿಯಿರಿಸಿ ''ಅಯ್ನೋರೆ.... ಅವ್ನು ಕುಡುದಂಗೈತೆ. ಸುಮ್ಕಕ ಹೊಂಡ್ರಿ...'' ಎಂದು ಸಲಹೆ ನೀಡಿದರು.

ಕೂಡಲೆ ನಾನು ಕೊಡಕ್ಕಿನೊಳಗೆ ಆತ್ಮದೋಪಾದಿಯಲ್ಲಿ ರೀಲಿರುವುದನ್ನು ಖಾತ್ರಿ ಪಡಿಸಿಕೊಂಡು ಹೊರಟೆನು.

ದಾರಿಯುದ್ದಕ್ಕೂ ಎಲ್ಲರ್ರಿಗೂ ತಿಮ್ಮ ''ಫೋಟಾದೊಳಗ ಬೂಳ್ತೀವಿ'' ಅಂತ ಹೇಳಿದ್ದೇ ಹೇಳಿದ್ದು... ಅವನ ಮಾತು ಆಲಿಸಿ ಎಲ್ಲರೂ ಕಿಲಕಿಲ ನಗಾಡಿದ್ದೇ ನಗಾಡಿದ್ದೇ ನಗಾಡಿದ್ದು.

ಶಾಲೆಗೆ ಹೋಗಿ ಮಕ್ಕಳಿಗೆ ಮುಖ ತೋರಿಸಿದೆ. ಅವು ಮರಣ ದಂಡನೆಗೀಡಾದ ಖೈದಿಯಂತೆ ನೋಡಿ ನನ್ನನ್ನು ಬೀಳ್ಕೊಟ್ಟವು. ರೌಡಿಮನೆ ಲಕ್ಷ್ಮೀರೆಡ್ಡಿ ಮನೆ ಸಂದುಗೊಂದು ದಾಟಿ ಕೇರಿಯ ವೈಭವ ನೋಡಿ ರೋಮಾಂಚನಗೊಂಡೆ... ಅದು ಇಂದ್ರನ ಅಂಬ್ರಾವತಿಪಟ್ಟಣಕ್ಕಿಂತ ಕಡಿಮೆಯಿರಲಿಲ್ಲ. ಕನ್ನಡದ ಅಕ್ಷರಗಳಿಗೆ ಇಂಗ್ಲೀಷಕ್ಷರಗಳನ್ನು ಅಲಂಕರಿಸಿದರೆ ಹೇಗಿರುತ್ತೋ ಹಾಗಿದ್ದರು ಅಲ್ಲಿನ ಪ್ರತಿಯೊಬ್ಬರು. ವರ್ಷಗಟ್ಟಲೆ ಟ್ರಂಕುಗಳಲ್ಲಿ ಉಸಿರುಗಟ್ಟಿ ಸಾಯುತ್ತ ಬಿದ್ದಿರುತ್ತಿದ್ದ ತರಾವರಿ ಪೀತಾಂಬರ ಸೀರೆಗಳು ವಿವಿಧ ವಯೋಮಾನದ ಮಹಿಳೆಯರ ಮೈಮೇಲೆ ಲಕಲಕ ಹೊಳೆಯುತ್ತಿದ್ದವು. ನಿತಂಬದ ಗಡಿ ರೇಖೆಗಳನ್ನು ಉಲ್ಲಂಘಿಸಿ ಕೆಳಕ್ಕಿಳಿ ಬಿದ್ದಿದ್ದ ಜಡೆಗಳೋ, ಅವುಗಳಿಗೆ ಶಿಖರೋಪಾದಿಯಲ್ಲಿ ಮುಡಿಸಿರುವ ಚೆಂಡುಹೂವಿನ ದಂಡೆಗಳೋ.... ಕಪ್ಪು ಚರ್ಮವೋ.... ಸಿಂಗಾರಕ್ಕೆ ಕಳಸವಿಟ್ಟಂತೆ ಮಾತಾಡುವ ರೀತಿಯೋ.... ಹ್ಹಾ ಹ್ಹಾ... ನಮ್ಮ ಭವ್ಯಭಾರತದ ವೀರರಮಣಿಯರೇ... ಎಂದು ಮನಸ್ಸಿನೊಳಗೆ ಉದ್ಗರಿಸದೆ ಇರಲಿಲ್ಲ, ನಾನು....

ತಿಮ್ಮ ನನ್ನನ್ನು ತಮ್ಮ ಮನೆಯ ಮುಂದಿನ ಕಟ್ಟೆ ಮೇಲೆ ಕೂಡ್ರಿಸುವ ಸಲುವಾಗಿ ಕರೆದೊಯ್ದ ಎನ್ನುವುದಕ್ಕಿಂತ ಎಳೆದೊಯ್ದನೆಂದು ಹೇಳಿದರೆ ಸರಿಯಾದೀತು... ಆ ಮನೆ ದೊಡ್ಡದಾಗಲೀ ಚಿಕ್ಕದಾಗಲೀ ಆಗಿರಲಿಲ್ಲ, ಅದರೊಳಗೆ ಅತ್ತಿಂದಿತ್ತ, ಇತ್ತಿಂದತ್ತ ಅಡ್ಡಾಡುತ್ತಿದ್ದವರನ್ನು ಬೆರಗುಗಣ್ಣುಗಳಿಂದ ನೋಡತೊಡಗಿದೆ. ಕೆಲವು ಕೂಸು ಕಂದಮ್ಮಗಳು ಎಲ್ಲಿ ಬೇಕೆಂದರಲ್ಲಿ ಮಲಮೂತ್ರ. ವಿಸರ್ಜಿಸುತ್ತಿದ್ದುದ್ದೋ, ಆ ಅಕಳಂಕ ಪ್ರಸಾರವನ್ನು ನಾಯಿಗಳು ಅಪೋಶನ ತೆಗೆದುಕೊಳ್ಳುತಲಿದ್ದುದ್ದೋ.... ಮಾತೆಯರು ಅವುಗಳ ಬೆನ್ನುಕೆನ್ನೆಗಳಿಗೆ ರಪ್ ರಪ್ ಎಂದು ಭಾರಿಸುತ್ತಿದ್ದುದ್ದೋ, ಅವು ತಮ್ಮದೇ ಆದ ಕೃತಕ ಭಾಷೆಯಲ್ಲಿ ಹೆತ್ತವರನ್ನು ಹಿಗ್ಗಾಮುಗ್ಗಾ ಬಯ್ಯುತಲಿದ್ದುದ್ದೋ.... ಆ ಎಲ್ಲಾ ಸಂಗೀತಕ್ಕೆ.............

ಅವರೆಲ್ಲ ಗಣಕನಿಗೆ ಸವಾಲು ಹಾಕುವಂತಿದ್ದರು. ಆಗಲೇ ಕುಡಿದು ಮತ್ತಾಗಿದ್ದ ಗಂಡಸರು ನನ್ನ ಕಡೆಗೆ ವಿನಾಕಾರಣ ದುರುಗಟ್ಟಿ ನೋಡುತ್ತಿದ್ದರು. ಕೆಲವು ಮಕ್ಕಳು ''ನಮ್ಸಾರು'' ಎಂದು ಸಹ ವಾರಿಗೆಯ ಮಕ್ಕಳಿಗೆ ಪರಿಚಯಿಸುತ್ತಿದ್ದವು. ಇನ್ನೂ ಕೆಲವು ನನ್ನ ತೊಡೆ ಏರಿ ಕುಳಿತುಕೊಂಡು ಜಗ್ಗಾಡಲು ಪ್ರಯತ್ನಿಸುತ್ತಿದ್ದವು. ಅಷ್ಟೊತ್ತಿಗಾಗಲೇ ಇನ್ನೊಂದು ದರಾಂ ಹಾಕಿಕೊಂಡು ಬಂದ ಯಜಮಾನನ್ನು ತರುಬಿ ''ತಿಮ್ಮಣ್ಣಾ ಇನ್ನೇಟೊತ್ತಾಯ್ತದೆ''? ಎಂದು ಕೇಳಿದ್ದಕ್ಕೆ ಆ ಪುಣ್ಯಾತ್ಮ ''ಅಯ್ ಸಿವಾ... ಕುಂತ್ಗಾ ರವೋಟೊತ್ತು.... ಯಾಕಿಂಗ್ ಮಾಡ್ತಿ... ಎಣುಮಕ್ಳು ಸಜ್ಜಾಗೋದಂದ್ರ ಉಡುಗಾಟೇನು.... ನೀನ್ ತಪ್ಸಿಕೊಂಡ್ರೈತೆ ನ್ವಾಡು....'' ಎಂದು ಗೌರವಪೂರ್ವಕವಾಗಿ ಗದರಿಸಿ ಒಳಗಡೆ ಹೋಗೋದು ಬರೋದು ಮಾಡುತ್ತಿದ್ದನು.

ಹೊಟ್ಟೆ ಹಸಿದು ಕಂಗಾಲಾಗಿತ್ತು. ಷೋಡಷಿಯೋರ್ವಳು ಸೀರೆಯ ಒಂದು ತುದಿಯನ್ನು ಜಮಡುತ್ತ ''ಸ್ವಾಮಿ.... ಉಂಬುವಂತಿ ಬಾ'' ಎಂದು ಕರೆದು ಪುದುಕ್ಕಂತ ಒಳಗಡೆ ಓಡಿದಳು. ಇನ್ನೊಬ್ಬಳು ಬಂದು ನನ್ನೆದುರಿಗೆ ಒಂದು ತಟ್ಟೆ ಇರಿಸಿ ಅದರಲ್ಲಿ ಹೋಳಿಗೆ, ಕರಿಗೆಡುಬುಗಳನ್ನು ಬಡಿಸಿ ''ಥಿನ್ನು'' ಎಂದು ಆಜ್ಞಾಪಿಸಿ ಹೋದಳು... ಆಕೆ ಅತ್ತ

ಹೋದೊಡನೆ ನೂರಾರು ನೊಣನೊರಜುಗಳು ಗವ್ವಂತ ಮುತ್ತಿ ಆಹಾರಕ್ಕೆ ವಿಶೇಷ ಕಳೆ ತಾರದೆ ಇರಲಿಲ್ಲ. ಎದುರಿಗೆ ಗುರುಗುಟ್ಟುತ್ತ ಬಾಲ ಅಲ್ಲಾಡಿಸುತ್ತಿರುವ ನಾಯಿಗಳು ಬೇರೆ... ಒಂದು ಕರಿಗೆಡುಬನ್ನು ಜರಾಸಂಧನೆಂದು ಭಾವಿಸಿ ಸೀಳಿ ನೋಡಿ ಅದರಲ್ಲಿದ್ದ ಗೊದ್ದಿಗಗಳ ಕಳೇಬರಗಳನ್ನು ಗುರುತಿಸಿ ತಟ್ಟೆಯನ್ನು ಮೆಲ್ಲಗೆ ಹಿಂದಕ್ಕೆ ಸರಿಸಿದೆ.... ನಾನು ತಿನ್ನುತ್ತಿರುವೆನೋ.... ಇಲ್ಲವೋ ಎಂದು ತೆರೆ ಮರೆಯಲ್ಲಿ ಗಮನಿಸುತ್ತಿದ್ದ ಕೆಲವು ತರುಣಿಯರು ಒಳಗಡೆ ಹೋಗಿ ಯಾರಿಗೆ ಏನು ಹೇಳಿದರೇನೋ... ಪರಿಸ್ಥಿತಿ ಬಿಗಡಾಯಿಸದೆ ಇರಲಿಲ್ಲ.

ತಿಮ್ಮ ರಾವಣಾಸುರನಂತೆ ಬಂದವನೆ ''ಯಾಕೆ ತಿಂಬುವಲ್ಲಿ ಸಿವಾ.... ಗೋಡ್ರು ಮನ್ಯಾಗಾರ ಥಿಂಥಿ.... ನಮ್ಮಂಥೋರ ಮನ್ಯಾಗ ಯಾಕ ಥಿಂಭೋದಿಲ್ಲಾಂತ...'' ಎಂದು ಘರ್ಜಿಸಿದ. ಅವನು ಹೇಳಿದ್ದರಲ್ಲಿ ತಪ್ಪಿರಲಿಲ್ಲ. ನಾನೊಂದೆರಡು ಗುಕ್ಕು ತಿಂದಂತೆ ನಟಿಸಿ ಉಳಿದಿದ್ದನ್ನು ಗುಟ್ಟಾಗಿ ನಾಯಿಗಳಿಗೆಸೆದು ಬಚಾವಾದೆ... ಹೀಗೆ ಐದಾರು ತಾಸುಗಳು ಗತಿಸಿದ ಬಳಿಕ..

ತಿಮ್ಮನ ಅಸಂಖ್ಯಾತ ಕುಟುಂಬದ ಸದಸ್ಯ, ಸದಸ್ಯೆಯರು ಎಷ್ಟು ಸಾಧ್ಯವೋ ಅಷ್ಟು ಮೇಕಪ್ ಮಾಡಿಕೊಂಡು ಹೊರ ಬರಲಾರಂಭಿಸಿದರು. ಕ್ರಮೇಣ ಅವರೆಲ್ಲರ ಸಂಖ್ಯೆ ನೂರಕ್ಕೂ ಮೇಲ್ಪಟ್ಟಾಗದೆ ಇರಲಿಲ್ಲ. ಅವರನ್ನು ನೋಡಿ ನನಗೆ ನಮ್ಮ ಪಾರ್ಲಿಮೆಂಟ್‌ನ ಫೋಟೋ ನೆನಪಾಯಿತು. ನಿಂತವರು ಸುಮ್ಮನೆ ನಿಂತರೆ ಸರಿ, ಆದರೆ ಅವರ ಪೈಕಿ ಕೆಲವರು ನನ್ನ ದೇಹದ ಮೇಲಿದ್ದ ವಸ್ತುಗಳ ಮೇಲೆ ಕಣ್ಣಿಟ್ಟ ಪರಿಣಾಮವಾಗಿ... ಚಾಳೇಸ, ಚಪ್ಪಲಿ, ಕರ್ಚೀಪು, ಬಾಚಣಿಕೆ ಮತ್ತಿತರ ವಸ್ತುಗಳು ಒಂದೊಂದಾಗಿ ಕಳಚಿ ಹೋಗದೆ ಇರಲಿಲ್ಲ. 'ಏಯ್ ಸಿವಾ.... ಎಂಗ್ ತಗೀಬೇಕಂದರ ಅಂಗೆ ತಗೀಬೇಕು ನ್ವಾಡು... ಇಲ್ಲಾಂದರ ನಿನ್ ಕಥಿ ಐತಿ'' ಎಂದು ಮೀಸೆ ಹುರಿ ಮಾಡಿಕೊಂಡು ಅವಾಜು ಹಾಕುತ್ತಿರುವ ತಿಮ್ಮ ಬೇರೆ... ತಮ್ಮ ಹೊಟ್ಟೆಯೊಳಗಿನ ಕೂಸುಗಳೂ ಫೋಟೋದೊಳಗೆ ಬೀಳಬೇಕೆಂದು ಒತ್ತಾಯಿಸುತ್ತಿರುವ ಬಸುರಿ ಹೆಂಗಸರು....

ಸುಮಾರು ಅರ್ಧಗಂಟೆ ಕಾಲ ಶ್ರಮಿಸಿ ಅಂತೂ ಕ್ಲಿಕ್ಕಿಸಿದೆ... ಅವರ ಪೈಕಿ ಒಬ್ಬ ''ಏಯ್ ನೀನು ಸರ‍್ಯಾಗಿ ತೆಗೀಲಿಲ್ಲಬುಡು.... ಲೈಟುಬೂಳ್ಳಿಲ್ಲ...'' ಎಂದು ತಕರಾರೆತ್ತಿದ... ಅದಕ್ಕೆ ಪ್ರತಿಕ್ರಿಯಿಸದೆ ನಾನು ವಿಷಣ್ಣವದನನಾಗಿ ಅಲ್ಲಿಂದ ವಾಪಸಾಗಿ.... ಓಹ್! ಅದೊಂದು ಅದ್ಭುತ ಅನುಭವ....

★★★

**ಜಾತಪ್ಪ ಮೇಷ್ಟ್ರು.......**

ಭಯ ನನ್ನ ಬಾಲ್ಯದ ಒಂದು ಅನಿವಾರ್ಯ ಅಂಗ ಮತ್ತು ಮೂಲಭೂತ ಸಂವೇದನೆಯಾಗಿತ್ತು. ಕೆಲವೊಮ್ಮೆ ನಮ್ಮ ಚಿಕ್ಕಪ್ಪ, ರಂಗಣ್ಣ (ಗುತ್ತಿಗೆ ಆಧಾರದ ಮೇಲೆ ಮಡಕೆ ಮಾಡುವ ಸಲುವಾಗಿ ಮನೆಯಲ್ಲಿದ್ದಂಥವರು, ಮುಖ್ಯವಾಗಿ ರಂಗಣ್ಣ ಎಂಬ ಹೆಸರಿನ ಆಂಧ್ರ ಮೂಲದ ಅಜಾನುಬಾಹು ಯಾವುದೋ ಒಂದು ಕ್ರಿಮಿನಲ್ ಖಟ್ಲೆಯಲ್ಲಿ ಸಿಲುಕಿ ನಮ್ಮ ಮನೆಯಲ್ಲಿ ತಲೆ ಮರೆಸಿಕೊಂಡಿದ್ದ. ಆತನೂ ನನ್ನ ದೃಷ್ಟಿಯಲ್ಲಿ ಭಯೋತ್ಪಾದಕನಾಗಿದ್ದ)

ನನ್ನನ್ನು ರಕ್ಷಿಸುತ್ತಿದ್ದುದೂ ಉಂಟು. ಈ ಎಲ್ಲಾ ರಕ್ಷಣೆಗಳ ನಡುವೆಯೂ ನನಗೆ ಹಗಲು ಯಾವುದೋ, ರಾತ್ರಿ ಯಾವುದೋ... ಆದರೂ ನಾನು ಲವಲವಿಕೆಯ ಮೂಟೆಯಾಗಿದ್ದೆ. ಒಂಚೂರು ಇದ್ದಿಲು ಸಿಕ್ಕರೆ ಸಾಕು ಬಿಳಿ ಗೋಡೆಗಳನ್ನು ಅಕರಾಳ ವಿಕರಾಳ ಚಿತ್ರಗಳಿಂದ ಅಲಂಕರಿಸಿಬಿಡುತ್ತಿದ್ದೆನು. ಒಂಚೂರು ಬಿಳಿಹಾಳೆ ಸಿಕ್ಕೊಡನೆ ಏನಾದರೊಂದು ಬರೆದು ತುಂಬಿಸಿಬಿಡುತ್ತಿದ್ದೆನು. ಏನಾದರೊಂದು ಬರೆದು ಸ್ಟಾಂಪ್ ಹಚ್ಚದೇನೆ ಬಂಧುಬಳಗದವರಿಗೆ ಪತ್ರಗಳನ್ನು ರವಾನಿಸಿ ಖುಷಿಪಡುತ್ತಿದ್ದೆನು. ಗೆಳೆಯರೆದುರು ನನ್ನಷ್ಟು ಸಂತೋಷವಾಗಿರೋರು ಈ ಪ್ರಪಂಚದಲ್ಲಿ ಇನ್ನೊಬ್ಬರಿಲ್ಲವೆಂಬಂತೆ ಅಭಿನಯಿಸುತ್ತಿದ್ದೆನು. ಅಪ್ಪ ಕೋರ್ಟ್–ಗೀರ್ಟುಂತ ಔಟ್ ಆಫ್‌ಸ್ಟೇಷನ್ ಆದೊಡನೆ ಗದ್ದೆ, ಹೊಲ, ಗದ್ದೆಕಲ್ಲೇಶನ ಗುಡಿ, ಗಚ್ಚಿನಮಠಗಳಿತ್ಯಾದಿಗಳ ಕಡೆ ವಲಸೆ ಹೋಗಿ ಅಲ್ಲೆಲ್ಲ ಮನಬಂದಂತೆ ಆಟ ಆಡಿ ಮನೆ ಸೇರಿಕೊಳ್ಳುತ್ತಿದ್ದೆನು. ಪುನಃ ಅಪ್ಪ ಮನೆಯಲ್ಲಿದ್ದೊಡನೆ ಮಹಾಮಳ್ಳಿಗನಂತೆ ಸೋಗು ಹಾಕುತ್ತಿದ್ದೆನು. ಇರಲಿ...

ಅಪ್ಪನ ದಿನಚರಿ ಎಷ್ಟು ಕರಾರುವಾಕ್ಕಾಗಿರುತ್ತಿತ್ತೆಂದರೆ ಅದರ ಮುಂದೆ ಗಾಂಧೀಜಿಯ ದಿನಚರಿ ಏನೇನೂ ಅಲ್ಲ. ಆತ ಬೆಳಗ್ಗೆ ನಾಲ್ಕೂವರೆ, ಐದಕ್ಕೆ ಎದ್ದು ದೆವ್ವಗಳಿಗೆ ಸೊಪ್ಪು ಹಾಕದೆ ಸುಮಾರು ದೂರ ಬಹಿರ್ದೆಸೆಗೆ ಹೋಗುತ್ತಿದ್ದನು. ಹೋಗುವ ಮೊದಲು ''ಲೇ ಇರಭದ್ರಿ'' ಎಂದು ಜಾಗಟೆ ಭಾರಿಸಿದಂತೆ ಎಚ್ಚರಿಸಿದೊಡನೆ ನಾನು ಗಡಿಬಡಿಸಿ ಎದ್ದು ಲಾಂದ್ರದ ಬತ್ತಿ ಏರಿಸಿ ಇಡೀ ಊರು ಆಲಿಸುವಂತೆ ಓದುವುದು ಯಾಂತ್ರಿಕವಾಗಿತ್ತು. ಎದ್ರೂ ಪುನಃ ಮಂಪರಿಗೀಡಾಗುತ್ತಿದ್ದ ನನ್ನ ಬೆನ್ನಿಗೆ ರಪ್ಪಂತ ಬಾರಿಸುವ ಸಲುವಾಗಿ ತಾನು ಇಟ್ಟುಕೊಂಡಿರುತ್ತಿದ್ದ ಬಿದಿರ ಬೆತ್ತ ವಜ್ರಾಯುಧವನ್ನು ನೆನಪಿಸುವಂತಿತ್ತು. ಇಷ್ಟೆಲ್ಲ ಕಷ್ಟಕೋಟಲೆಗಳಿಂದಾಗಿ ನಾನು ಆರನೇ ಇಯತ್ತೆಯನ್ನು ಫೇಲಾಗುವುದು ಸಾಧ್ಯವೇನು?

ಆ ಕಾಲದಲ್ಲಿ ಏಳನೆ ಇಯತ್ತೆಗೆ 'ಎಂ.ಎ.' ಸ್ಥಾನಮಾನವಿತ್ತು. ಕಲಿಯುವಿಕೆ ಮತ್ತು ಕಲಿಸುವಿಕೆ ನಡುವೆ ಆರೋಗ್ಯಕರ ಪೈಪೋಟಿಯಿಲ್ಲದೆ ಇರಲಿಲ್ಲ, ಪಬ್ಲಿಕ್ ಪರೀಕ್ಷೆ ಬೇರೆ... ಊರಲ್ಲಿ ಏಳನೆ ತರಗತಿಗೆ ಸಂಬಂಧಿಸಿದಂತೆ ಹಲವಾರು ಕೋಚಿಂಗ್ ಕ್ಲಾಸ್‌ಗಳು ಪೈಪೋಟಿಯಿಂದ ನಡೆಯುತ್ತಿದ್ದವು. ಅಂದರೆ ಹಣದಾಸೆಯಿಂದಲ್ಲ, ಟ್ಯೂಷನ್ ಫೀಜು ಎರಡು ರೂಪಾಯಿಯೆಂದರೆ ಕಡಿಮೆ, ಐದು ರೂಪಾಯಿಯೆಂದರೆ ಹೆಚ್ಚು. ಐದು ರೂಪಾಯಿ ಮೌಲ್ಯದ ಟೂಷನ್‌ಗಳು ಹತ್ತಿರದಲ್ಲಿರದೆ ದೂರದಲ್ಲಿದ್ದವು. ಅಷ್ಟು ರುಸುಮುತೆತ್ತು ಪಾಠ ಹೇಳಿಸಿಕೊಡುವಷ್ಟು ಧಾರಾಳತನ ನಮ್ಮ ಮನೆಯಲ್ಲಿರಲಿಲ್ಲ. ಅಂಥದ್ದೊಂದು ಟ್ಯೂಷನ್‌ಗೆ ಹೋಗಿ ತಿಂಗಳೊಪ್ಪತ್ತಲ್ಲಿ ಮನೆಗೆ ಮರಳಿದೆ. ಅದಕ್ಕಿದ್ದ ಕಾರಣಗಳು ಅನೇಕ. ನಿಗದಿತ ವೇಳೆಗೆ ಫೀಜು ಸಲ್ಲಿಸದಿರುವುದು ಒಂದು ಕಾರಣವಾದರೆ, ಮಾಸ್ತರರು ಸಾಮಾಜಿಕ ಅಂತಸ್ತು ನೋಡಿ ಪಾಠ ಹೇಳುತ್ತಿದ್ದುದೂ ಇನ್ನೊಂದು ಕಾರಣ. ಈ ಇಂತಪ್ಪ ಹಲವು ಕಾರಣಗಳಿಂದಾಗಿ ಇಂಗ್ಲೀಷ್ ಗ್ರಾಮರ್ ಹೇಳುತ್ತಿದ್ದಂಥ ರೇವಣ್ಣ ಮೇಸ್ತ್ರ ಬಳಿ ಪಾಠ ಹೇಳಿಸಿಕೊಳ್ಳಲು ಸಾಧ್ಯವಾಗಲಿಲ್ಲ.

ನಮ್ಮ ಓಣಿಯಲ್ಲಿ ಜಾತಪ್ಪ ಮೇಸ್ತ್ರು ಅಂಥದ್ದೊಂದು ಟ್ಯೂಷನ್ ನಡೆಸುತ್ತಿದ್ದರು. ನಮ್ಮ ಮನೆಯಲ್ಲಿ ಅಪರಕರ್ಮಗಳನ್ನು ಪೂರೈಸುತ್ತಿದ್ದ ಜಂಗಮರು ಅವರಾಗಿದ್ದರು. ಅಲ್ಲದೆ ಅವರಿಗೆ ನನ್ನ ಮೇಲೆ ವಿಶೇಷ ಪ್ರೀತಿಯಿತ್ತು. ಆದರೆ ಅವರ ಬಳಿ ಟ್ಯೂಷನ್

ಹೇಳಿಸಿಕೊಳ್ಳುವುದು ಸುಲಭ ಸಂಗತಿಯಾಗಿರಲಿಲ್ಲ. ಕಾರಣ ಅವರು ಸ್ಟ್ರಿಕ್ಟ್‌ಯೆಂದರೆ ಸ್ಟ್ರಿಕ್ಟು. ಅವರು ಗಚ್ಚಿನಮಠ ಶಾಲೆಯಲ್ಲಿ ರಿಂಗ್ ಮಾಸ್ಟರೆಂದೇ ಹೆಸರಾಗಿದ್ದರು. ಆದರೆ ತಲೆಹರಟೆ, ಅಧಿಕಪ್ರಸಂಗಿ, ಬುರುಡೆರಾಯ ಇತ್ಯಾದಿ ಬಿರುದುಗಳನ್ನು ಅಭಿಜಾತವಾಗಿ ಪಡೆದಿದ್ದ ನನ್ನನ್ನು ಪಳಗಿಸುವುದು ಇನ್ನೂ ಬಾಕಿ ಉಳಿದಿತ್ತು, ಎಲ್ಲಿ ನನ್ನ ಮೇಲೆ ಸೇಡು ತೀರಿಸಿಕೊಳ್ಳುವರೋ ಎಂಬ ಭಯದಿಂದಾಗಿ ನಾನು ಅವರಲ್ಲಿಗೆ ಟ್ಯೂಷನ್ ಹೋಗಲು ಹಿಂದೇಟು ಹಾಕಿದೆ. ಒಳಗೊಳಗೆ ನನಗೂ ಇಷ್ಟವಿಲ್ಲದೆ ಇರಲಿಲ್ಲ. ಕಾರಣ ಅವರು ಅತ್ಯುತ್ತಮ ಪೋಟ್ರೇಟ್ ಕಲಾವಿದರಾಗಿದ್ದರಲ್ಲದೆ ಮನೆ ಅಳಿಯ, ಬಾಲಗೋಪಾಲ, ಜಾಲಗಾರ ಮತ್ತಿತರ ನಾಟಕಗಳಲ್ಲಿ ಅಭಿನಯಿಸುವುದರ ಮೂಲಕ ಒಳ್ಳೆಯ ನಟರೆಂದು ಕೀರ್ತಿಗೆ ಪಾತ್ರರಾಗಿದ್ದರು. ಆದರೆ ಅಪ್ಪ ಸುಮ್ಮನಿದ್ದರೆ ತಾನೆ... ಸಂಪರ್ಕಿಸಿದರು. ಬೆಂಗಳೂರಿನ ಮುಖ ನೋಡಿದ್ದ ಅಪ್ಪನ ಮಾತಿಗೆ ಅವರು ಇಲ್ಲೆನ್ನದೆ ಆಕರ್ಷಕನಾಗಿ ಒಪ್ಪಿಕೊಂಡರು.

ಜಾತಪ್ಪ ಮೇಸ್ತ್ರ ಮನೆ ಪಾಠವೆಂದರೆ ಅದೊಂದು ನಳಂದಾ, ತಕ್ಷಶಿಲಾಕ್ಕೆ ಸಮಾನವೆಂಬ ಪ್ರತೀತಯಿತ್ತು. ನಮ್ಮ ಮನೆಗೆ ಕಾಲಳತೆ ದೂರದಲ್ಲಿದ್ದ ಆಯತಾಕಾರದ ಮನೆಯೊಂದನ್ನು ಟ್ಯೂಷನ್ ಸಲುವಾಗಿಯೇ ಬಾಡಿಗೆ ಪಡೆದಿದ್ದರು. ಅಲ್ಲಿಗೆ ತರಹೇವಾರಿ ಹುಡುಗರು ದೂರದೋಣಿಗಳಿಂದ ಬಂದಿಳಿಯುತಿದ್ದದ್ದು ಪ್ರೇಕ್ಷಣೀಯವಾಗಿತ್ತು. ಅವರೆಲ್ಲರ ನಡುವೆ 'ಹಂಸ ಮಧ್ಯೆ ಬಕೋಯತಾ' ಎಂಬಂತೆ ನಾನು ಮ್ಯಾಚಾಗುತ್ತಿರಲಿಲ್ಲ. ಜವಾರಿ ಮಾತಿಗೆ ಹೆಸರಾಗಿದ್ದ ಅವರು ನಮ್ಮನ್ನು ಪರಾಂಬರಿಸುತ್ತಿದ್ದುದು ವಿಲಕ್ಷಣವಾಗಿದ್ದರೂ ಆಪ್ತವಾಗಿರುತ್ತಿತ್ತು, ಉದಾಹರಣೆ ''ಹೊಟ್ಟೆಗೇನು ತಿಂದು ಬಂದೆಲೇ'' ಎಂದು ಕೇಳಿದರೆ ಹುಡುಗರೆಲ್ಲ 'ಇಡ್ಲಿ, ಉಪ್ಪಿಟ್ಟು, ದೋಸೆ' ಎಂದು ಮುಂತಾಗಿ ಬಾಯಲ್ಲಿ ಜೊಲ್ಲು ಸುರಿಸುವಂತೆ ನಿವೇದಿಸುತ್ತಿದ್ದರು, ಆದರೆ ನನ್ನಂಥೋರು 'ತಂಗಳನ್ನ, ತಂಗಳು ರೊಟ್ಟಿ' ಎಂದು ಮುಂತಾಗಿ ಹೇಳುವಾಗ ತಲೆತಗ್ಗಿಸುವ ಪ್ರಸಂಗ ಬರುತ್ತಿರಲಿಲ್ಲ. ನಾವು ತಕ್ಕಮಟ್ಟಿಗಿದ್ದವರಾಗಿದ್ದರೂ ವಿಶೇಷ ತಿಂಡಿ ತಯಾರಿಸುತ್ತಿದ್ದುದು ಯಾರಾದರೂ ಬೀಗರು ಬಂದಾಗ ಮಾತ್ರ. ಆ ಕಾರಣದಿಂದಾಗಿ ''ದೇವರೇ ತಿಂಗಳಿಗೊಂದೆರಡು ಮೂರು ಸರ್ತಿಯಾದರೂ ನಮ್ಮ ಮನೆಗೆ ನೆಂಟರು ಬರುವಂತೆ ಮಾಡು'' ಎಂದು ನಾವು... ಅದರಲ್ಲೂ ಮಹಾತಿಂಡಿಪೋತನಾಗಿದ್ದ ನಾನು ಪ್ರಾರ್ಥಿಸುತ್ತಿದ್ದುದುಂಟು.... ಆದರೆ ನೆಂಟರಿಷ್ಟರೆಲ್ಲ ಹತ್ತಿರದ ಊರುಗಳಲ್ಲಿರದೆ ಬಳ್ಳಾರಿ ದೇಶದಿಂದಾಚೆಯಿದ್ದರು ನನ್ನ ಕರ್ಮಕ್ಕೆ, ಇರಲಿ... ಆದರೆ ನನ್ನ ತಲೆ ಯಾವುದೇ ಹೋಟಲ್‌ಗಿಂತ ಕಡಿಮೆಯಿರಲಿಲ್ಲವೆಂಬುದು ಮಾತ್ರ ಖರೆ... ಆದ್ದರಿಂದ ತಂಗಳುಪಂಗಳು ಅಂತ ಹೇಳುವಾಗ ನನ್ನ ಧ್ವನಿಯಲ್ಲಿ ಹೆಮ್ಮೆ-ಬಿಗುಮಾನ ಇಲ್ಲದಿರುತ್ತಿರಲಿಲ್ಲ.

ರಿಂಗ್‌ಮಾಸ್ಟರ್ ಜಾತಪ್ಪ ನಮ್ಮಲ್ಲಿ ತಮ್ಮ ಜವಾರಿತನದಿಂದ ಉತ್ಸಾಹ ತುಂಬುತ್ತಿದ್ದರು. ನಿಗಧಿತ ಪಠ್ಯದ ಜೊತೆಗೆ ಹತ್ತು ಹಲವು ವಿಷಯಗಳನ್ನು ಮನವರಿಕೆ ಮಾಡಿಕೊಡುತ್ತಿದ್ದರು. ಸೂರ್ಯೋದಯಕ್ಕೂ ಪೂರ್ವದಲ್ಲಿ.... ಅಂದರೆ ನಾಲ್ಕೂವರೆ ಗಂಟೆಗೆ ಸರಿಯಾಗಿ ಎಚ್ಚರಗೊಂಡು ಗಟ್ಟಿಯಾಗಿ ಓದುವುದು ಅನಿವಾರ್ಯವಾಗಿತ್ತು. ಅದಕ್ಕೆ ಪೂರಕವಾಗಿ ಮಲಗುವ ಪೂರ್ವದಲ್ಲಿ ನಾವೆಲ್ಲ ಒಂದೆರಡು ತಂಬಿಗೆ ನೀರು ಕುಡಿದು ಮಲಗುವುದು ಕಡ್ಡಾಯವಾಗಿತ್ತು. ನಮ್ಮ ಮೂತ್ರಾಶಾಯ ತುಂಬಿ ಜೀಕರಿಸುವುದಕ್ಕಿಂತ ದೊಡ್ಡ ಅಲರಾಂ ಈ

ಪ್ರಪಂಚದಲ್ಲಿ ಯಾವುದೂ ಇಲ್ಲವೆಂಬುದು ಅವರ ತರ್ಕವಾಗಿತ್ತು. ಅವರು ಕೆಲವೊಮ್ಮೆ ದುಪ್ಪಟಿ ಹೊದ್ದು ಸಿ.ಐ.ಡಿ.ಯಂತೆ ಬಂದು ಕಿಟಕಿ ಮೂಲಕ ನಮ್ಮೆಲ್ಲರ ಬ್ರಾಹ್ಮೀ ಮಹಾಪ್ರಾಣ, ಅಲ್ಪಪ್ರಾಣ, ಅನುನಾಸಿಕಕ್ಕೆ ಸಂಬಂಧಿಸಿದ ತಪ್ಪುಗಳನ್ನು ಪತ್ತೆ ಹಚ್ಚಿ ತಿದ್ದುತ್ತಿದ್ದರು. ಮೊದಲೇ ಅಪ್ಪನ ಗರಡಿಯಲ್ಲಿ ನುರುಪಡಿಯಾಗಿದ್ದ ಫೋನಿಕ್‌ಸಿಸ್ಟಂ ನನ್ನ ಬಾಯಿಯೊಳಗಿತ್ತು ತಾನೆ!... ಅಲ್ಲದೆ ವ್ಯಾಸಂಗದಲ್ಲಿ ಎಲ್ಲರಿಗಿಂತ ತುಸು ಮುಂದೂ ಇದ್ದೆನು... ಅದೂ ಅಲ್ಲದೆ ಹಗಲಿರುಳುಗಳ ಪರಿವಿರದೆ ಓದುವುದರಲ್ಲಿ ನಿಸ್ಸೀಮನಾಗಿದ್ದ ನನ್ನನ್ನು ಅವರು ಟ್ಯೂಷನ್‌ಗೇನೆ ಲೀಡರ್ ಮಾಡಿದ ಬಳಿಕ ನನ್ನ ಖರದೇ ಬದಲಾಯಿತು. ಒಬ್ಬ ಕುಂಬಾರರ ಹುಡುಗ ತಮ್ಮಂಥ ಶ್ರೀಮಂತ ಹುಡುಗರ ಲೀಡರ್ ಆಗುವುದೆಂದರೇನು? ಕೆಲವು ಹುಡುಗರು ಮೊದಮೊದಲು ಅಸಹಕಾರ ಚಳವಳಿ ನಡೆಸಿ ತದನಂತರ ಸರಿದಾರಿಗೆ ಬಾರದೆ ಇರಲಿಲ್ಲ. ಎಲ್ಲಾ ಮಾಸ್ತರರುಗಳಿಗಿಂತ ನನಗೆ ಜಾತಪ್ಪ ಮಾಸ್ತರರೆಂದರೆ ಅಚ್ಚುಮೆಚ್ಚು. ಅವರೊಳಗಿನ ಎಲ್ಲಾ ಪ್ರತಿಭೆಗೆ ಉತ್ತರಾಧಿಕಾರಿಯಾಗಬೇಕೆಂದು ಹಪಹಪಿಸುತ್ತಿದ್ದುದೇ ಅದಕ್ಕೆ ಕಾರಣ. ನನಗೆ ಚಾರ್‌ಕೋಲ್ ಪೆನ್ಸಿಲ್ ಪರಿಚಯಿಸಿದ್ದೇ ಅವರು. ನಾನು ಸೊಟ್ಟ-ಬಟ್ಟ ಚಿತ್ರಗಳನ್ನು ಬರೆದು ಅವರಿಗೆ ತೋರಿಸುತ್ತಿದ್ದುದಲ್ಲದೆ ಅವರ ಪ್ರತಿ ಚಲನವಲನಗಳನ್ನು ಕ್ಷುಣ್ಣವಾಗಿ ಗಮನಿಸುತ್ತಿದ್ದೆನು. ಅವರ ಮನೆಯಲ್ಲಿ ಕಸಗುಡುಸುವುದು, ಬಸವನಬಾವಿಯಿಂದ ನೀರು ಸೇದಿ ತರುವುದು. ಅವರನ್ನು ಮಾತಿಗೆಳೆಯುವುದು.... ಹೀಗೆ... ಗುರುವಿನ ಗುಲಾಮನಾಗದರ ಹೊರತು....

ಕೆಲವು ಸಂಗತಿಗಳನ್ನೆಲ್ಲ ಪ್ರಸ್ತಾಪಿಸುವುದು ಮುಖ್ಯ... ಅವರು ತಾವು ತರಿಸುತ್ತಿದ್ದ 'ಪ್ರಪಂಚ' ವಾರಪತ್ರಿಕೆಯನ್ನು ನನ್ನಿಂದ ಗಟ್ಟಿಯಾಗಿ ಓದಿಸುತ್ತಿದ್ದರು. ಅದರಲ್ಲಿನ 'ಅನುಭವದಲ್ಲಿ ಅಮೃತವಿದೆ' ಎಂಬ ಅಂಕಣವನ್ನು ನನ್ನಿಂದ ಯಾನೆ ನಮ್ಮಿಂದ ಬಾಯಿಪಾಠ ಮಾಡಿಸುತ್ತಿದ್ದರು. ಎಲ್ಲರಿಗಿಂತ ಮೊದಲೇ ಕಂಠಪಾಠ ಮಾಡಿ ಒಪ್ಪಿಸುತ್ತಿದ್ದ ನಾನೆಂದರೆ ಅವರಿಗೆ ಇಷ್ಟ. ಪ್ರಾದೇಶಿಕ ವಾರ್ತೆಗಳನ್ನು ಕೇಳುವುದು, ಅವುಗಳಲ್ಲಿನ ಮುಖ್ಯಾಂಶಗಳನ್ನು ಒಪ್ಪಿಸುವುದು ಕೂಡ ಪಾಠದ ಒಂದು ಅವಿಭಾಜ್ಯ ಅಂಗವಾಗಿತ್ತು. ನಾವ್ಯಾರು ರೇಡಿಯೋದ ಸುಂದರ ಮೂರ್ತಿಯನ್ನು ನೋಡಿದ್ದರೆ ತಾನೆ!.... ಅದಿರುತ್ತಿದ್ದುದು ಪಂಚಾಯ್ತಿ ಕಛೇರಿಯ ಬಳಿ. ಎತ್ತರದ ಕಂಭದ ತುದಿಗೆ ಅದನ್ನ ಕಟ್ಟಿರುತ್ತಿದ್ದರು. ಅದರ ಚಂದ ಯಾವುದೇ ಗುಡಿಗೋಪುರಕ್ಕಿಂತ ಕಡಿಮೆಯಿರಲಿಲ್ಲ. ಬೆಳೆಗ್ಗೆ ಏಳಾದೊಡನೆ ನಾನಲ್ಲಿಗೆ ಓಡಿ ವಾರ್ತೆಗಳನ್ನಾಲಿಸುತ್ತಿದ್ದೆ. ಅದರಲ್ಲಿನ ಕೆಲವು ಮುಖ್ಯಾಂಶಗಳನ್ನು ಅಲ್ಲಿಯೇ ಬರೆದುಕೊಳ್ಳುತಲಿದ್ದದ್ದು ಕೆಲವರಿಗೆ ವಿಚಿತ್ರವೆನ್ನಿಸುತ್ತಿತ್ತು. ಆಗ ಪ್ರಧಾನಿಯಾಗಿದ್ದ ಲಾಲ್‌ಬಹಾದ್ದೂರ ಶಾಸ್ತ್ರಿಯವರ 'ಜೈಜವಾನ್ ಜೈಕಿಸಾನ್' ಎಂಬ ಘೋಷಣೆ ಷಡಕ್ಷರಿಮಂತ್ರಕ್ಕಿಂತ ಮಿಗಿಲಾಗಿತ್ತು. ಅಲ್ಲದೆ ಆಗ ಭಾರತಮಾತೆ ಆಹಾರ ಸಮಸ್ಯೆಯಿಂದ ತತ್ತರಿಸುತ್ತಿದ್ದಳಷ್ಟೆ. ಅವರು ನಾಗರಿಕರು ವಾರಕ್ಕೊಮ್ಮೆ ತಮ್ಮ ಒಂದು ಹೊತ್ತಿನ ಊಟವನ್ನು ದೇಶಕ್ಕಾಗಿ ತ್ಯಾಗ ಮಾಡುವಂತೆ ಸಲಹೆ ನೀಡಿದರು. ಓಹ್! ಅದೊಂದು ಅದ್ಭುತವಾದ ಸಲಹೆ! ಜಾತಪ್ಪ ಮಾಸ್ತರರು ಅದನ್ನು ಬೆಂಬಲಿಸಿದರೆಂದರೆ ಕೇಳುವುದೇನಿದೆ. ಪ್ರಸಿದ್ಧ ಕೂಳುಬಾಕನೆಂಬ ಕುಖ್ಯಾತಿಗೊಳಗಾಗಿದ್ದ ನಾನು ಸೋಮವಾರದ ಮಧ್ಯಾಹ್ನದ ರುಚಿಕರ ಊಟವನ್ನು ತ್ಯಜಿಸಿದೆನು. ಈಗಲೂ ನೆನಪಿಸಿಕೊಳ್ಳುವ ಒಂದು ಘಟನೆಯೆಂದರೆ....

ಆಗ ಪ್ರತಿಯೊಂದು ಶಾಲೆಯಲ್ಲೂ ಸರಸ್ವತಿ ಪೂಜೆ ಒಂದು ರೀತಿ ಕಡ್ಡಾಯವಾಗಿತ್ತು. ಅದಕ್ಕೆ ನಮ್ಮ ಟ್ಯೂಷನ್ನೂ ಹೊರತಾಗಿರಲಿಲ್ಲ. ನಮ್ಮ ಮನೆಯಲ್ಲಿದ್ದ ರಂಗಪ್ಪ ವಿಶೇಷ ರೀತಿಯಲ್ಲಿ ತಯಾರಿಸಿಕೊಟ್ಟಿದ್ದ ಹುಂಡಿಗಡಿಗೆಗೆ ನಾವೆಲ್ಲರೂ ರಿಂಗ್ ಮಾಸ್ಟರ್ ಸಮಕ್ಷಮ ಪ್ರತಿ ಗುರುವಾರ ಸಂಜೆ ನಾಲ್ಕಾಣೆ ಚೂರು ಉದುರಿಸುವುದು ಕಡ್ಡಾಯವಾಗಿತ್ತು... ಎಲ್ಲರಂತೆ ನಾನೂ ಅದರೊಳಗೆ ಉದುರಿಸುತ್ತಿದ್ದೆನು.... ಅದೂ ಒಲ್ಲದ ಮನಸ್ಸಿನಿಂದ, ಕಾರಣ ಅರೆಬರೆ ನಾಸ್ತಿಕನಾಗಿದ್ದ ನನಗೆ ಶ್ರಮದಲ್ಲಿ ನಂಬಿಕೆ ಇತ್ತೇ ಹೊರತು ಪೂಜೆಯಲ್ಲಿ ನಂಬಿಕೆಯಿರಲಿಲ್ಲ. ಆದ್ದರಿಂದ ನಾನು ಯಾರಿರದ ಹೊತ್ತಿನಲ್ಲಿ ಕಡ್ಡಿಯ ಸಹಾಯದಿಂದ ನಾಲ್ಕಾಣೆ ಚೂರನ್ನು ಉದುರಿಸಿ ತುಪ್ಪದ ಪೆಪ್ಪರ್‌ಮೆಂಟ್ ಖರೀದಿಸಿ ತಿಂದು ಎಂಜಲನ್ನು ಚಲ್ಲಣಕ್ಕೆ ಒರೆಸಿಕೊಂಡು ರಾಜಗಾಂಭೀರ್ಯ ಪ್ರಕಟಿಸುತ್ತಿದ್ದೆನು....

ಪೂಜೆಯ ತಿಂಗಳಾದ ಎಪ್ರೀಲು ಬಂದೊಡನೆ ನನ್ನ ಎದೆ ಡವಗುಟ್ಟಲಾರಂಭಿಸಿತು. ಮಾಸ್ತರರ ಸಮಕ್ಷಮ ಹುಂಡೆಗಡಿಗೆಯನ್ನು ಒಡೆದು ಸಂಗ್ರಹಿತ ಹಣವನ್ನು ಎಣಿಸಲಾಯಿತು. ಒಬ್ಬರು ಹಾಕಿಲ್ಲದಿರುವುದು ಬೆಳಕಿಗೆ ಬಂತು. ಆ ಪ್ರತಿಭಾವಂತ ಯಾರಿದ್ದಿರಬಹುದು?..... ಎಲ್ಲರ ಮುಖವನ್ನು ರಿಂಗ್ ಮಾಸ್ತರ್ ತೀಕ್ಷ್ಣವಾಗಿ ದಿಟ್ಟಿಸಿದರಾದರೂ ಪ್ರಯೋಜನವಾಗಲಿಲ್ಲ. ಸರಸ್ವತಿಪೂಜೆ ಮುಗಿದ ಸಂಜೆ ಅವರು ನನ್ನನ್ನು ಪ್ರತ್ಯೇಕವಾಗಿ ಮನೆಗೆ ಕರೆದೊಯ್ದರಲ್ಲದೆ ತಿನ್ನಲು ಒಂಚೂರು ತಿಂಡಿ ಕೊಡುತ್ತ ಹತ್ತಿರದಲ್ಲಿ ಕೂಡ್ರಿಸಿಕೊಂಡರು. ''ನಿಜ ಹೇಳು'' ಎಂದು ತಣ್ಣಗೆ ಕೇಳಿದರು. ಅವರೆದುರು ಸುಳ್ಳು ಹೇಳುವ ಧೈರ್ಯ ಬರಲಿಲ್ಲ. ತಲೆತಗ್ಗಿಸಿದೆ. ಆಗ ಅವರು ನನ್ನ ಮೈದಡವಿ ''ವೀರಭದ್ರಿ. ನೀನು ಮುಂದೆ ತುಂಬಾ ಬುದ್ದಿವಂತನಾಗುತ್ತೀ ಒಂದು, ಇಲ್ಲಾ ಕುಖ್ಯಾತ ರೌಡಿಯಾಗುತೀ ಒಂದು'' ಎಂದು ಭವಿಷ್ಯ ನುಡಿದದ್ದನ್ನು ಕೇಳಿಸಿಕೊಂಡ ನವವಿವಾಹಿತೆ ಸುಶೀಲಕ್ಕ ಮುಗುಳ್ನಕ್ಕರು. ಇರಲಿ...

ಪಬ್ಲಿಕ್ ಪರೀಕ್ಷೆಗಳು ನಡೆದದ್ದೂ ಆಯಿತು, ಫಲಿತಾಂಶ ಬಂದದ್ದೂ ಆಯಿತು. ಬೆರಳು ತೋರಿಸಿದರೆ ಹಸ್ತ ನುಂಗುವ ಜಾಯಮಾನದವನಾಗಿದ್ದ ನಾನು ಕಥೆ, ಕಾದಂಬರಿಗಳ ಉಸಾಬರಿಗೆ ಹೋಗದೇ ಇದ್ದ ಪಕ್ಷದಲ್ಲಿ ತಾಲ್ಲೂಕಿಗೊಂದೇ ಏಕೆ ಇಡೀ ಮೈಸೂರು ರಾಜ್ಯಕ್ಕೇನೆ ಫಸ್ಟ್ ಬರುತ್ತಿದ್ದೆನೇನೋ!... ವಿಷಯ ತಿಳಿದ ಅಪ್ಪನ ಖುಷಿಗೆ ಮೇರೆಗಳಿರಲಿಲ್ಲ. ಮೇ ತಿಂಗಳು ಬೇರೆ. ಅಲ್ಲದೆ ಬೆಕ್ಕಿನ ತೊರಡು ಗಾತ್ರದ ಮಾವಿನ ಹಣ್ಣುಗಳ ಸೀಜನ್ನು ಅಪ್ಪ ಸುಮ್ಮನಿದ್ದಾನೆಯೇ... ಹೋಳಿಗೆ ಸೀಕರಣೆ ಮಾಡಿಸಿ ಓಣಿಗೆಲ್ಲಾ ಊಟ ಹಾಕಿಸಿದ. ಅದೇ ದಿವಸ ಗಚ್ಚಿನಮಠ ಶಾಲೆಯ ಎಲ್ಲಾ ಶಿಕ್ಷಕರನ್ನು ಅಮಂತ್ರಿಸಿ ಗೌರವಿಸಿದ. ಅವರೆಲ್ಲ ನನ್ನ ಮೇದಡವಿ ಮುಂದೆ ನೀನು 'ಡಾಕ್ಟರಾಗಬೇಕು, ಇಂಜಿನೀರಾಗಬೇಕು, ದೊಡ್ಡ ವಕೀಲಾಗಬೇಕು' ಎಂದು ನನ್ನಲ್ಲಿ ತಮ್ಮ ಅರೆಬರೆ ಕನಸುಗಳನ್ನು ತೋಡಿಕೊಂಡರೇ ವಿನಃ ಒಬ್ಬರಾದರೂ 'ನೀನು ಒಳ್ಳೆಯ ಮೇಸ್ಟ್ರಾಗಬೇಕು' ಎಂದು ಅಪ್ಪಿತಪ್ಪಿಯೂ ಹೇಳಲಿಲ್ಲ. ಆದರೆ ಫೇಲಾಗುವ ಉದ್ದೇಶದಿಂದ ಪರೀಕ್ಷೆ ಬರೆದಿದ್ದ ನನಗೆ ಎಳ್ಳಷ್ಟೂ ಖುಷಿಯಿರಲಿಲ್ಲ, ಕಾರಣ ಹೈಸ್ಕೂಲು ಭಯೋತ್ಪಾದಕರ ಅಡಗುದಾಣವೆಂದು ಅನ್ಯಥಾ ಭಾವಿಸಿದ್ದೆ.

❖

– ದಂನಳ

- ಎಲ್ಲ ದೇಶಗಳಲ್ಲೂ ಸೈನ್ಯವಿದ್ದರೆ ಪಾಕಿಸ್ತಾನದಲ್ಲಿ ಸೈನ್ಯಕ್ಕೆ ದೇಶವಿದೆ.
- 'ದೇಶ ಮೊದಲು' ಎಂಬ ಘೋಷಣಾ ವಾಕ್ಯ ಓದಿದ ಒಬ್ಬ ಸೆಕ್ಷನ್ ಆಫೀಸರ್ 'ಆದರೆ ನಮ್ಮ ವಿಧಾನ ಸೌಧದಲ್ಲಿ ಆದೇಶ ಮೊದಲು' ಎಂದು ಉದ್ಗರಿಸಿದರಂತೆ.
- Always show the YOU in you. That makes you the you that you are.
- ಸಿಂಹಗಳು ತಮ್ಮದೇ ಆದ ಚರಿತ್ರೆಕಾರರನ್ನು ಹೊಂದುವವರಿಗೂ ಅವುಗಳ ಚರಿತ್ರೆಯನ್ನು ಬೇಟೆಗಾರರು ಬರೆಯುತ್ತಾರೆ.
- ಗುಮ್ಮನೊಬ್ಬ ನಾಮ ಹಲವು.

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ಸಿನಿಮಾ ಮಂದಿ ಪಾಲಿಟಿಕ್ಸ್‌ಗೆ ಅಂದರೆ ಸಡನ್ ಸಮಾಜ ಸೇವೆಯ ಹಂಬಲ?
- Vidya Balan's 'Kahaani' has a 'male' heroine!
- ನಮ್ಮ ದೇವರುಗಳು ಕೂತ ಗೋಡೆಯ ಹಿಂಭಾಗದಲ್ಲೇ ಪಕ್ಕದ ಮನೆಯವರು ಟಾಯ್ಲೆಟ್ ಇದೆ ಎಂಬುದು ತುಂಬಾ ತಡವಾಗಿ ಗೊತ್ತಾಗುವುದಂತೆ ಅಪಾರ್ಟ್‌ಮೆಂಟುಗಳಲ್ಲಿ ವಾಸಿಸುವವರಿಗೆ!
- ಒಂದು ಕೊಂಡರೆ 10% ಉಳಿಸಬಹುದು, ಎರಡು ಕೊಂಡರೆ 20% ಉಳಿಸಬಹುದು, ಮೂರು ಕೊಂಡರೆ 40% ಉಳಿಸಬಹುದು, ಏನೂ ಕೊಳ್ಳದಿದ್ದರೆ 100% ಉಳಿಸಬಹುದು.
- Silence is not only golden, it is not misquoted.
- ನನ್ನ ಸಲಹೆ ಕೇಳಿ ಇತರರು ಮಾಡುವ ತಪ್ಪುಗಳಿಂದ ನಾನು ಪಾಠ ಕಲಿಯುತ್ತೇನೆ.
- ಪರೀಕ್ಷೆಗಳು ಇರುವವರೆಗೂ ಶಾಲೆಗಳಲ್ಲಿ ಪ್ರಾರ್ಥನೆ ಇರುತ್ತದೆ.
- While creating husbands God promised women that good and ideal husbands would be found in all corners of the world. Then he made the earth round.
- ನೀವು ಯಾವುದರ ಬಗ್ಗೆ ಏನೂ ಮಾಡಲು ಸಾಧ್ಯವಿಲ್ಲವೋ ಅದರ ಬಗ್ಗೆ ಚಿಂತೆ ಮಾಡಲೇ ಬೇಡಿ.
- Atmosfear ಎಂದರೆ?

✵

# ಲೇಟೆಸ್ಟ್ ನಿಶ್ಚಿತಾರ್ಥ

- ಶ್ರೀನಿವಾಸ ಕುಂಡಂತಾಯ

**ನೆ**ನಪಿನ ಮೆರವಣಿಗೆ ಹಿಂದಿನ ಕಾಲಕ್ಕೆ ಕರೆದೊಯ್ಯಿತು. ನಮ್ಮ ಹಳ್ಳಿಮನೆ ಜಗಲಿಯಲ್ಲಿ ಕುಕ್ಕರುಗಾಲಿನಲ್ಲಿ ಕುಳಿತು ಯಾವುದೋ ವಿಚಾರ ನನ್ನಲ್ಲಿ ಹೇಳಬೇಕೆಂದು ಉತ್ಸಾಹದಲ್ಲಿ ಮಾತು ಆರಂಭಿಸಿದಾಗಲೇ ಅಪ್ಪನಿಗೆ ಸತತ ಕೆಮ್ಮು ಬರಬೇಕೇ? ಕಫ ಕಿತ್ತು ಹೊರಬರುತ್ತಿಲ್ಲ. ಕೊನೆಗೂ ಕಫ ಹೊರತರುವಲ್ಲಿ ಯಶಸ್ವೀ ಆದ ನನ್ನಪ್ಪ ತೋಟದ ತನಕ ಹೋಗಿ ಉಗಿದು ಬಂದರು. ಬಿಡದೇ ಕೆಮ್ಮಿದ್ದು, ತೋಟದ ತನಕ ಹೋಗಿ ಬಂದದ್ದು ಅವರಿಗೆ ದೊಡ್ಡ ವ್ಯಾಯಾಮದಂತಾಗಿ ದಮ್ಮು (ಉಬ್ಬಸ) ಆರಂಭವಾಯಿತು. ಕುಯ್ ಕುಯ್ ಎಂದು ಪಿಟೀಲಿನಿಂದ ಬರುವ ಶಬ್ದದಂತೆ ಉಸಿರಾಡುವಾಗಿನ ಶಬ್ದ, ತಾಳವೇನೋ ಎಂಬಂತೆ ನಡು ನಡುವೆ ಕೆಮ್ಮು, ಈ ಎಲ್ಲಾ ಅವಸ್ಥೆ ಮುಗಿದು ಉಸಿರಾಟದ ವ್ಯವಸ್ಥೆ ಸರಿಯಾದ ನಂತರ ತನ್ನ ಜೀವನದ ಫ್ಲಾಶ್ ಬ್ಯಾಕ್ ನನ್ನ ಮುಂದಿಟ್ಟಿದ್ದು ಹೀಗೆ ನೋಡು, ನನಗೆ ಹತ್ತೊಂಬತ್ತು ವಯಸ್ಸಾದಾಗಲೇ ನನ್ನ ತಂದೆ, ತಾಯಿ ಹುಡುಗಿ ಹುಡುಕಿದರು. ನಾನು ನೋಡಿ ಬಂದು ಒಪ್ಪಿಗೆ ಸೂಚಿಸಿದೆ. ನಿಶ್ಚಿತಾರ್ಥಕ್ಕೆ ನಮ್ಮ ತಂದೆ, ಮಾವ, ಅತ್ತೆ, ಪುರೋಹಿತರು ಹಣ್ಣು ಕಾಯಿ, ಎಲೆ ಅಡಿಕೆ, ಹೂವು ಇತ್ಯಾದಿ ತಕೊಂಡು ವಧುವಿನ ಮನೆಗೆ ಹೋದರು. ಬಿಸಿಲಲ್ಲಿ ಬಂದಿದ್ದಾರೆಂದು ವಧು ಮನೆಯವರಿಂದ ಬೆಲ್ಲ, ನೀರು, ಪಾನಕದ ಉಪಚಾರವಾದ ನಂತರ, ಮದುವೆ ಎಲ್ಲಿ? ಹೇಗೆ? ಯಾವ ದಿನ ಎಲ್ಲರಿಗೂ ಅನುಕೂಲ? ಇತ್ಯಾದಿ ಮಾತುಕತೆ ಆಡಿ ಮುಗಿಸಿದರು. ಹೂವು ಹಣ್ಣಿನ ತಟ್ಟೆ ಪರಸ್ಪರ ಬದಲಿಸಿಕೊಂಡು ಹಿಂದಿರುಗಿ ಬಂದರು. ಅಲ್ಲಿಗೆ ನಿಶ್ಚಿತಾರ್ಥ ಕಾರ್ಯಕ್ರಮ ಮುಗಿಯಿತು ಅಂದರು. ಆಹಾ....... ಎಷ್ಟು ಸರಳವಾಗಿ, ಸುಲಭವಾಗಿ ಯಾರಿಗೂ ಹೆಚ್ಚು ತೊಂದರೆಯಿಲ್ಲದೆ ಆಗಿನ ದಿನಗಳಲ್ಲಿ ನಿಶ್ಚಿತಾರ್ಥ ಮುಗಿದು ಹೋಗುತ್ತಿತ್ತು ಅಂತ ಕಲ್ಪಿಸಿಕೊಂಡು ಸುಖಿಸಿದೆ.

ನನಗೆ ನನ್ನ ಮದುವೆ ನೆನಪಾಯಿತು. ರಜೆಯಲ್ಲಿ ನನ್ನ ಹಳ್ಳಿಗೆ ನಾನು ಬಂದಿದ್ದಾಗ, ಪಕ್ಕದ ಹಳ್ಳಿಯಲ್ಲಿದ್ದ ನನ್ನ ತಾತನ ಮನೆಗೆ ಸುಂದರವಾದ ಹುಡುಗಿ ಬಂದಿದ್ದಾಳೆಂದೂ, ನಾನು ಹೋಗಿ ಆಕೆಯನ್ನು ನೋಡಿ ಬರಬೇಕೆಂದೂ ಅಪ್ಪ ಕಟ್ಟಪ್ಪಣೆ ವಿಧಿಸಿದ್ದು, ನಾನು ಅವರ ಆಜ್ಞೆ ಶಿರಸಾ ವಹಿಸಿದ್ದು, ಮನಸ್ಸಲ್ಲಿ ಕಲ್ಪನೆಯ ಹಕ್ಕಿ ಗರಿಗೆದರಿದ್ದು, ಈಗ ನಡೆಯಿತೆಂಬಂತೆ ಸ್ಪಷ್ಟವಾಗಿದೆ.

ತಾತನ ಮನೆಗೆ ಹೋದಾಗ ಗೋಡೆಗೆ ಒರಗಿ ಕುಳಿತು, ಕೈಯಿಂದಲೇ ರವಿಕೆಗೆ ಹೊಲಿಗೆ ಹಾಕುತ್ತಿದ್ದಳು. ಮುಗುಳ್ನಗೆ ಬೀರಿದಾಕ್ಷಣ ನನ್ನ ಹೃದಯಕ್ಕೂ ಬಿಚ್ಚಲಾಗದ ಹೊಲಿಗೆ ಬಿತ್ತು. ಆ ಪ್ರಾಯದಲ್ಲಿ ಎಲ್ಲಾ ಹೆಣ್ಣು ಸುಂದರವಾಗಿಯೇ ನನ್ನ ಕಣ್ಣಿಗೆ ಕಾಣುತ್ತಿದ್ದರು. ಇನ್ನು ಸುಂದರಿ ಹೆಣ್ಣು ಎಷ್ಟೊಂದು ಸುಂದರವಾಗಿ ಕಂಡಿರಬೇಕು ನೀವೇ ಊಹಿಸಿ! ಆಗುವುದಾದರೆ ಇವಳನ್ನೇ ಮದುವೆ ಆಗುವುದೆಂದು ಆಗಲೇ ಮನದಲ್ಲಿ ನಿಶ್ಚಯಿಸಿದ್ದೆ. ಇದೇ ನನ್ನ ಮದುವೆ ನಿಶ್ಚಿತಾರ್ಥ.

ಬೇರೆ ಪ್ರತ್ಯೇಕ ಕಾರ್ಯಕ್ರಮ ಏರ್ಪಡಿಸಲೇ ಇಲ್ಲ. ಮದುವೆ ಎಂಬ ಕೋಟೆಯ ಹೊರಗೆ ನಿಂತಿದ್ದಾಗ ದಾಂಪತ್ಯ ಜೀವನದ ಬಗ್ಗೆ ಕಗ್ಗಂಟಾಗಿದ್ದ ಕುತೂಹಲಕ್ಕೆ ಕೊನೆ ಕಂಡಿದ್ದು ಮದುವೆ ಮಂಟಪದಲ್ಲಿ ನಾನು ಮೆಚ್ಚಿದ ಹುಡುಗಿಯ ಕೊರಳಿಗೆ ತಾಳಿ ಕಟ್ಟಿ ಗಟ್ಟಿಯಾಗಿ ಮೂರು ಗಂಟು ಹಾಕಿದಾಗಲೇ.

ನನ್ನ ಅಪ್ಪನಿಗೆ ನಾಲ್ಕೇ ನಾಲ್ಕು ಜನ ಹೋಗಿ ಸಿಂಪಲ್ ಆಗಿ ನಿಶ್ಚಿತಾರ್ಥ ನೆರವೇರಿಸಿದರು. ನನಗಂತೂ ಮನದೊಳಗೇ ನಿಶ್ಚಿತಾರ್ಥ ಮುಗಿಯಿತು. ನಿಶ್ಚಿತಾರ್ಥ ನಡೆದು ಬಂದ ರೀತಿಯ ಬಗ್ಗೆ ಕಣ್ಣೋಟ ಹರಿಸಿದೆ. ಕೆಲವು ವರ್ಷಗಳ ನಂತರ ನಿಶ್ಚಿತಾರ್ಥಕ್ಕೆ ಹತ್ತಿಪ್ಪತ್ತು ಜನ ಸೇರುವುದು ಅಂತ ಆಯ್ತು. ದುಬೈನಿಂದ ಸಾಕಷ್ಟು ಹಣಗಳಿಸಿ ಬಂದವರೊಬ್ಬರು ನೂರು ಜನರನ್ನು ಆಹ್ವಾನಿಸಿ ನಿಶ್ಚಿತಾರ್ಥ ಮಾಡಿದರು. ಲಘು ಉಪಹಾರ, ಕಾಫಿ, ಟೀ ಬಂದವರಿಗೆ ಕೊಡುವುದು ಆರಂಭವಾಯಿತು. ಮುಂದೆ ಕೆಲವರು ವಧುವಿಗೆ ಚಿನ್ನದುಂಗುರ, ವರನಿಗೆ ಹೊಸಬಟ್ಟೆ ಕೊಡುವುದನ್ನು ಚಾಲನೆಗೆ ತಂದರು. ಮುಂದೆ ನಿಶ್ಚಿತಾರ್ಥವಿದ್ದರೆ ಫೋಟೋಗ್ರಾಫರ್ ಬೇಕೇ ಬೇಕು ಎಂಬ ಕಟ್ಟಳೆ ಆರಂಭವಾಯಿತು. ಮುಂದಿನ ಜನರೇಷನ್ ಯುವಕರು ಹೆಚ್ಚು ಮಂದಿ ಸಾಫ್ಟ್‌ವೇರ್ ಇಂಜಿನಿಯರ್ ಆದಾಗ, ಅವರ ನಿಶ್ಚಿತಾರ್ಥಕ್ಕೆ 200-300 ಜನ ಜಮಾಯಿಸುವುದು ಹುಡುಗಿಗೆ ವಜ್ರದ ಉಂಗುರ, ರೇಷ್ಮೆ ಸೀರೆ, ವರನಿಗೂ ಚಿನ್ನ ಅಥವಾ ವಜ್ರದುಂಗುರ ಬಂದವರಿಗೆ ಊಟದ ವ್ಯವಸ್ಥೆ ಅಂತ ಆರಂಭವಾಯಿತು.

ಉಳ್ಳವರು ಶಿವಾಲಯವ ಮಾಡುವರಯ್ಯ? ನಾನೇನ ಮಾಡುವೆನಯ್ಯ ಅಂತ ಇಲ್ಲದವರು ಇಲ್ಲಾಂತ ಸುಮ್ಮನೆ ಕೂರಲಿಲ್ಲ, ಅವರಿಗಿಂತ ಗೌಜಿಯಲ್ಲಿ ನಿಶ್ಚಿತಾರ್ಥ ಮಾಡುವುದಕ್ಕೆಂದು ಸ್ಪರ್ಧೆ ಏರ್ಪಡಿಸಿಕೊಂಡು ಆಹ್ವಾನಿತರ ಸಂಖ್ಯೆ ಏರಿಸಿಕೊಂಡಿದ್ದು ಮಾತ್ರವೇ ಅಲ್ಲ, ಊಟದಲ್ಲಿ ಐದು ಬಗೆ ಸಿಹಿ, ಐದು ಬಗೆ ಪಲ್ಯ, ಐದು ಬಗೆ ಖಾರ ಅಂತ ಚಾಲ್ತಿಗೆ ತಂದರು.

ಇವರೇ ಹೀಗೆ ಮಾಡಿದರೆಂದರೆ ಉಳ್ಳವರು ಸೋಲುವವರೇ!? ಇನ್ನಷ್ಟು ಐಟಂಗಳನ್ನು ಇಂಟ್ರಡ್ಯೂಸ್ ಮಾಡಿದ್ದಲ್ಲದೆ ಫೋಟೋಗ್ರಾಫರ್ ಜೊತೆಗೆ ವಿಡಿಯೋಗ್ರಾಫರ್ ಇರಲೇಬೇಕೆಂದು ಹೊಸ ಸಂಪ್ರದಾಯ ಹುಟ್ಟಿಸಿದರು. ಇಷ್ಟೆಲ್ಲ ಯಾಕೆ ಹೇಳುತ್ತಾ ಬಂದೆನೆಂದರೆ ಇತ್ತೀಚೆಗೆ ಒಂದು ದಿನ ನನಗೊಂದು ಫೋನ್ ಬಂತು.

''ಹಲೋ.................. ನಾನು ಯಾರು ಹೇಳು ಮತ್ತೆ?''

ನಾನು : ''ನೀವೇ ಹೇಳಿ................. ನೀವು ಯಾರು ಅಂತ ನನಗೆ ತಿಳಿಯುತ್ತಿಲ್ಲ....''

''ಯಾವುದೋ ಜಮಾನದಲ್ಲಿ ಎಲ್ಲೋ ಕೇಳಿದ ವಾಯ್ಸ್ ತರ ಇದೆ.... ಆದ್ರೆ ನಿಖರವಾಗಿ ಯಾರೂಂತ ಹೇಳೋಕೆ ನೆನಪಾಗ್ತಾ ಇಲ್ಲ''

''ಇಷ್ಟು ಬೇಗ ಮರ್ತ್ರೋಯ್ತಾ..? ಇದ್ಯಾಕೋ ಸೀನ?''

ನನ್ನ ಧ್ವನಿ ಗೊತ್ತಾಗ್ಲಿಲ್ವೇನೋ ನಾನು ಕಣೋ ಗುಂಡ.

ನಾನು : ಯಾವ ಗುಂಡನೋ? ನಾನು ಓದ್ತಾ ಇದ್ದ ಕಾಲದಲ್ಲಿ ಭೀಮ ಅಂತ ಕ್ಲಾಸ್ ಮಾನಿಟರ್ ಇದ್ದ, ಅವನ್ನ ಗುಂಡಾ ಅನ್ತಿದ್ವಿ ಅವ್ನಾ?

ಗುಂಡ : ಲೋ.... ಅಲ್ಲಾ ಕಣೋ.... ನೆನಪು ಮಾಡಿಕೋ ಡೊಂಬವಿಲಿ, ಮನ್‌ಪಡಾರೋಡ್, ಗುರುಕೃಪಾ ಹೋಟೆಲ್, ಓನರ್ ಭುಜಂಗ ಶೆಟ್ರು... ನಾವಿಬ್ರೂ ಕಿಚನ್ಮೇಟ್ ಅಲ್ವೇನೋ ಇಷ್ಟು ಬೇಗ ಮರೆತೇಬಿಟ್ಯೇನೋ?

ನಾನು : ಹ್ಞಾ... ಓಹೋ ಆ ಗುಂಡಾನಾ?

ಹೇಗೋ ನೆನಪಿರುತ್ತೆ ಹೇಳು, ನಾನು ಲೌವ್ ಮಾಡ್ತಿದ್ದ ಮರಾಠಿ ಹುಡ್ಗೀಗೆ ನೀನು ಡೌವ್ ಹೊಡ್ದೀ ಅಂತ, ನಾನು ಜಗಳ ಮಾಡಿದ್ದು, ನೀನು ಸಟ್ಟಗದಲ್ಲಿ ನಂಗೆ ತಲೆಗೆ ಹೊಡ್ದದ್ದು, ನಾನು ಜಾರದ ಹಿಂಭಾಗದ ಕೋಲಿಂದ ನಿನ್ನ ಹಿಂಭಾಗಕ್ಕೆ ಹೊಡ್ದಿದ್ದು, ಆ ಜಗಳ ಆದ್ಮೇಲೆ ನಾನು ಊರಿಗೆ ಬಂದ್ ಬಿಟ್ಟೆ.. ಆಮೇಲೆ ನಮ್ಮಿಬ್ಬರ ಸಂಪರ್ಕನೇ ಇಲ್ದೆ 25 ವರ್ಷಗಳೇ ಆಯ್ತು. ಹೇಗೆ ನೆನಪಾಗುತ್ತೇ ನೀನೇ ಹೇಳು?

ಗುಂಡ : ಅದ್ಸರಿ ಅನ್ನು, ನಂಗೆ ನೀನು ಜಾರದ ಹಿಂಬದಿಯಿಂದ ನನ್ನ ಹಿಂಬದಿಗೆ ಜೋರಾಗಿ ಹೊಡಿದ್ಯಾ ಅದು ಸರಿಯಾದ ಜಾಗಕ್ಕೆ ಬಹಳ ಜೋರಾಗೇ ಬಿದ್ದಿತ್ತು. ಈವತ್ತಿಗೂ ಟಾಯ್ಲೆಟ್‌ಗೆ ಹೋಗಬೇಕಂದ್ರೆ "ದಪ್ಪ ಒನಕೆ ಹೊರಬಂದ್ರೆ ಎಷ್ಟು ನೋಯಬಹುದೋ ಅಷ್ಟು ನೋವಾಗ್ತಾ ಇರ್ತದೆ. ಆಗ ನಿನ್ನ ನೆನಪು ನನಗಾಗುತ್ತೆ ಆದ್ರೂ ಕೋಪ....." ಇರ್ಲಿ ಬಿಡು ಆಗಿದ್ದು ಅಗಿಹೋಯ್ತು. ನಾನು ಯಾಕೆ ಫೋನ್ ಮಾಡ್ದೇ ಅಂದ್ರೆ... ನನ್ನ ಮಗಳ ನಿಶ್ಚಿತಾರ್ಥ ಬೆಂಗಳೂರು ಅರಮನೆ ಮೈದಾನದಲ್ಲಿ ಸ್ಪೆಷಲ್ ಪೆಂಡಾಲ್‌ನಲ್ಲಿ ಬರೋ ಭಾನುವಾರ ಇದೆ. ಯಾರು ಯಾರನ್ನೋ ಕೇಳಿ ಕೊನೆಗೂ ನಿನ್ನ ಫೋನ್ ನಂಬರ್ ಸಿಗ್ತು ಕರೀತಿದೀನಿ. ತಪ್ಪದೇ ಬರಬೇಕಯ್ಯ.

ನಾನು : ಹೌದ... ಮದುವೆ ವಯಸ್ಸು ಬಂದಿರೋ ಮಗಳು ಇದಾಳಾ? ಯಾವಾಗ್ಲೋ ನಿಂಗೆ ಮದ್ವೆ ಆಯ್ತು? ಅಳಿಯಾ ಆಗೋನು ಏನ್ ಮಾಡ್ಕೊಂಡಿದ್ದಾನೆ?

ಗುಂಡ : ಅಳಿಯ ಸ್ವಿಡ್ಜರ್‌ಲ್ಯಾಂಡ್‌ನಲ್ಲಿ ದೊಡ್ಡ ಕಂಪನೀಲಿ ಮ್ಯಾನೇಜರ್ರು ವರ್ಷಕ್ಕೆ 20 ಲಕ್ಷ ಸಂಬಳ ಬರ್ತದೆ.

ಸೀನ : ಅದು ಹ್ಯಾಗೋ ಅಂಥ ದೊಡ್ಡ ಸಂಬಂಧ ನಿಂಗೆ ಸಿಕ್ತು?

ಗುಂಡ : ಲೋ ನಾನೀಗ ಗುರುಕೃಪಾದಲ್ಲಿ ಕಿಚನ್ ಕೆಲಸದಲ್ಲಿದ್ದ ಗುಂಡಾ ಅಲ್ಲಾ ಕಣೋ. ಧರ್ಮ ರತ್ನಾಕರ, ದಾನ ಚೂಡಾಮಣಿ ಗುಂಡೂರಾಯರು ಕಣೋ ಸ್ವಂತ ಮನೆ ಕಾರು, ಫ್ಯಾಕ್ಟರಿ ಎಲ್ಲಾಕ್ಕೂ ನಾನು ಓನರ್.

ಸೀನ : ಕೇಳೋಕೆ ಸಂತೋಷ ಆಗುತ್ತೆ ಗುಂಡ, ಅದ್ಸರಿ ಇಷ್ಟೆಲ್ಲಾ ಪವಾಡ ಹೇಗೆ ಆಯ್ತು?

ಗುಂಡ : ನೀನು ಹೋದ್ಮೇಲೆ ನಾನು ಹೋಟೆಲ್ ಕೆಲ್ಸ ಬಿಟ್ಟೆ ನಮ್ಮೂರಿನೋನು ಒಬ್ಬ ಬಾಂಬೇಲಿ ಅಂಡರ್ ವರ್ಲ್ಡ್ ಕೆಲಸ ಮಾಡ್ತಿದ್ದ. ನಾನು ಅಲ್ಲಿ ಕೆಲಸಕ್ಕೆ ಸೇರ್ಕೊಂಡೆ.

ದುಡ್ಡು ಮಾಡೋ ಟ್ರಿಕ್ ಕಲಿತುಕೊಂಡೆ. ಬೇಕಾದಷ್ಟು ಸಂಪಾದಿಸಿ ಊರಿಗೆ ಬಂದೆ. ಮನೆ ಕಟ್ಟಿಸ್ದೆ. ಗುಡಿಸಲಿನಲ್ಲಿ ಇದ್ದ ನಮ್ಮ ದೇವರಿಗೆ ಬಿರ್ಲಾ ಮಂದಿರ ತರಹದ ದೇವಸ್ಥಾನ ಕಟ್ಟಿಸಿದೆ. ECO FRIENDLY ಪ್ಲಾಸ್ಟಿಕ್ ಕೈಚೀಲದ ಕಂಪನಿ ತೆರೆದೆ. ಫಾರಿನ್‌ಗೆ ಎಕ್ಸ್‌ಪೋರ್ಟ್ ಮಾಡ್ತಿದೀನಿ. ಬಿಡು ಆ ಕಥೆ ಎಲ್ಲಾ, ನಿಶ್ಚಿತಾರ್ಥಕ್ಕೆ ನೀ ಬರ್ತೀಯಲ್ಲಾ ಅಲ್ಲಿ ವಿವರವಾಗಿ ಹೇಳ್ತೀನಿ. ತಪ್ಪಿಸ್ಕೋ ಬೇಡಪ್ಪ, ನೀನಿರೋ ಊರಿನಲ್ಲೇ ನಿಶ್ಚಿತಾರ್ಥ ಇಟ್ಕೊಂಡಿದೀನಿ ಬಂದು ಬಿಡು, ಬಾ.

★★★

ಭಾನುವಾರ ಬಂತು. ಗುಂಡನ ಮಗಳ ನಿಶ್ಚಿತಾರ್ಥಕ್ಕೆ ಹೋದೆ. ಅರಮನೆ ಮೈದಾನದಲ್ಲಿ ಹಾಕಿದ್ದ ದೊಡ್ಡ ಪೆಂಡಾಲ್ ಒಳಗೆ ಹೋದೆ. ದೂರದಲ್ಲಿ ಮಂಟಪವಿತ್ತು. ತುಂಬಾ ಜನ ಫೋಟೋಗ್ರಾಫರ್‌ಗಳು, ಲೈಟ್‌ಬಾಯ್‌ಗಳು, ವಿಡಿಯೋಗ್ರಾಫರ್‌ಗಳು ಮಂಟಪದ ಸುತ್ತಾ ಘೇರಾಯಿಸಿಕೊಂಡಿದ್ದರು. ವೇದಿಕೆಯಲ್ಲಿ ಬಹುಷಃ ಗುಂಡನ ಕಡೆಯವರು ವಧು, ವರನ ಕಡೆಯವರು ಪುರೋಹಿತರು ಕೂತಿರಬೇಕೆಂದು ಕಲ್ಪಿಸಿಕೊಂಡೆ.

ಒಳಗೆ ಹೋಗುತ್ತಿದ್ದಂತೆ ಡ್ರೈ ಜಾಮೂನು ಕೊಟ್ಟರು ಮುಂದೆ ಹೆಜ್ಜೆ ಇಟ್ಟಾಗ ಬಿಸಿ ನಿಪ್ಪಟ್ಟು, ನೇಂದ್ರ ಬಾಳೆ ಚಿಪ್ಸ್ ಕೊಟ್ಟರು, ನಂತರ ಹಾಟ್ ಬಾದಾಮಿ ಹಾಲು ಅಥವಾ ಕೋಲ್ಡ್ ಬಾದಾಮಿ ಹಾಲು ಕೊಡುತ್ತಿದ್ದರು. ಎರಡು ಮೂರು ಸಾವಿರ ಜನಕ್ಕೆ ಕುರ್ಚಿ ವ್ಯವಸ್ಥೆಗೊಳಿಸಿದ್ದರು. ನನಗೆ ಕೊನೇ ಸಾಲಿನಲ್ಲಿ ಒಂದು ಕುರ್ಚಿ ಸಿಕ್ಕಿತು. ಎಲ್ಲೋ ಏನೋ ಕುರ್ಚಿ ಸಿಕ್ಕಿದ್ದೇ ದೊಡ್ಡ ಪುಣ್ಯ. ಒಂದು ಕುರ್ಚಿಗಾಗಿ ಇಷ್ಟೆಲ್ಲಾ ಹೊಡೆದಾಟ, ರಾದ್ಧಾಂತ ಆಗುತ್ತಲ್ಲಾ... ಅದು ಬಿಡಿ. ರಾಜಕೀಯ ನಮಗ್ಯಾಕೆ ಬೇಕು, ನಿಶ್ಚಿತಾರ್ಥದ ವಿಚಾರಕ್ಕೆ ಬರ್ತೀನಿ. ವೇದಿಕೆಯಲ್ಲಿ ಮೈಕ್ ಇರಿಸಿದ್ದರು. ಸ್ಪೀಕರ್‌ಗಳನ್ನು ಇಡೀ ಹಾಲಿನಲ್ಲಿ ಅಲ್ಲಲ್ಲಿ ಅಳವಡಿಸಿದ್ದರು. ಇಷ್ಟೆಲ್ಲ ವ್ಯವಸ್ಥೆ ಮಾಡಿದ್ದರೂ. ಬಂದಿದ್ದ ಆಹ್ವಾನಿತರು ಎಲ್ಲಾ ಶಬ್ದವನ್ನೂ ಮೀರಿ ಪರಸ್ಪರ ಮಾತನಾಡುತ್ತಾ, ಅವರಿವರ ಬಗ್ಗೆ ದೋಷಾರೋಪ ಮಾಡುತ್ತಾ ಉಚ್ಚ ಕಂಠದಿಂದ ಕೂಗಾಡುತ್ತಿದ್ದುದರಿಂದ ವೇದಿಕೆಯಲ್ಲಿನ ಕಾರ್ಯಕ್ರಮ ಏನೂ ಸರಿಯಾಗಿ ಕೇಳಿಸುತ್ತಿರಲಿಲ್ಲ. ವೇದಿಕೆ ಸುತ್ತುವರಿದಿದ್ದ ವಿಡಿಯೋಗ್ರಾಫರ್, ಫೋಟೋ ಗ್ರಾಫರ್, ಲೈಟ್ ಬಾಯ್‌ಗಳ ಹಿಂಭಾಗ ಮಾತ್ರ ಕಾಣುತ್ತಿತ್ತು. ಅವರುಗಳ ಕಾಲು ಸಂದಿಯಿಂದ ಅಸ್ಪಷ್ಟವಾಗಿ ವೇದಿಕೆಯಲ್ಲಿದ್ದವರು ನೆರಳು ಬೆಳಕಿನಾಟದಂತೆ ಕಂಡೂ ಕಾಣದಂತೆ ಕಂಡರು. ಓರ್ವ ಬೃಹತ್ ದೇಹದ ಅಸಾಮಿ ಸಿಲ್ಕ್ ಪಂಚೆ ಜುಬ್ಬ ಹಾಕಿಕೊಂಡು, ಹಗ್ಗದಂತಹ ಚಿನ್ನದ ಸರ ಧರಿಸಿ, ಹನ್ನೊಂದು ಬೆರಳುಗಳಿಗೂ (ಗುಂಡನಿಗೆ ಒಂದು ಕೈಲಿ 6 ಬೆರಳಿದೆ) ಬಹುಷಃ ಚಿನ್ನ, ವಜ್ರ, ಪ್ಲಾಟಿನಂ ಉಂಗುರಗಳನ್ನು ಧರಿಸಿಕೊಂಡಿದ್ದು ಆಗಾಗ್ಗೆ ಅಸ್ಪಷ್ಟವಾಗಿ ಕಾಣುತ್ತಿತ್ತು. ಆತನೇ ಗುಂಡನಿರಬೇಕೆಂದು ಕೊಂಡೆ.

ಮೈಕ್‌ನಲ್ಲಿ ಅನೌನ್ಸ್ ಮಾಡಿದರು. ''ಬಂದಿರುವ ಆಹ್ವಾನಿತರೆಲ್ಲ ವೇದಿಕೆಗೆ ಸಾಲಾಗಿ ಬಂದು ವಧು-ವರರ ಜೊತೆ ಫೋಟೋ ತೆಗೆಸಿಕೊಂಡು ಈ ಮಂಟಪದ ಪಕ್ಕದಲ್ಲಿ ಹಾಕಿಸಿರುವ ಪೆಂಡಾಲ್‌ಗೆ ಹೋಗಿ ಊಟ ಮಾಡಿಕೊಂಡೇ ಹೋಗಬೇಕೆಂದು ವಿನಂತಿ.''

ಏನೋ ದೊಂಬಿ ನಡೆಯುತ್ತಿದೆ ಅನ್ನಿಸುವಂತೆ ಗುಂಪು ಗುಂಪಾಗಿ ಅಶಿಸ್ತಿನಿಂದ ಜನರು ವೇದಿಕೆಗೆ ನುಗ್ಗುತ್ತಿದ್ದರು. ಅಷ್ಟೇ ವೇಗವಾಗಿ ಪಕ್ಕದ ಊಟದ ವ್ಯವಸ್ಥೆ ಇದ್ದ ಪೆಂಡಾಲಿಗೆ ಧಾಳಿ ಮಾಡುತ್ತಿದ್ದರು. ನನಗೆ ಮಂಟಪದ ತನಕ ಹೋಗಲು ಸಾಧ್ಯವೇ ಆಗಲಿಲ್ಲ. ಮೊದಲೇ ಕೀಲು ನೋವು, ಕಾಲು ನೋವು ಇನ್ನೂ ಹೇಳಿಕೊಳ್ಳಲಾಗದ ಎಲ್ಲೆಲ್ಲೋ ಏನೇನೋ ನೋವು. ನಾನು ವೇದಿಕೆ ಏರಿ ಫೋಟೋಕ್ಕಾಗಿ ಹಲ್ಲು ಕಿರಿಯುವ ಸಾಹಸಕ್ಕೆ ಹೋಗದೆ ಸೀದಾ ಪಕ್ಕದ ಊಟದ ವ್ಯವಸ್ಥೆ ಮಾಡಿದ್ದ ಪೆಂಡಾಲಿಗೆ ಹೋದೆ. ಬಫೆ ಸಿಸ್ಟಂ. ಕಾಂಟಿನೆಂಟಲ್ ನಾರ್ತ್ ಇಂಡಿಯನ್, ಸೌತ್ ಇಂಡಿಯನ್‌ನಿಂದ ಹಿಡಿದು ಹಳ್ಳಿಯ ರಾಗಿ ಮುದ್ದೆ ಉಪ್ಪೆಸ್ರು, ಜೋಳದ ರೊಟ್ಟಿ ಹುಚ್ಚೆಳ್ ಚಟ್ನಿ, ಬಾನಲ್ಲಿ ಹಾರಾಡುವ, ನೀರಲ್ಲಿ ತೇಲಾಡುವ, ಭೂಮಿಯಲ್ಲಿ ಹರಿದಾಡುವ ಓಡಾಡುವ ಸಮಸ್ತವೂ ಖಾದ್ಯ ರೂಪದಲ್ಲಿ ಬೇಸಿನ್‌ಗಳಲ್ಲಿ ಬಿಸಿ ಹಬೆ ಹೊರಸೂಸುತ್ತಾ ಭಕ್ಷಕರಿಗಾಗಿ ಕಾದು ಸಾಲಾಗಿ ಜೋಡಿಸಲ್ಪಟ್ಟಿದ್ದವು.

ಇಂದು ತಿಂದರೆ ಉಂಟು ಇಲ್ಲದಿದ್ದರೆ ಇಲ್ಲ ಎಂಬಂತೆ ಜನರ ನೂಕು ನುಗ್ಗಲು, ಮೊಸರನ್ನ ತಕೊಂಡು ಬಾಯಿಗಿಡಲು ಹೋದರೆ ನುಗ್ಗಾಟದಲ್ಲಿ ಕೈ ತಪ್ಪಿ ಬೇರೆಯಾರದ್ದೋ ಕಿವಿಗೆ ಹೊಕ್ಕಿತು. ತಟ್ಟೆ ಕೈಯಿಂದ ಬಿತ್ತು. ಜನರ ಕಾಲ ತುಳಿತಕ್ಕೆ ಸಿಕ್ಕಿ ಮಣ್ಣು ಪಾಲಾಯಿತು. ಊಟವೂ ಬೇಡ ಏನೂ ಬೇಡ, ಗುಂಡ ನಿರ್ಗಮನ ದ್ವಾರದಲ್ಲಿದ್ದರೆ ಕಷ್ಟ ಸುಖ ಮಾತಾಡಬೇಕು, 25 ವರ್ಷದಿಂದ ಉಳಿದುಕೊಂಡಿದ್ದ ಮನದೊಳಗಿನ ಸಂಘರ್ಷಗಳನ್ನು ಹಂಚಿಕೊಳ್ಳಬೇಕು. ಎಲ್ಲಕ್ಕಿಂತ ಮುಖ್ಯವಾಗಿ ಮದುವೆ ಯಾವತ್ತು? ಎಲ್ಲಿ? ಇತ್ಯಾದಿ ನಿಶ್ಚಿತಾರ್ಥದಲ್ಲಿ ಕೈಗೊಂಡ ತೀರ್ಮಾನಗಳನ್ನು ಕೇಳಿ ತಿಳಿದುಕೊಳ್ಳಬೇಕೆಂದು ನಿರ್ಗಮನ ದ್ವಾರಕ್ಕೆ ಹೋದೆ. ಗುಂಡ ಎಲ್ಲರನ್ನೂ ಬೀಳ್ಕೊಡುತ್ತಿದ್ದ. ನನ್ನ ಸರದಿ ಬಂದಾಗ ಮಾತಾಡಲು ಬಾಯಿ ತೆರೆದೆ, ಗುಂಡ ಎರಡು ಡ್ರೈ ಗುಲಾಬ್ ಜಾಮೂನನ್ನು ನನ್ನ ಬಾಯಿಗೆ ತನ್ನ ಕೈಯಾರೆ ತುರುಕಿದ. ಹೊರಕ್ಕೆ ನಿರ್ಗಮಿಸಲು ಬಂದ ಜನ ನನ್ನನ್ನು ತಳ್ಳಿಕೊಂಡು ಮೇಕ್ರಿ ಸರ್ಕಲ್ ತನಕ ತಂದು ಬಿಟ್ಟರು. ವಿಧಿಯಿಲ್ಲದೆ ಮನೆ ಕಡೆ ಹೋಗಲು ಬಸ್‌ಗಾಗಿ ಕಾದೆ. ಬಸ್ ಬಂತು ಏರಿದೆ. ಮನೆ ಸೇರಿದೆ, ಮನೆಗೆ ಬಂದು ಮಲಗಿದರೆ ನಿದ್ದೆಯೇ ಬಾರದು. ಗುಂಡನ ಜೊತೆ ಒಂದಕ್ಷರ ಮಾತನಾಡಲಾಗಲಿಲ್ಲ ನಿಶ್ಚಿತಾರ್ಥಕ್ಕೆಂದು ಹೋಗಿದ್ದಂತೂ ನಿಜ. ಆದರೆ ಮದುವೆ ಎಂದು? ದಿನಾಂಕ ಸ್ಥಳ? ಹುಡುಗ - ಹುಡುಗಿ ಹೆಸರು? ಏನೊಂದೂ ತಿಳಿಯದೇ ಹಿಂದಿರುಗಿದ ವಿಪರ್ಯಾಸ ! ಹಾಗಾದರೆ ನಿಶ್ಚಿತಾರ್ಥ ಮಾಡುವುದರ ಉದ್ದೇಶ ಏನು? ನಿಶ್ಚಿತಾರ್ಥದ ಮೂಲ ಅರ್ಥ ತಿಳಿಯಿತೆ? ಉಳಿಯಿತೆ? ಬರಿದೇ ಶ್ರೀಮಂತಿಕೆ, ವೈಭವ, ಆಡಂಬರದ ಪ್ರದರ್ಶನವಾಗಿ ಮಾತ್ರ ಲೇಟೆಸ್ಟ್ ನಿಶ್ಚಿತಾರ್ಥಗಳು ಉಳಿದಿವೆ ಎಂಬುದಂತೂ ನಿಶ್ಚಿತ ಅನ್ನಿಸಿತು.

❖

# ನಾನು ಓದಿದ ಪುಸ್ತಕ

(ಪುರಂದರ ಸಾಹಿತ್ಯ ದರ್ಶನ)

**- ಕೃಷ್ಣ ಸುಬ್ಬರಾವ್**

**ತೊ**ಂದರೆಗಳು ಕೆಲವೊಮ್ಮೆ ತಾವಾಗೇ ಬರುತ್ತವೆ. ಇನ್ನೂ ಕೆಲವೊಮ್ಮೆ ತೊಂದರೆಗಳನ್ನು ನಾವೇ ನಮ್ಮ ಮೇಲೆ ಎಳೆದುಕೊಳ್ಳುತ್ತೇವೆ. ಚಿಕ್ಕ ವಯಸ್ಸಿನಲ್ಲಿ ಯಾರಾದರೂ ಸ್ನೇಹಿತರನ್ನು ಭೇಟಿಯಾದಾಗ ''ಇತ್ತೀಚೆಗೆ ಯಾವ ಸಿನಿಮಾ ನೋಡಿದೆ?'' ಎಂದು ಪ್ರಶ್ನಿಸಿ ಎಡವಟ್ಟಿಗೆ ಸಿಕ್ಕಿಹಾಕಿಕೊಳ್ಳುತ್ತಿದ್ದೆ. ನನ್ನ ಸಹಪಾಠಿ ಮುರುಳಿಗೆ ಇಂತಹ ಪ್ರಶ್ನೆ ಕೇಳಿದರೆ ಮುಗಿಯಿತು ಕತೆ! ಕೇಳಿದ್ದೇ ತಡ ತಾನು ನೋಡಿದ ಸಿನಿಮಾದ ಕತೆಯನ್ನು ಆ್ಯಕ್ಷನ್ ಸಮೇತ ಹೇಳಿಬಿಡುತ್ತಿದ್ದ. ಅವನ ನೆನಪು ಬಂದ ಕಾರಣ ಮೊನ್ನೆ ಅಪರಂಜಿ ಶಿವು ನನ್ನನ್ನು ''ಯಾವ ಪುಸ್ತಕ ಓದಿದಿರಿ ಈಚೆಗೆ'' ಎಂಬ ಪ್ರಶ್ನೆಯನ್ನು ಲೋಕಾರೂಢಿಯಾಗಿ ಕೇಳಿದರು. ಪುರಂದರ ಸಾಹಿತ್ಯ ದರ್ಶನ ಎಂಬ ನಾಲ್ಕು ಸಂಪುಟದ (ಸರಾಸರಿ 425 ಪುಟದ ಒಟ್ಟು 1700 ಪುಟಕ್ಕೂ ಮಿಗಿಲಾದ) ಪುಸ್ತಕ ಓದಿ ಮುಗಿಸಿದೆ ಎಂಬ ಮಾಹಿತಿಯನ್ನು ಜಂಭದಿಂದ ಕೊಟ್ಟೆ, ತಕ್ಷಣ ಅಲರ್ಟ್ ಆದ ಶಿವು ''ಹಾಗಾದರೆ, ನೀವು 'ಅಪರಂಜಿ'ಗೆ 'ನಾನು ಓದಿದ ಪುಸ್ತಕ' ಎಂಬ ಶೀರ್ಷಿಕೆಯಡಿಯಲ್ಲಿ ಒಂದು ಲೇಖನ ಕಳುಹಿಸಿ'' ಎಂದು ಬಹಳ ಡಿಪ್ಲೊಮ್ಯಾಟಿಕ್ ಆಗಿ, ಮುಂದೆ ಎರಗಬಹುದಾದ ಅವಘಡವನ್ನು ತಪ್ಪಿಸಿಕೊಂಡರು. ಸಂಪಾದಕರಿಗೆ ಈ ರೀತಿ ಒಂದು ಸೌಲಭ್ಯವಿರುತ್ತದೆ ಎಂದು ನನಗೆ ಹೊಟ್ಟೆಕಿಚ್ಚಾಯಿತು. ನಾನೆಲ್ಲಿ ಕೊರೆಯುವುದಕ್ಕೆ ಶುರುಮಾಡುತ್ತೇನೆಂದು ಹೆದರಿ ಶಿವಕುಮಾರ್ ನನ್ನ ಲೇಖನಕ್ಕೆ ಆಹ್ವಾನ ಕೊಡುವ ಮುಖೇನ ಗುರಾಣಿಯನ್ನು ಒಡ್ಡಿ ಬಚಾವ್ ಆದರು. ಆದರೆ ನೀವು?........

ಪುರಂದರ ದಾಸರ 500ನೇ ಹುಟ್ಟುಹಬ್ಬದ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತ ಇಲಾಖೆಯವರು ಶ್ರೀ ಸಾ.ಕೃ. ರಾಮಚಂದ್ರರಾವ್ ಸಂಪಾದಕತ್ವದಲ್ಲಿ ಒಂದು ಬೃಹತ್ ಯೋಜನೆ ಕೈಗೆತ್ತಿಕೊಂಡು ಒಂದು ಉಪಯುಕ್ತ ಕೆಲಸಮಾಡಿತು. ಅದರ ಸಹಾಯಕ್ಕೆ ಪ್ರೊ. ಅ.ರಾ. ಮಿತ್ರ ಹಾಗು ಶ್ರೀಮತಿ ರತ್ನ ಶಿವಶಂಕರ್ ಟೊಂಕ ಕಟ್ಟಿ ನಿಂತರು. ಇದ್ದಕ್ಕಿದ್ದಂತೆ ದಾಸರ ಬಗ್ಗೆ ಓದಲು ಕಾರಣ ಆಕಾಶವಾಣಿಗಾಗಿ ಅ.ರಾ. ಮಿತ್ರರ ಸಂದರ್ಶನ ಮಾಡುವ ಸುಯೋಗ ಬಂತು! 'ಪುರಂದರ ಸಾಹಿತ್ಯ ದರ್ಶನದ' ಮೂರನೆ ಸಂಪುಟದಲ್ಲಿದ್ದ ವಿಶಿಷ್ಟ ಹಾಗು ವಿಸ್ತಾರವಾದ ಪರಿಶಿಷ್ಟ ಕಣ್ಣಿಗೆ ಬಿತ್ತು. ಸಾಹಿತ್ಯ ಮಿತ್ರ ಈಶ್ವರಚಂದ್ರ ನನಗೆ ನಾಲ್ಕು ಸಂಪುಟಗಳನ್ನು ಒದಗಿಸಿದರು. ಇಷ್ಟು ವರ್ಷ ದೇವರ ನಾಮ, ಕೀರ್ತನೆಗಳನ್ನು ಕೇಳಿ ಸಂತೋಷಪಡುತ್ತಿದ್ದ ನನಗೆ ಪುರಂದರ ಸಾಹಿತ್ಯದ ದರ್ಶನವಾಯಿತು. ನನಗಾದ ಸಂತೋಷ, ಸಂಭ್ರಮಗಳನ್ನು ಸಮಾನ ಮನಸ್ಕರ ಜೊತೆಯಲ್ಲಿ ಹಂಚಿಕೊಂಡರೆ ಅದು ದ್ವಿಗುಣಗೊಳ್ಳುತ್ತದೆ. ಹಾಗೆ ಮನನ ಮಾಡಿಕೊಳ್ಳುವ ಸದಾವಕಾಶ ಸಿಗುತ್ತದೆ ಎಂಬ ನೆಪದಿಂದ ನಿಮ್ಮೊಡನೆ ಹಂಚಿಕೊಳ್ಳುವ ಪ್ರಯತ್ನ ಮಾಡುತ್ತಿದ್ದೇನೆ.

ಹಾಸ್ಯವನ್ನು ಆಸ್ವಾದಿಸುವ ಮನಸ್ಸು ದಾಸರ ಪದಗಳನ್ನು ಹೆಚ್ಚು ಇಷ್ಟಪಡಬಹುದೆಂದು ನನಗೆ ಬಲವಾಗಿ ಅನಿಸುತ್ತದೆ. ಅದಕ್ಕೆ ಕಾರಣಗಳಿಲ್ಲದೆ ಇಲ್ಲ. ಬೇರೆ ಬೇರೆ ವೃತ್ತಿಗಳ, ಪ್ರವೃತ್ತಿಗಳ ಜನರೊಡನೆ ಬೆರೆತು ಊರೂರು ತಿರುಗಿ ಜನರಲ್ಲಿ ಒಂದಾಗಿ ಅವರವರ ಹವ್ಯಾಸಗಳಲ್ಲಿ ತೊಡಗಿಕೊಂಡೆ. ಅವರಿಗೆ ವೇದಾಂತವನ್ನು ಮನಗಾಣಿಸುವ ಕೆಲಸವನ್ನು ಪುರಂದರ ದಾಸರು, ಮಾನವರ ಬದುಕಿಗೆ ಬೇಕಾದ ನೆಮ್ಮದಿ, ಶಾಂತಿಯನ್ನು ಪಡೆಯುವ ಹವಣಿಕೆಯಲ್ಲಿರುವಾಗ ಸಮಾಜದ ಸ್ವಾಸ್ಥ್ಯದ ಬಗ್ಗೆ ಸರಳವಾದ ಭಾಷೆಯಲ್ಲಿ ತಮ್ಮ ಅನುಭವವನ್ನು ತಮ್ಮ ಹಾಡುಗಳಲ್ಲಿ ಧಾರೆ ಎರೆದರು. ಹಾಸ್ಯದ ಹರಿಕಾರರು ಮಾಡಲು ಪ್ರಯತ್ನಿಸಿದ್ದು ಅದೇ ದಾರಿಯಲ್ಲಲ್ಲವೆ? ತತ್ವ ವಿಚಾರಗಳು ಭಾರವೆನಿಸದೆ ಮನಕೆ ಮುಟ್ಟಿಸುವ ರೀತಿ ಆಕರ್ಷಕ. ಪುರಂದರ ದಾಸರು ತಮ್ಮ ಕಾಲಿಗೆ ಮಾತ್ರ ಗೆಜ್ಜೆಕಟ್ಟದೆ ತಾವು ಬಳಸುವ ಭಾಷೆಗೂ ಸೊಗಸಾದ ಗೆಜ್ಜೆಕಟ್ಟಿ ಕುಣಿಸಿದರು ಎಂದು ಕೊಂಡಾಡಿರುವ ಮಿತ್ರರ ಮಾತು ಅರ್ಥಪೂರ್ಣ. ಜನರ ಹೃದಯಕ್ಕೆ ಹತ್ತಿರವಾದ ದೇಸಿ ಛಂದಸ್ಸಿನಿಂದ ಎಲ್ಲರ ನಾಲಗೆಯ ಮೇಲೂ ಪದಗಳು ಕುಣಿಯುವಂತೆ ಮಾಡಿದರು.

ಪುರಂದರ ದಾಸರು ಪಂಡಿತರಾಗಿದ್ದರೆಂಬುದರಲ್ಲಿ ಎರಡು ಮಾತಿಲ್ಲ. ಶಾಸ್ತ್ರ ಪರಿಶ್ರಮದಲ್ಲಿ ಪ್ರಗಲ್ಭರು. ಕಾವ್ಯ ಪ್ರಯೋಗದಲ್ಲಿ ಅವರು ಪರಿಣಿತರು ಮತ್ತು ಶಾಸ್ತ್ರೀಯ ಸಂಗೀತ ತಜ್ಞರು. ಆದರೆ ಇವು ಯಾವುದನ್ನೂ ಪ್ರದರ್ಶಿಸದೆ ಸಾಮಾನ್ಯ ಜನರಂತೆಯೇ ಬದುಕಿ, ಬಾಳಿ, ಜನಸಾಮಾನ್ಯರಿಗೆ ನೇರವಾಗಿ ತಿಳಿಯುವಂತಹ ಶೈಲಿ ಬಳಸಿದರು. ಗದ್ಯಕ್ಕಿಂತಲೂ ಪದ್ಯ ಪ್ರಭಾವಶಾಲಿಯೆಂದು ಹಾಡನ್ನು ಹೆಣೆದರು. ಭಕ್ತಿಗೆ ಸಂಗೀತ ನೆರವಾದೀತೆಂದು ಹಾಡುಗಳಿಗೆ ಶಾಸ್ತ್ರೀಯ ಸಂಗೀತದ ಪರಿಮಳವನ್ನು ಸೇರಿಸಿದರು. ಆದರೆ ಶಾಸ್ತ್ರೀಯ ಮೇಲುಗೈ ಇರದಂತೆ ನಿಗವಿಟ್ಟರು. ತಿಳಿಯಾದ ಮಾತು ಆಳವಾದ ಭಾವ ಇದ್ದುದರಿಂದಲೇ ಜನಪ್ರಿಯವಾಯಿತು. ಸಂಸ್ಕೃತ ಹಾಗು ಹಳೆಗನ್ನಡದಲ್ಲಿದ್ದ ಮಹಾಕಾವ್ಯಗಳು ಜನಸಾಮಾನ್ಯರಿಗೆ ತಲುಪುತ್ತಾ ಇರಲಿಲ್ಲವೆಂದು ವಚನ ಸಾಹಿತ್ಯ ಹಾಗು ದಾಸ ಸಾಹಿತ್ಯ ಪರಿಣಾಮಕಾರಿ ಸಂವಹನವಾಯಿತು. ಸಮಾಜ ಸುಧಾರಣೆ ಕೆಲಸವೂ ಅದರಿಂದ ಬೇಕಾದಷ್ಟು ಆಯಿತು.

ಕೃಷ್ಣನ ಪಕ್ಷಪಾತಿಯಾದ ಪುರಂದರ ದಾಸರು ಹೆಚ್ಚು ಬರೆದದ್ದು ಕೃಷ್ಣನ ಮೇಲೆ ಬಾಲ ಲೀಲೆಯನ್ನು ಬಣ್ಣಿಸುವಾಗ ಮನೆಯಲ್ಲಿ ಚಿಕ್ಕಮಕ್ಕಳನ್ನು ಮಾತನಾಡಿಸುವ ಪರಿಭಾಷೆಯಲ್ಲೇ ಕೃತಿ ರಚನೆ ಮಾಡಿದ್ದಾರೆ. ಉದಾ: ''ಮಣ್ಣಾಟ ಬೇಡವೊ ಬುಕ್ಕಚ್ಚಿ ಮಾಡಬೇಕು'', ''ಬೂಚಿ ಬಂದಿದೆ ರಂಗ ಬೂಚಿ ಬಂದಿದೆ'', ''ಗುಮ್ಮನ ಕರೆಯದಿರೆ ಅಮ್ಮ ನೀನು / ಸುಮ್ಮನೆ ಇದ್ದೇನು ಅಮ್ಮಿಯ ಬೇಡೆನು / ಮಮ್ಮು ಉಣುತ್ತೇನೆ ಅಮ್ಮ ಅಳುವುದಿಲ್ಲ.....'' ಇಂತಹ ಮಾತುಗಳು ಎಲ್ಲ ವಯಸ್ಸಿನ ಜನರಿಗೂ ಬಹಳ ಹತ್ತಿರವಾಗುತ್ತದೆ ಎಂಬ ಉದ್ದೇಶದಿಂದ ಬಳಸಿದ್ದಾರೆ. ಕೃಷ್ಣನ ಮಹಿಮೆಯನ್ನು ಒಂದು ಕಡೆ ಕೊಂಡಾಡಿದರೂ ಕೆಲವು ಕಡೆ ತಾಯಿಗೆ ತನ್ನ ಕಂದನಿಗೆ ಏನೂ ಗೊತ್ತಿಲ್ಲವೆಂಬುದನ್ನು ತೋರಿಸುವ ವಿರೋಧಾಭಾಸದ ಮಾತನ್ನಾಡುತ್ತಾರೆ. ಬಾಯಲ್ಲಿ ವಿಶ್ವರೂಪವನ್ನೇ ತೋರಿಸಿದ ಮುದ್ದು ಕೃಷ್ಣನಿಗೆ ತಾಯಿ ಗುಮ್ಮ ಬರುತ್ತಾನೆಂದು

ಹೆದರಿಸುತ್ತಾಳೆ. ಆಗ ಕೃಷ್ಣ ''ಗುಮ್ಮನೆಲ್ಲಿಹ ತೋರಮ್ಮ / ಸುಮ್ಮನಂಜಿಸಬೇಡಮ್ಮಾ'' ಎನ್ನುತ್ತಾನೆ.

ಅದಕ್ಕೂ ಮುಂದೆ ಹೋಗಿ

''ಈರೇಳು ಲೋಕದ ಉದರದೊಳಗೆ ಇಟ್ಟು

ತೋರಿದೆ ಬ್ರಹ್ಮಾಂಡನ ಬಾಯಲಿ ನೀನು

ಘೋರ ರೂಪದಿ ಬಂದ ಘಾಳಿ ಅಸುರನ ಕೊಂದೆ

ಹಾಂಗು ನೋಡಿದರು ಕಾಣೆನು ಗುಮ್ಮನ.....'' ಎಂದು

ತಾಯಿಯನ್ನು ತುಂಟ ಕೃಷ್ಣ ಛೇಡಿಸುತ್ತಾನೆ.

ನಿಂದಾಸ್ತುತಿಯಲ್ಲಿ ಪುರಂದರ ದಾಸರ ಕೃತಿಗಳ ಸ್ವಾರಸ್ಯ ಸವಿಯಬೇಕು. ದೇವರ ಮೇಲೆ ಲಂಚದ ಆಪಾದನೆ ಹೊರಸುವಷ್ಟು ಧೈರ್ಯ ಹಾಗು ಸಲುಗೆ ಅವರಲ್ಲಿ ಕಾಣಬಹುದು. ''ನಿನಗೆ ಪ್ರಹ್ಲಾದ ಎಷ್ಟು ಬಂಗಾರ ಕೊಟ್ಟ

ಗಜೇಂದ್ರ ಮೋಕ್ಷದಲ್ಲಿ ಎಷ್ಟು ಕನಕ ಪಡೆದೆ?''

ಎಂದು ನೇರವಾಗಿ ಪ್ರಶ್ನಿಸುತ್ತಾರೆ. ''ಆರು ಬದುಕಿದರಯ್ಯ ಹರಿ ನಿನ್ನ ನಂಬಿ'' ಎನ್ನುತ್ತಾರೆ. ''.... ಹಾಲು ಕೊಡಲು ಬಂದ ಪೂತನಿಯನ್ನು ಕೊಂದೆ / ನೆಲವ ಬೇಡುತ ಹೋಗಿ ಬಲಿಯ ತನುವನ ತುಳಿವೆ...'' ವಿಧಿ ಬರೆಯುವ ದೇವರಿಗೆ ''ಹಿಂದೆ ಬರೆದಾ ಬರಹ ಹೆಂಗಾದರಾಗಲಿ ಮುಂದೆ ಚಂದಾಗಿ ಬರೆಯಯ್ಯ ಪುರಂದರ ವಿಠಲ'' ಎನ್ನುವಾಗ ತಂದೆತಾಯಿಗಳು ಮಕ್ಕಳಿಗೆ ''ಹಿಂದಿನ ಪರೀಕ್ಷೆ ಹೋಗಲಿ ಮುಂದಿನ ಪರೀಕ್ಷೆ ಸರಿಯಾಗಿ ಬರೆಯಪ್ಪ'' ಎಂದು ಬುದ್ಧಿಮಾತು ಹೇಳುವಷ್ಟು ಸಹಜವಾಗಿ ದೇವರಿಗೆ ಹೇಳುತ್ತಾರೆ. ಜೀವನದಲ್ಲಿ ನಾವು ಹೆಚ್ಚು ಪ್ರಾಕ್ಟಿಕಲ್ಲಾಗಿರಬೇಕೆಂಬುದನ್ನು ದಾಸರು ''ಹೋಗ ದೂರಿನ ದಾರಿ ಕೇಳಿ ಮಾಡುವುದೇನು?'' ಎಂದು ಕೇಳುವುದರ ಮೂಲಕ ತೋರಿಸಿಕೊಟ್ಟಿದ್ದಾರೆ. ''ತನಗಿಲ್ಲದ ವಸ್ತು ಎಲ್ಲಿದ್ದರೇನು?'' ಎಂಬ ಧೋರಣ ಬಗ್ಗೆಯೂ ಮಾರ್ಗದರ್ಶನ ಕೊಡುತ್ತಾರೆ. ''ತಾಸು ಬಾರಿಸುತಿದೆ ಕೇಳಿ'' ''ಗಾಳಿ ಬಂದಾಗ ತೂರಿಕೊ'' ''ಗುದ್ದಿದವನೆ ಬಲ್ಲ / ಗುದ್ದಿಸಿಕೊಂಡವನೆ ಬಲ್ಲ'' ... ಇಂತಹ ಸಾಲುಗಳು ಕೊಡುವ ಲೋಕ ಶಿಕ್ಷಣ, ನಾಲ್ಕು ಗೋಡೆಯ ಮಧ್ಯೆ ಕೊಡುವ ಶಿಕ್ಷಣಕ್ಕಿಂತ ಉತ್ತಮ ಎಂದು ತೋರಿಸಿಕೊಟ್ಟವರು. ಅದೂ ಅನಕ್ಷರಸ್ತರಿಗೂ ತಲುಪಿದ ಶಿಕ್ಷಣವಾಯಿತು.

ದಾಸರು ಶ್ಲೇಶಾ ಪ್ರವೀಣರು ಎಂಬುದನ್ನು ''ರಾಗಿ ತಂದಿರಾ ಭಿಕ್ಷಕೆ'' ಕೃತಿಯಲ್ಲಿ ನೋಡಬಹುದು. ನಾಮಪದವನ್ನು ಕ್ರಿಯಾಪದವಾಗಿ ಯಶಸ್ವಿಯಾಗಿ ಬೀಸಿದ್ದಾರೆ. ಅವರ ವಿಡಂಬನೆಯ ಸಾಮರ್ಥ್ಯವನ್ನು ಮೆಚ್ಚಲೇಬೇಕು. ''ನಿಂದಕರಿರಬೇಕು....'' ಎನ್ನುತ್ತಾ ಒಡನೆಯೆ ''.... ಹಂದಿಯಿದ್ದರೆ ಕೇರಿ ಹ್ಯಾಂಗೆ ಶುದ್ದಿಯೋ ಹಾಗೆ...'' ಎನ್ನುತ್ತಾರೆ. ಉಪಮೆ ಹಾಗು ಹೋಲಿಕೆಗಳನ್ನು ದಾಸ ಶ್ರೇಷ್ಟರು ಉಪಯೋಗಿಸಿದ ಹಾಗೆ ಮತ್ತ್ಯಾರು ಬಳಸಲಾರರು ಎನ್ನುವಂತೆ ಪ್ರಯೋಗಿಸಿದ್ದಾರೆ. ದುಷ್ಟರನ್ನು ಜಾಲಿ ಮರಕ್ಕೆ ಹೋಲಿಸುತ್ತಾ ''ಮೂಲಾಗ್ರ

ಪರಿಯಂತ ಮುಳ್ಳು ಕೂಡಿಪ್ಪಂತೆ / ಬಿಸಲಲಿ ಬಂದವರಿಗೆ ನೆರಳಿಲ್ಲ / ಹಸಿದು ಬಂದವರಿಗೆ ಹಣ್ಣು ಇಲ್ಲ ...'' ಎನ್ನುತ್ತಾರೆ. ''ವೃಕ್ಷ ಸಂಪತ್ತಿನ ಎಲ್ಲ ಗುಣಗಳಿಂದಲೂ ಜಾಲಿಮರ ಹೇಗೆ ಮಾಚಿತವಾಗಿದೆಯೋ ಹಾಗೆ ದುರ್ಜನರು ವ್ಯಕ್ತಿ ಸಂಪನ್ನತೆಯ ಗುಣಗಳಿಂದ ವಂಚಿತರಾಗುತ್ತಾರೆ'' ಎನ್ನುತ್ತಾರೆ.

ಜನಸಾಮಾನ್ಯರಿಗೆ ತಿಳಿವಳಿಕೆ ಜೊತೆ ಜೊತೆಗೆ ಆತ್ಮಸ್ಥೈರ್ಯ, ವಿಶ್ವಾಸ ಕೊಡುತ್ತಾ ''ಆದದ್ದೆಲ್ಲಾ ಒಳಿತೇ ಆಯಿತು'' ''ಬಂದಿದ್ದೆಲ್ಲಾ ಬರಲಿ'' ''ನೀ ಇಟ್ಹಾಂಗೇ ಇಹವೆನೋ ಹರಿಯೆ'' ಎಂಬಂತೆ ತೃಪ್ತಿ ಕಾಣುವ ಸೂತ್ರಗಳನ್ನು ನೀಡುತ್ತಾರೆ. ಹಾಗೆ ಮನುಷ್ಯರ ಸ್ವಭಾವವನ್ನು ''ಇಕ್ಕಲಾರೆ ಕೈ ಎಂಜಲು'' ''ಸ್ವಾಮಿ ಎನ್ನ ಪಾಪೋಸು (ಚಪ್ಪಲಿ) ಹೋದುದಲ್ಲ...'' ''ನಗೆಯು ಬರುತಿದೆ ಎನಗೆ'' ಎಂಬ ಕೃತಿಗಳಲ್ಲಿ ಚಿತ್ರಿಸುತ್ತಾರೆ. ಭಾವಗಳನ್ನು, ನವರಸಗಳನ್ನು ಸ್ಪಷ್ಟವಾಗಿ ಅನಾವರಣ ಮಾಡುವ ಚೈತನ್ಯ ಅವರ ಕೃತಿಗಳಿಗೆ, ಗಾದೆಗಳ ಭಂಡಾರವೇ ಅವರ ಸಂಕೀರ್ತನೆಗಳಲ್ಲಿ ಅಡಗಿವೆ. ದಶಾವತಾರ ಚಿತ್ರಣದಲ್ಲಿ ಎಲ್ಲ ಅವತಾರ ಪುರುಷರನ್ನು ಗೇಲಿ ಮಾಡುತ್ತಾರೆ. 'ಬಿಟ್ಟ ಕಂಗಳ ಮುಚ್ಚಲೊಲ್ಲನೆ' ಎಂದು ಮನ್ಸೌಗಿಚಾರವನ್ನು, 'ಚೆಲುವೆನೆಂಬನೆ ಬೆನ್ನಗುಬುಟು' ಎಂದು ಕೂ..............ವನ್ನು ''ತೆರೆದ ಬಾಯಿ ಮುಚ್ಚಲಿಲ್ಲ'' ಎಂದು ನರಸಿಂಹನನ್ನು ''ನೆಲವ ನಳಿದವೆಗೆ ಕಾಲಕಿರುಗೆಜ್ಜೆಯೇಕೆ'' ಎಂದು ವಾ ನನ್ನನ್ನು ಆಡಿಕೊಳ್ಳುತ್ತಾರೆ. ತಾತ ಭೇಟಿ ನೀಡಿದ ಕ್ಷೇತ್ರಗಳ ವರ್ಣನೆ ಹಾಗು ಸ್ಥಳ ಪುರಾಣದ ಸ್ವಾರಸ್ಯ ಅದ್ಭುತವಾದುದು. ಉದಾಹರಣೆಗೆ ಪಂಡುಗೆಯೆಂಬಲ್ಲಿರುವ ಪುಂಡಲೀಕನೆಯ ಭಕ್ತ, ವೃದ್ಧರಾದ ತಂದೆ ತಾಯಿಗಳಿಗೆ ಸ್ನಾನ ಮಾಡಿಸುತ್ತಿದ್ದಾಗ ದೇವರು ಪ್ರತ್ಯಕ್ಷನಾದಾಗ, ತಾನು ತಂದೆತಾಯಿ ಸೇವೆ ಮಾಡಿಸುತ್ತಿರುವುದರಿಂದ ಅಲ್ಲೇ ಇಟ್ಟಿಗೆ ಮೇಲೆ ಸ್ವಲ್ಪ ನಿಂತಿರಬೇಕೆಂದು ವಿನಂತಿಸಿಕೊಳ್ಳುತ್ತಾನಂತೆ. ಪಂಢರಪುರದಲ್ಲಿರುವ ಪಾಂಡುರಂಗ ವಿಠಲ ಈಗಲೂ ಇಟ್ಟಿಗೆ ಮೇಲೆ ನಿಂತಿದ್ದಾನೆ. ಇಂತಹ ವಿವರಣೆಗಳನ್ನು ಒಳಗೊಂಡ ಪುರಂದರ ಸಾಹಿತ್ಯ ದರ್ಶನ ಓದಿದಾಗ ಒಂದು ವಿಶ್ವಕೋಶವನ್ನು ಓದಿದ ಅನುಭವವಾಗಿದ್ದಲ್ಲಿ ಆಶ್ಚರ್ಯವೇನಿಲ್ಲ.

---

ಪತ್ನಿ – ಏನ್ರೀ ಕೇಳಿದೋರಿಗೆಲ್ಲ ನಿಮಗೇ ಓಟು ಹಾಕ್ತೀನಿ ಅಂತೀರಲ್ಲ ಅದು ಹೇಗ್ರೀ.

ಪತಿ – ನೋಡೇ ಅವನಿಗೆ ಓಟು ಹಾಕ್ತೀನಿ ಅಂದಾಗ ಅವನಿಗೆ ಖುಷಿ, ಇವನಿಗೆ ಓಟು ಹಾಕ್ತೀನಿ ಅಂದಾಗ ಇವನಿಗೆ ಖುಷಿ, ಆಮೇಲೆ ನನಗೆ ಯಾರಿಗೆ ಬೇಕೋ ಅವರಿಗೆ ಓಟು ಹಾಕಿದರೆ ನನಗೆ ಖುಷಿ.

– ಸುಕೇಶವ

# ಚಪಲಚಿತ್ತನ ಚಪ್ಪಲಿ ಚೌರ್ಯ

**- ಎಚ್.ಜಿ. ಸೋಮಶೇಖರ ರಾವ್**

**ಚ**ಪ್ಪಲಿ ಕದಿಯುವ ''ಸೂಕ್ಷ್ಮ ಕಲೆ'' ನನಗೆ ಚಿಕ್ಕ ವಯಸ್ಸಿನ್ಗೇ ಶುರುವಾಗಿತ್ತು. ಹೈಸ್ಕೂಲಿನಲ್ಲಿದ್ದಾಗ ನನ್ನಣ್ಣ ಉಪಯೋಗಿಸಿದ್ದ ನಮ್ಮ ಊರಿನ ಚಮ್ಮಾರನ ಕೈಚಳಕದಿಂದ ಮಾಡಿಸಿಕೊಂಡು ಹಾಕಿಕೊಳ್ಳುತ್ತಿದ್ದೆ. ಅದು ಅಳಕ-ಬಳಕವಾಗಿರುತ್ತಿತ್ತು; ಅಷ್ಟೇ ಅಲ್ಲ, ಅವು ಒಂದೊಂದು ರೀತಿಯ ಸೈಜ್ ಆಗಿರುತ್ತಿತ್ತು. ಆದರೇನು - ನನಗೆ ಚಪ್ಪಲಿಯ ಚಪಲ. ಅವುಗಳ ಮಧ್ಯೆ ಬಿರುಕು ಬಿಟ್ಟು ಆಗೀಗ ಕಲ್ಲು-ಮುಳ್ಳು ಚುಚ್ಚಿಕೊಳ್ಳುತ್ತಿತ್ತು. ಹೇಗೋ ಉಪಯೋಗಿಸುತ್ತಿದ್ದೆ. ಶ್ರೀಮಂತರಾಗಿದ್ದ ಸಹ ವಿದ್ಯಾರ್ಥಿಗಳು ಉಪಯೋಗಿಸುತ್ತಿದ್ದ ಚಪ್ಪಲಿಗಳನ್ನು ಕಂಡು ಕರುಬುತ್ತಿದ್ದೆ. ಹೇಗಾದರೂ ಮಾಡಿ ನಾನೂ ಸಹ ಅಂಥಹ ಚಪ್ಪಲಿ ಹಾಕಿಕೊಳ್ಳಲು ಹಾತೊರೆಯುತ್ತಿದ್ದೆ. ಕೊಂಡು ಹಾಕಿಕೊಳ್ಳುವಷ್ಟು ಆರ್ಥಿಕ ಅನುಕೂಲವಿಲ್ಲದ ಕಾಲವದು. ನನ್ನ ಆಸೆಯನ್ನು ಹಾಗೇ ಅದುಮಿಟ್ಟುಕೊಂಡಿದ್ದೆ.

ಒಮ್ಮೆ ನಮ್ಮ ಊರಿನ ಮಹಿಳಾ ಸಮಾಜದಲ್ಲಿ ದ.ರಾ. ಬೇಂದ್ರೆ ಭಾಷಣವಿತ್ತು. ಹೆಂಗಸರೇ ಹೆಚ್ಚು ಸಂಖ್ಯೆಯಲ್ಲಿದ್ದರೂ ಅವರೊಡನೆ ಬಂದ ಗಂಡಸರೂ ಇದ್ದರು. ಸಭಾಗೃಹ ತುಂಬಿ ಹೋಗಿ ಕೂಡಲು ಜಾಗವಿಲ್ಲದೆ, ಚಪ್ಪಲಿ ಬಿಟ್ಟು ಸಭೆಯ ಮುಂಭಾಗದಲ್ಲಿ ಹಾಸಿದ್ದ ಜಮಖಾನದ ಮೇಲೆ ಕೂತವರು ಕೆಲವರು; ಇನ್ನಿತರರು ಹೊರಗಡೆ ಜಮಾಯಿಸಿದ್ದರು. ಭಾಷಣ ಕೇಳಲು ಹೋಗಿದ್ದ ನನಗೆ ಅಲ್ಲಿ ಹೊರಗೆ ಬಿಟ್ಟಿದ್ದ ಸೊಗಸಾದ ಚಪ್ಪಲಿಗಳ ಕಡೆಯೇ ಗಮನ. ಆಹಾ! ಎಂಥೆಂಥ ಚಪ್ಪಲಿಗಳ ರಾಶಿ! ಭಾಷಣ ಪ್ರಾರಂಭವಾಯಿತು. ಬೇಂದ್ರೆಯವರ ಮಾತಿನ ಮೋಡಿಗೆ ತಲೆತೂಗುತ್ತಿತ್ತು. ಜನರ ಗಮನವೆಲ್ಲಾ ಬೇಂದ್ರೆಯವರ ಮಾತಿನ ಕಡೆ; ಇತ್ತ ನನ್ನ ಗಮನ ಅಲ್ಲಿದ್ದ ಸೊಗಸಾದ ಚಪ್ಪಲಿ ಜೋಡಿಗಳ ಕಡೆ. ಭಾಷಣ ನಡೆಯುತ್ತಿರುವಾಗ ನಾನು ಕೆಲವು ಚಪ್ಪಲಿ ಜೋಡಿಗಳನ್ನು ಕಾಲಿಗೆ ಹಾಕಿ ನೋಡುವ ಪ್ರಯತ್ನದಲ್ಲಿದ್ದೆ. ಹೆಚ್ಚು ಸಂಖ್ಯೆಯಲ್ಲಿ ಹೆಣ್ಣುಮಕ್ಕಳ ಚಪ್ಪಲಿಗಳೇ! ಥೂ = ಒಂದು ಜೋಡಿಯೂ ಹೊಂದಾಣಿಕೆ ಆಗಲಿಲ್ಲ, ಮಾಡುವುದೇನು? ಸುಮ್ಮನಾದೆ. ಮನಸ್ಸಿನಾಳದಲ್ಲಿ ಏನೋ ನೋವು... ಛೇ... ಬೇಂದ್ರೆ ಭಾಷಣ ಕೇಳುವುದಕ್ಕಿಂತ ಚಪ್ಪಲಿ ಕದಿಯುವುದರಲ್ಲಿ ಕಾಲಹರಣವಾಯಿತಲ್ಲ... ಆ ದಿನ ರಾತ್ರಿ ನಿದ್ದೆ ಹತ್ತಲಿಲ್ಲ, ಬೆಳಗಿನ ಜಾವದ ಹತ್ತಿರ ನಿದ್ದೆಯಲ್ಲಿ ಕನಸು - ರಾಶಿರಾಶಿ ಚಪ್ಪಲಿಗಳು !!

ಇಷ್ಟಾದರೂ ನನ್ನ ಚಪ್ಪಲಿಯ ಚಪಲ ಹೋಗದು. ಮುಂದೊಂದು ದಿನ ನಮ್ಮೂರಿನ ನೀಲಕಂಠೇಶ್ವರ ದೇವಸ್ಥಾನದಲ್ಲಿ ಶಿವರಾತ್ರಿ ಉತ್ಸವ ನಡೆದಿದ್ದು, ನನಗೆ ಚಪ್ಪಲಿಯ ಆಸೆ ಹುಟ್ಟಿಸಿತು. ಅಲ್ಲಿಗೆ ಹೋದೆ. ಪೂಜೆ, ವೇದಘೋಷ, ಸಾಮೂಹಿಕ ಭಜನೆ, ಹರಿಕಥೆ ಇತ್ಯಾದಿ ನಡೆದಿತ್ತು. ಶಿವರಾತ್ರಿ - ಕೇಳಬೇಕೆ? ಊರಿನ ಶ್ರೀಮಂತರು, ಜನಸಾಮಾನ್ಯರು ದೊಡ್ಡ ಸಂಖ್ಯೆಯಲ್ಲಿ ಸೇರಿದ್ದರು. ಎಲ್ಲರೂ ಚಪ್ಪಲಿ ಹೊರಗೆ ಬಿಟ್ಟು ಒಳ ಹೋಗಬೇಕು. ಈಗಿನ

ಕಾಲದಂತೆ ಚಪ್ಪಲಿಗಳನ್ನು ನೋಡಿಕೊಳ್ಳುವವರು, ಟೋಕನ್ ಕೊಡುವ ಪದ್ಧತಿ ಇರಲಿಲ್ಲ. ಅದು ನಂಬಿಕೆಯ ಒಳ್ಳೆಯ ಕಾಲ.

ನಾನು 'ಶಿವಭಕ್ತ'ನಾಗಿ ಹೋಗಿದ್ದೆ.

ಶಿವನನ್ನು ಯಾವ ವರ ಕೇಳಲಿ? ನನ್ನನ್ನು ತೀವ್ರವಾಗಿ ಕಾಡುತ್ತಿದ್ದ 'ಬಯಕೆ' ಎಂದರೆ ಒಂದು ಜೊತೆ ಸೊಗಸಾದ ಚಪ್ಪಲಿಗಳಷ್ಟೇ. ಆ ಆಸೆ ತೀರಿತೆಂದರೆ ನನಗದೇ ಮುಕ್ತಿ – ಮೋಕ್ಷ. ಸದಾಶಿವನಿಗೆ ಅದೇ ಧ್ಯಾನ ಅಂದ ಹಾಗೆ ನನಗೆ ಚಪ್ಪಲಿಯದೇ ಧ್ಯಾನ. ದೇವಸ್ಥಾನದ ಹೊರ ಭಾಗದಿಂದಲೇ ಶಿವನ ಮುಂದೆ ನಿಂತು ತದೇಕ ದೃಷ್ಟಿಯಿಂದ ಶಿವನನ್ನು ನೋಡುತ್ತೀನಿ. ಶಿವನ ಕಾಲುಗಳಲ್ಲಿ ಚಪ್ಪಲಿಗಳಿಲ್ಲ; ಬರಿಗಾಲಿನಲ್ಲಿ ಕೂತಿದ್ದಾನೆ!! ಚಪ್ಪಲಿ ಧರಿಸದ ದಿಗಂಬರ ಶಿವನ ದರ್ಶನವೇನೋ ಆಯಿತು...

ಅತ್ತಿತ್ತ ನೋಡಿದೆ. ಆಹಾ.. ಸಾಲುಸಾಲಾಗಿ ಜೋಡಿಸಿಟ್ಟಿದ್ದ ಚಪ್ಪಲಿಗಳ ದರ್ಶನದಿಂದ ಸಾಕ್ಷಾತ್ಕಾರವಾದಷ್ಟು ಸಂತೋಷವಾಯಿತು! ಎಂಥಹ ಸುದಿನ... ಇವತ್ತು ಶಿವರಾತ್ರಿ. ಇಂಥಹ ದಿನ ಕಳವು ಮಾಡಬಹುದೇ? ಮನಸ್ಸಿನಲ್ಲಿ ತಳಮಳ; ಒಂದು ರೀತಿಯ ಭಯ. ಕಾಲು ನಡುಗಿದಂತಾದರೂ ನನ್ನ ಸಾಹಸ ಬಿಡಲೊಲ್ಲೆ. ಚಪ್ಪಲಿಗಳನ್ನು ಜೋಡಿಸಿಟ್ಟಿದ್ದ ಸಾಲಿನಲ್ಲಿ ಒಂದು ಕಡೆಯಿಂದ ಮತ್ತೊಂದು ಕಡೆಯವರೆಗೂ ಶಿವನಿಗೆ ಕೈಮುಗಿಯುತ್ತಲೇ ಚಪ್ಪಲಿಗಳ ತಪಾಸಣೆ ನಡೆಸಿದೆ. ಆಹಾ.. ಸಿಕ್ಕಿತೊಂದು ಜೋಡಿ ಜೋಡು; ನನ್ನ ಕಾಲುಗಳಿಗೆ ಹೇಳಿ ಮಾಡಿಸಿದಂಥ ಜೋಡಿ. ಅತ್ತಿತ್ತ ನೋಡುತ್ತಾ ಒಂದೆರಡು ಸಾರಿ ಅವನ್ನು ಮೆಟ್ಟಿಕೊಂಡು ನೋಡಿದೆ. ಕೈಚಳಕವಲ್ಲ.. ನನ್ನ ಕಾಲು ಚಳಕ. ಅವನ್ನು ಮೆಟ್ಟಿಕೊಂಡು ಶಿವನ ಕಡೆ ನೋಡುತ್ತ ಒಂದೆರಡು ಸಾರಿ ಓಡಾಡಿದೆ. ಸೊಗಸಾದ ಅನುಭವ! ಆ ಜೋಡಿ ನನಗಾಗಿಯೇ ಮಾಡಿಸಿದ ಹಾಗಿತ್ತು! (Perfect Fitting) ಆ ಜೋಡಿನ ಮಾಲೀಕನಿಗೆ ಮೋಸ ಮಾಡಬಾರದೆಂಬ ಉದಾತ್ತ ಮನಸ್ಸಿನಿಂದ ಆ ಜಾಗದಲ್ಲಿ ಯಾರೂ ಉಪಯೋಗಿಸಲಾರದಂಥಹ ನನ್ನ ಮೆಟ್ಟುಗಳನ್ನು ಬಿಟ್ಟುಬಿಟ್ಟೆ1 ಎಲ್ಲ ಬಿಟ್ಟ ಪರಮ ತ್ಯಾಗಿ ಶಿವನಂತೆ!!! ನನ್ನ ತ್ಯಾಗ ಎಂಥದು! ಹೀಗೆ ನನ್ನ ಹಳೆಯ ಚಪ್ಪಲಿಗಳನ್ನು ''ಶಿವಾರ್ಪಣೆ'' ಮಾಡಿ ನನಗೆ ಸಿಕ್ಕ ಹೊಸ ಚಪ್ಪಲಿಗಳನ್ನು ಮೆಟ್ಟಿ ನಿಂತಲ್ಲೇ ಪ್ರದಕ್ಷಿಣೆ ಹಾಕುತ್ತ ಶಿವನಿಗೆ ನಮಸ್ಕರಿಸುತ್ತ ''ಅಪ್ಪಾ .. ಶಿವನೆ ನಿನ್ನ ಮಹಿಮೆ ದೊಡ್ಡದು. ಭಕ್ತರು ಬಯಸಿದ್ದನ್ನು ನೀಡುವವನು ನೀನು. ನಿನಗಿದೋ ನಮೋ ನಮಃ'' ಎಂದು ಹೇಳುತ್ತ, ಜಗತ್ತನ್ನೇ ಗೆದ್ದ ವೀರಾಧಿವೀರನಂತೆ ಎದೆಯುಬ್ಬಿಸಿ ಅಲ್ಲಿಂದ ಕಾಲುಕಿತ್ತು ಮನೆಯ ಕಡೆ ನಡೆದೆ. ಇನ್ನೂ ಶಿವನಾಮ ಸಣ್ಣಗೆ ಕೇಳಿಸುತ್ತಲೇ ಇತ್ತು. ಅದೇ ನಾನು ಮನಮೆಚ್ಚಿದ ಮೊದಲ ಜೊತೆ ಮೆಟ್ಟುಗಳು.

ಇಂಗ್ಲಿಷ್ ಲೇಖಕನೊಬ್ಬನ "Umbrella Morals" ಎಂಬ ಲೇಖನ ನೆನಪಾಯಿತು. ನಾನು ಮಾಡಿದ್ದು ಕಳ್ಳತನವಾಯಿತೇ? ಎಂದು ಕೆಲವು ದಿನ ನನ್ನ ಕೃತ್ಯ ಕಾಡಿತು. ನನ್ನ ''ಕಳ್ಳತನ''ಕ್ಕೆ ನಾನೇ ಸಮರ್ಥನೆಯನ್ನು ಕೊಟ್ಟುಕೊಳ್ಳುತ್ತ ಅದಕ್ಕೆ ಪರಿಹಾರ ಹುಡುಕುವುದರಲ್ಲಿ ಆ ಜೋಡಿ ಚಪ್ಪಲಿಗಳು ಸವೆದು ಚಪ್ಪಟೆಯಾಗಿ ಹೋದವು. ಹೋಗಲಿ ಬಿಡಿ.

''ಗಂಗೇಲಿ ಮುಳುಗಿದರೂ ಗಂಗಾಳದ ಚಿಂತೆ'' ಎಂಬ ಮಾತಿದೆ. ಗುಡಿಯಲ್ಲಿರಲಿ, ಗುಡಾರದಲ್ಲಿರಲಿ ಚಪ್ಪಲಿ ಚಿಂತೆ ಮಾಡುವವರಿಗಿಂತ ನಾನೆಷ್ಟೋ ವಾಸಿ ಅಲ್ಲವ. ನನಗೆ ಏಕಾಗ್ರತೆ ಇತ್ತು. ಒಂದು ಗುರಿ ಇತ್ತು. ಅದನ್ನು ಸಾಧಿಸಿದ ಸಮಾಧಾನವಿತ್ತು. ಗುಡೀಲಿ ಪ್ರಸಾದ ಚರ್ಪಿನ ನಿರೀಕ್ಷೆಯಲ್ಲಿರುವಾಗ ಚಪ್ಪಲಿ ಕಡೆಗೇ ಚಿತ್ತ. ಅವರಿಗಿಂತ ನನ್ನ ''ಭಕ್ತಿ''ಯೇ ಮೇಲಲ್ಲವೇ?

ನಮ್ಮ ಪುರಾಣದ ಕಥೆಗಳನ್ನು ಕೇಳಿದರೆ ಅಚ್ಚರಿಯಾಗುತ್ತೆ. ತನ್ನ ಬಾಲ್ಯದಲ್ಲಿ ಶ್ರೀಕೃಷ್ಣ ಬೆಣ್ಣೆ ಕದ್ದು ತಿನ್ನುತ್ತಿದ್ದ. ಹರೆಯದಲ್ಲಿ ಹೆಂಗಳೆಯರ ಮನ ಕದ್ದು ಗೆದ್ದ. ಅರ್ಜುನ ಸುಭದ್ರೆಯನ್ನು ಕಳ್ಳತನದಿಂದ ಹಾರಿಸಿಕೊಂಡು ಹೋದ. ಹೀಗೆ ಎಷ್ಟೋ... ಕಳ್ಳತನ ಅಷ್ಟು ಸುಲಭವಲ್ಲ. ಅದೊಂದು ಸೂಕ್ಷ್ಮ ಕಲೆ.

ನಾನಿನ್ನೂ ಸಣ್ಣವನು. 7-8 ವರ್ಷದವನಿರಬಹುದು. ನನ್ನಪ್ಪ ನಮ್ಮೂರಿನ ಸಂತೇಪೇಟೆಯ ಮೂಲೆಯಲ್ಲಿದ್ದ ಭೀಮಯ್ಯ ಎಂಬ ಚಮ್ಮಾರನ ಪುಟ್ಟ ಗುಡಾರದಂತಿದ್ದ 'ಅಂಗಡಿ'ಗೆ ಕರೆದುಕೊಂಡು ಹೋಗುತ್ತಿದ್ದರು. ದಪ್ಪ ಮೀಸೆಯ ಭಾರಿ ಆಳು ಭೀಮಯ್ಯ – ನಮ್ಮ ಊರಿನ ಬಾಟ ಶೂ ಕಂಪೆನಿ ಇದ್ದ ಹಾಗೆ. ಯಾರಿಗೆ ಹೇಗೆ ಬೇಕೋ ಹಾಗೆ 'ಮೇಡ್ ಟು ಆರ್ಡರ್' ಚಪ್ಪಲಿಗಳನ್ನು ಹೊಲೆದುಕೊಡುತ್ತಿದ್ದ. ನನ್ನಪ್ಪ ಆಗ ಧರಿಸುತ್ತಿದ್ದ ಗದುಗಿನ ಮಾದರಿ ಚಡಾವಿಗೆ ಆರ್ಡರ್ ಕೊಡುತ್ತಿದ್ದರು. ಅದು ತಯಾರಾಗಿ ಮನೆಗೆ ಬಂದಾಗ ಅದಕ್ಕೆ ಅದ್ಭುತ ಸ್ವಾಗತ. ಅದಕ್ಕೆ ಮೊದಲೆರಡು ದಿನ ಅಭ್ಯಂಜನ ಸೇವೆ... ಒರಟಾದ ಚರ್ಮ ಮೆದುವಾಗಲು.

ನನಗೆ ಹೊಸ ಚಪ್ಪಲಿಗಳನ್ನು ಕೊಂಡು ಹಾಕಿಕೊಳ್ಳುವುದು ಸಾಧ್ಯವಿರಲಿಲ್ಲ. ನನಗೆ ಚಪ್ಪಲಿಯ ಚಪಲ ಎಷ್ಟಿತ್ತೆಂದರೆ ಬೀದಿಯಲ್ಲಿ ಜನ ಓಡಾಡುವಾಗ ಅವರ ಚಪ್ಪಲಿಗಳನ್ನೇ ನೋಡುತ್ತ ದಸರಾ ಅಂಬಾರಿ ಉತ್ಸವ ನೋಡುವ ಹಾಗೆ ಕಣ್ಣರಳಿಸಿ ನಿಂತುಬಿಡುತ್ತಿದ್ದೆ. ಒಮ್ಮೆ ರಸ್ತೆಯಲ್ಲಿ ಎದುರಾದ ನನ್ನಪ್ಪನ ಸ್ನೇಹಿತರು – ''ಏನಯ್ಯ ... ತಲೆ ತಗ್ಗಿಸಿಕೊಂಡೇ ಓಡಾಡುತ್ತಿ. ಇದು ವೀರ ಮದಕರಿನಾಯಕನ ಊರು. ಎದೆಯುಬ್ಬಿಸಿ ನಡೆಯಬೇಕು'' ಎಂದಿದ್ದರು. ಅವರಿಗೇನು ಗೊತ್ತು ನನ್ನ ಆಸೆ-ಆಕಾಂಕ್ಷೆಗಳು!

ನಾನು ಹೈಸ್ಕೂಲಿಗೆ ಪ್ರವೇಶ ಮಾಡುವ ಹೊತ್ತಿಗೆ ನನ್ನ ಇಬ್ಬರು ಅಣ್ಣಂದಿರು ದುಡಿಯಲಿಕ್ಕೆ ಪ್ರಾರಂಭಿಸಿದ್ದರು. ಅವರು ತಮ್ಮ ಚಪ್ಪಲಿಗಳನ್ನು ತುಳಿದು ಸವೆಸಿ ಅವನ್ನು ತ್ಯಾಜ್ಯ ವಸ್ತುಗಳೆಂದು ಬಿಟ್ಟಿರುತ್ತಿದ್ದವುಗಳನ್ನು ನಮ್ಮ ಚಮ್ಮಾರ ಭೀಮಯ್ಯನಿಂದ ನನ್ನ ಕಾಲಿಗೆ ಸರಿಹೊಂದುವಂಥೆ ರಿಪೇರಿ ಮಾಡಿಸಿ ತೊಡುತ್ತಿದ್ದೆ. ಹೀಗಿದೆ ನನ್ನ ಚಪ್ಪಲಿ ಚಪಲತೆ.

ಅದೇನೇ ಇರಲಿ. ಈ ನಡುವೆ ಚಪ್ಪಲಿ ಒಂದು ರೀತಿಯ ಮಹತ್ತ್ವ ಪಡೆದಿದೆ. ಯಾಕೆ ಗೊತ್ತಾ? ಸಚಿವರ ಮೇಲೆ ಚಪ್ಪಲಿ ಬಿಸಾಡುತ್ತಾರೆ; ತಮ್ಮ ಸಿಟ್ಟನ್ನು ತೀರಿಸಿಕೊಳ್ಳುತ್ತಾರೆ. ನನ್ನ ಕಾಲದಲ್ಲಾಗಿದ್ದರೆ ಬಿಸಾಡಿದ ಚಪ್ಪಲಿಯನ್ನು ಕ್ಯಾಚ್ ಹಿಡಿದು ಬಿಡುತ್ತಿದ್ದೆ. ಆ ಒಂಟಿ ಜೋಡಿಗೆ ಮತ್ತೊಂದನ್ನು ಹೇಗೋ ಜೋಡಿಸುತ್ತಿದ್ದೆ.

ಎಲ್ಲಾ ಭಾಷೆಗಳಲ್ಲೂ ''ಚಪ್ಪಲಿ'' ವಿಜೃಂಭಿಸಿದೆ. ತಮಿಳಿನಲ್ಲಿ ಚೆರ್ಪು, ಶೆರಪ್ಪು, ಕೆರ್ಪು ಇದೆ. ತೆಲುಗಿನಲ್ಲಿ ''ಚೊಪ್ಪಲು'' ಇದೆ. 'ಕೆರ', 'ಎಕ್ಕಡ', 'ಕಾಲ್ಮರೆ' 'ಚಡಾವು' ಎಂಬೆಲ್ಲವೂ ಕನ್ನಡದಲ್ಲಿದೆ. ಪಾದಗಳಿಗೆ ರಕ್ಷಣೆ ಕೊಡುವ ಚಪ್ಪಲಿಗಳಿಗೆ ಸಾಕಷ್ಟು ಸ್ಥಾನ-ಮಾನ ಸಿಗುತ್ತಿದ್ದು, ಈಗಲೂ ಅನೇಕ ಗ್ರಾಮಾಂತರ ಪ್ರದೇಶಗಳಲ್ಲಿ ಚಪ್ಪಲಿ ಮೆಟ್ಟಿ ಬರುವವರು ಮನೆಯ ಹೊರಗೆ ಅವನ್ನು ಬಿಟ್ಟು ಕೈ-ಕಾಲು ತೊಳೆದುಕೊಂಡು ಒಳಗೆ ಬರಬೇಕಾದ ಪದ್ಧತಿ ಇದೆ.


ಚಪ್ಪಲಿಗಳಿಗೆ ಈಗ ಅಪಾರ ಬೇಡಿಕೆಯಿದೆ. ಲಕ್ಷಗಟ್ಟಲೆ ಬಂಡವಾಳ ಹೂಡಿ ಹುಟ್ಟಿಕೊಂಡಿರುವ ಚಪ್ಪಲಿ ತಯಾರಿಕಾ ಕಂಪೆನಿಗಳು ಅಸಂಖ್ಯ. ಎಷ್ಟೊಂದು ವೈವಿಧ್ಯಮಯ ಪಾದರಕ್ಷೆಗಳು! ಅದೆಷ್ಟು ಬಣ್ಣಗಳು? ಅದಕ್ಕೆ ಪಾಲಿಷ್ ಮಾಡುವ ಸಾಧನಗಳೆಷ್ಟು! ಅನೇಕರಲ್ಲಿ ತಾವು ಧರಿಸುವ ಉಡುಪುಗಳಿಗೆ ಮ್ಯಾಚಿಂಗ್ ಆಗುವ ಪಾದರಕ್ಷೆ ಧರಿಸುವ ಅಭ್ಯಾಸವೂ ಉಂಟು. ಇನ್ನೂ ಅವುಗಳ ಬೆಲೆ – ಸಾವಿರ ಸಾವಿರ! ಹಾಗೆ ಒಂದು ಸೊಗಸಾದ ಜೊತೆ ಪಾದರಕ್ಷೆಗಳನ್ನು ಕೊಳ್ಳುವ ಹಣದಲ್ಲಿ ಒಂದು ಬಡ ಸಂಸಾರ ಒಂದು ಹೊತ್ತು ಊಟ ಮಾಡಿ ಸುಖಿಸಬಹುದು.

ಪಾದರಕ್ಷೆ ಉಪಯೋಗಿಸುವವರಲ್ಲಿ ಈಗ ವಯಸ್ಸಿನ ಅಂತರವಿಲ್ಲ. ಶಿಶುವಿಹಾರಕ್ಕೆ ಹೋಗುವ ಮಕ್ಕಳಿಗೆ ಬಣ್ಣಬಣ್ಣದ ಪಾದರಕ್ಷೆ. ಎಲ್ಲಾ ಶಾಲೆಗಳಲ್ಲೂ ಅವರು ನಿರ್ದೇಶಿಸುವ ರೀತಿಯಲ್ಲಿ ಪಾದರಕ್ಷೆ ಧರಿಸಬೇಕು. ಪಾದರಕ್ಷೆ ಇಲ್ಲದೆ ಕೆಲವು ಕಡೆ ಪ್ರವೇಶವಿರುವುದಿಲ್ಲ. ಖ್ಯಾತ ಕಲಾವಿದ ಎಫ್.ಎಮ್. ಹುಸೇನ್ ಪಾದರಕ್ಷೆ ಧರಿಸುತ್ತಿರಲಿಲ್ಲ. ಹಾಗಾಗಿ ಕೊಲ್ಕತ್ತಾದ ಒಂದು ಪ್ರಖ್ಯಾತ ಕ್ಲಬ್‌ಗೆ ಅವರಿಗೆ ಪ್ರವೇಶ ನಿರಾಕರಿಸಲಾಯಿತು. ಅದು ಅನೇಕರ ಟೀಕೆಗೆ ಕಾರಣವೂ ಆಯಿತು. ನಮಗೆ ಗೊತ್ತಿರುವ ಹಾಗೆ ಎಲ್ಲ ಬಿಟ್ಟ ಸಾಧು-ಸಂತ-ಸನ್ಯಾಸಿಗಳೂ ಕೂಡ ಕಾಲಿಗೆ ಹಾವುಗೆಗಳನ್ನು ಹಾಕಿಕೊಳ್ಳುತ್ತಾರೆ. ಅವರ ಕಾಲಾನಂತರ ಅವರು ಮೆಟ್ಟಿದ್ದ ಪಾದುಕೆಗಳಿಗೆ ಭಕ್ತರು ಪೂಜೆ ಸಲ್ಲಿಸುತ್ತಾರೆ. 'ಪಾದುಕಾ ಪೂಜ' ಸಮಾರಂಭಗಳು ನಡೆಯುತ್ತವೆ. ರಾಮಾಯಣದಲ್ಲಿ ವನವಾಸದಲ್ಲಿದ್ದ ಶ್ರೀರಾಮನ ಪಾದುಕೆಗಳನ್ನು ತಂದು ಭರತ ಅವುಗಳ ಹೆಸರಿನಲ್ಲಿ ರಾಜ್ಯಭಾರ ಮಾಡುತ್ತಾನೆ.

ಇಂಥಹ ಮಹತ್ತ್ವವುಳ್ಳ ಪಾದರಕ್ಷೆಗಳಿಗೆ ನಾನು ಆಸೆ (ದುರಾಸೆ) ಪಟ್ಟಿದ್ದು ತಪ್ಪೇ? ಶಿವರಾತ್ರಿಯ ದಿನ ಅವನ ಧ್ಯಾನ ಮಾಡುತ್ತಾ ಭಗವಂತ ಕೊಟ್ಟ ಪ್ರಸಾದವೆಂದು ಭಾವಿಸಿ, ಒಂದು ಜೊತೆ ಜೋಡನ್ನು ಕದ್ದಿದ್ದು ಮಹಾಪರಾಧವೇ? ಆ ಶಿವನನ್ನು ನಂಬಿದವರಿಗೆ ತಮ್ಮ ಅಭೀಷ್ಟೆಗಳನ್ನು 'ಅವನು' ಹೇಗೇಗೋ ನೆರವೇರಿಸುತ್ತಾನಲ್ಲವೇ? ಈ ತರ್ಕಗಳ ಮೂಲಕ ನನ್ನ ಅಪರಾಧ ಪ್ರಜ್ಞೆಯಿಂದ ಮುಕ್ತನಾಗಿದ್ದೇನೆ.

❖

ಈಗಿನ ಕಾಲದ ಹುಡುಗಿಯರು ಸದಾ ತುದಿಗಾಲಲ್ಲೇ ನಿಂತಿರ್ತಾರೆ...
ನಂಬಿಕೆ ಬರಲಿಲ್ಲವೇ....
ಅವರು ಹಾಕೋ ಹೈ ಹೀಲ್ಡ್ ಚಪ್ಪಲಿ ನೋಡಿ.




Since 1998
**Whisper Hearing Aids**
Pvt. Ltd.
1030/13, 25 main, 39 cross,
4th 'T' block, Jayanagara, Bengaluru

SIEMENS
Authorised Hearing Care Centre

Avail **FREE** supply of batteries for a year on purchase of hearing aids for this week.
10am - 1:30pm, 5pm - 8pm
Appointment : 26640571, 9741765454

ಕಿವಿ - ಕೇಳುವ ಅಂಗವೇ ಆದರೂ ಅದರ ಒಂದು ಭಾಗ ನಮ್ಮ ದೇಹದ ಸಮತೋಲನ ಮಾಡುವ ಕೆಲಸ ನಿಭಾಯಿಸುತ್ತದೆ. ಕೇಳಿಸುವ ಭಾಗಕ್ಕೆ ತೊಂದರೆಯಾದರೆ ಕಿವುಡುತನ ಬರುತ್ತದೆ, ಹಾಗೆಯೇ ಉಳಿದ ಭಾಗಕ್ಕೆ ತೊಂದರೆಯಾದರೆ ತಲೆಸುತ್ತು ಕಿವಿಮೊರೆತ ಉಂಟಾಗುತ್ತದೆ. ಕಿವಿಮೊರೆತಕ್ಕೆ ಉಳಿದಂತೆ ಹಲವಾರು ಕಾರಣಗಳು ಇದ್ದರೂ ಈ ಸೂಕ್ಷ್ಮವಾದ ಅಂಗದ ತೊಂದರೆಯೇ ಬಹುಮಟ್ಟಿನ ಕಾರಣ. ಬಹಳ ಸಲ ಈ ತೊಂದರೆ ಔಷಧಿಗೆ ಒಗ್ಗದು. ಮೊರೆತ ಮುಚ್ಚುವಂತೆ ಶಬ್ದವನ್ನು ಹಿಯರಿಂಗ್ ಏಡ್ ಮೂಲಕ ಕೊಡಬೇಕಾಗುತ್ತದೆ. ಸದ್ಯಕ್ಕೆ ಅದೇ ಉತ್ತರ. ಕಿವಿಯ ಸೂಕ್ಷ್ಮತೆ ಕಡಿಮೆಯಾದ ನಂತರ ಹಿಯರಿಂಗ್ ಏಡ್ ಧರಿಸಿ ಎಲ್ಲರಂತೆಯೇ ಮಾತಿನ ಚಟುವಟಿಕೆಯಲ್ಲಿ ಭಾಗವಹಿಸಬೇಕು, ಅದು ಸಾಮಾನ್ಯ ಜೀವನ.

**ಡಾ|| ಜಿ. ಪುರುಷೋತ್ತಮ ಇಡಿ.ಡಿ.**
**ವಾಕ್ - ಶ್ರವಣದೋಷ ತಜ್ಞ, ವಿಸ್ಪರ್ ವಾಕ್ - ಶ್ರವಣ ಕೇಂದ್ರ**

# ಬೈಗುಳಗಳು ಬಂದರೆ ಭಾಷೆ ಬಂದಂತೆ!!!

**- ಮಾಲತಿ ಮುದಕವಿ**

**ಯಾ**ವುದಾದರೂ ಭಾಷೆ ಚೆನ್ನಾಗಿ ಬರುತ್ತದೆ ಎಂದು ಯಾರಾದರೂ ಕೊಚ್ಚಿಕೊಂಡರೆ ಅವರನ್ನು ಬಹು ಸುಲಭವಾಗಿ ಪರೀಕ್ಷಿಸಬಹುದು. ಅವರನ್ನು ಆ ಭಾಷೆಯಲ್ಲಿ ಬೈದು ಬಿಡುವುದು! ಅವರು ನಮ್ಮ ಜೊತೆ ಜಗಳಕ್ಕೆ ಬಂದರೆ ಅವರಿಗೆ ಆ ಭಾಷೆ ಚೆನ್ನಾಗಿಯೇ ಬರುತ್ತದೆ ಎಂದರ್ಥ. ಅವರಿಂದ ಯಾವುದೇ ಪ್ರತಿಕ್ರಿಯೆ ಇಲ್ಲವೆಂದಾದರೆ ಅವರು ಸುಳ್ಳು ಹೇಳಿದ್ದಾರೆ ಎಂದು ತಿಳಿಯಬೇಕು.

ಎಲ್ಲ ಭಾಷೆಗಳಲ್ಲಿಯೂ ದೊಡ್ಡ ದೊಡ್ಡ ಶಬ್ದಕೋಶಗಳೇ ಇವೆ. ಆದರೂ ಭಾಷೆಯ ಮೇಲೆ ಹೇಗೆ ಕಾಲ, ಪರಿಸರ ಹಾಗೂ ಬೇರೆ ಭಾಷೆಗಳ ಪ್ರಭಾವವಾಗುತ್ತದೆಯೋ ಅದೇ ರೀತಿ ಬೈಗುಳಗಳ ಮೇಲೆಯೂ ಆಗುತ್ತದೆ. ಅವೂ ಕೂಡ ಬದಲಾವಣೆ ಹೊಂದುತ್ತಲಿರುತ್ತವೆ.

ಹಳೆಗನ್ನಡದಲ್ಲಿ ಆದಿಕವಿ ಪಂಪನ ಕಾಲದಿಂದಲೂ ಬೈಗುಳಗಳ ಸಾಮ್ರಾಜ್ಯ ಪ್ರಚಲಿತದಲ್ಲಿದೆ. ಕುಮಾರವ್ಯಾಸನಂತೂ ಬೈಯುವುದರಲ್ಲಿ ಅಂದರೆ ಪಾತ್ರಗಳಿಂದ ಬೈಯಿಸುವುದರಲ್ಲಿ ಎತ್ತಿದ ಕೈ! ಸಭಾಪರ್ವದಲ್ಲಿ ದ್ರೌಪದಿ ದುಃಶಾಸನನಿಂದ ಅವಮಾನಿತಳಾದಾಗ ಪತಿಗಳನ್ನು ಮೂರುಲೋಕದ ಗಂಡರೋ ಇವರು ಷಂಡರೋ .. ಎಂದು ಹೀಯಾಳಿಸುತ್ತಾಳಲ್ಲ! ಭೀಷ್ಮಪರ್ವದಲ್ಲಿ ಕರ್ಣನು ಭೀಷ್ಮರನ್ನು ಮುದಿಯ .. ಜೋಲ್ದ ಪುರ್ಬಿನವೈವನು ಹೇಗೆ ಸೈನ್ಯವನ್ನು ಸಂಭಾಳಿಸುತ್ತಾನೆ, ಮುಂದಾಳ್ತನವನ್ನು ವಹಿಸುತ್ತಾನೆ ಎಂದು ಹಾಸ್ಯ ಮಾಡುತ್ತಾನೆ. ದ್ರೋಣಾಚಾರ್ಯರು ಕರ್ಣನನ್ನು ಕುಲವ ನಾಲಗೆ ಅರುಹಿತು ಎಂದು ಎತ್ತಿ ಆಡುವುದು, ಇವೆಲ್ಲ ಬೈಗುಳವಲ್ಲದೆ ಮತ್ತೇನು? ಪುರಂದರದಾಸರಂತೂ ಮತ್ತೊಂದು ಹೆಜ್ಜೆ ಮುಂದೆ ಹೋಗಿ ಗಯ್ಯಾಳಿ, ಮೂಳಿ, ಬಿಕನಾಸಿ ಎಂದೆಲ್ಲ ಬಯ್ದಿದ್ದಾರೆ! ನಾವು ಚಿಕ್ಕವರಿದ್ದಾಗ ನಮಗೆ ಶ್ರೀಮತಿಯ ಸ್ವಯಂವರ ಎಂಬ ಪಾಠವಿತ್ತು. ಅದರಲ್ಲಿ ನಾರದ ಹಾಗೂ ತುಂಬುರ ಇಬ್ಬರಿಗೂ ಅಂಬರೀಷ ರಾಜನ ಮಗಳು ಶ್ರೀಮತಿಯ ಮೇಲೆ ಮನಸ್ಸಾಗುತ್ತದೆ. ಇಬ್ಬರೂ ತಾವೇ ಆಕೆಯೆದುರು ಸುಂದರವಾಗಿ ಕಾಣಬೇಕೆಂಬ ತವಕದಲ್ಲಿ ವಿಷ್ಣುವಿನ ಹತ್ತಿರ ಹೋಗಿ ಆಕೆಗೆ ನಾರದರು ಮಂಗನಂತೆ ಕಾಣಲೆಂದು ತುಂಬುರರೂ, ಕೋಡಗನಂತೆ ಕಾಣಲೆಂದು ನಾರದರೂ ವರ ಬೇಡುತ್ತಾರೆ! ವಿಷ್ಣುವೋ ಮಹಾ ಕಿಲಾಡಿ! ತಥಾಸ್ತು ಎಂದು ಆಶ್ವಾಸನೆಯನ್ನೂ ನೀಡುತ್ತಾನೆ.ಮುಂದಿನ ಕಥೆ ಬೇರೆ. ಅದರ ಮಾತು ಬಿಡಿ. ಇಲ್ಲಿ ದೇವ ಋಷಿಗಳಾದರೂ ಅವರ ಬೈಗುಳಗಳು ನಮ್ಮಂತೆಯೆ ಮಂಗ್ಯಾ, ಮುಶ್ಯಾ ಅಂತೆಯೇ ಇವೆ ಎನ್ನುವುದು ವಿಶೇಷ!

ಇನ್ನು ಈಗಿನ ಕಾಲದಲ್ಲಿ ಬೈಗುಳಗಳು ಹಳ್ಳಿಗಳ ಕಡೆಗೆ ಒಂದಿಷ್ಟು ದೇಸಿ ಮಾರ್ಗ ಹಿಡಿಯುತ್ತವೆ. ಶುದ್ಧ ಕನ್ನಡದಲ್ಲಿ ಅದೂ ಗ್ರಾಮ್ಯದಲ್ಲಿ ಬೈಯುವುದನ್ನು ಕೇಳಿದಾಗ ಶಹರಿನವರು ಮೂಗು ಸಿಂಡರಿಸುವುದುಂಟು! ಏಕೆಂದರೆ ಅವು ಎಲ್ಲರಿಗೂ ತಿಳಿಯುವಂತಿರುತ್ತವಲ್ಲ. ಆ ಮಗ ಈ ಮಗ ಎನ್ನುವುದನ್ನೇ ಇಂಗ್ಲಿಷಿನಲ್ಲಿ ಹೇಳಿದರೆ ಒಂದಿಷ್ಟು ಡಿಸೆಂಟ್ ಅಂತ.

ನಾವು ಚಿಕ್ಕವರಿದ್ದಾಗ ನಮ್ಮ ಮನೆಗೆ ಒಬ್ಬ ಅಜ್ಜಿ, ಗಂಗವ್ವ ಅಂತ ಅವಳ ಹೆಸರು – ಆಕೆ ಮನೆಗೆಲಸಕ್ಕೆ ಬರುತ್ತಿದ್ದಳು. ನಾನು ಏನಾದರೂ ಕೆಟ್ಟ ಕೆಲಸ ಮಾಡಿದಾಗೆಲ್ಲ ಅವಳು ನನಗೆ ನಿನ ಮಂಜಾಳಾಗಾ ಎಂದು ಬೈಯುತ್ತಿದ್ದಳು. ನಾನು ಸಿಟ್ಟಿನಿಂದ ಅವ್ವನೆದುರು ಹೋಗಿ ಹೇಳಿದರೆ ಅವ್ವ ನಗುತ್ತ ಹುಚ್ಚ ಖೋಡಿ, ಅದರ ಅರ್ಥರೆ ಗೊತ್ತದ ಏನು ನಿಂಗ. ಮಂಜಾಳಾಗಾ ಅಂದ್ರ ಮನಿಯೆಲ್ಲಾ ಜ್ವಾಳಾಗ್ಲಿ, ನೀ ಭಾಳಷ್ಟು ಶ್ರೀಮಂತ ಆಗಲಿ ಅಂತ ಹೇಳುತ್ತಲಿದ್ದಳು. ನಾವು ಹಳೆಯ ಮೈಸೂರಿನ ಕಡೆಗೆ ಹೋದರೆ ಅವರು ನಿನ್ ಮನಿ ಕಾಯ್ವಾಗಾ ಅನ್ನುವುದನ್ನು ನೀವು ಕೇಳಿರಬಹುದು. ನೋಡಿರಿ, ಹಳೆಯ ಜನರ ಬೈಗುಳದಲ್ಲಿಯೂ ಕೂಡ ಎಷ್ಟು ಸದಾಶಯವಿರುತ್ತಿತ್ತು!

ಯಾರಾದರೂ ಬೈದರೆಂದು ಕಣ್ಣಲ್ಲಿ ನೀರು ತುಂಬಿಕೊಂಡೋ, ಸಿಟ್ಟಿನಿಂದಲೋ ಹೇಳಿದಾಗೆಲ್ಲಾ ನಮ್ಮ ಸೋದರ ಸಂಬಂಧಿಯೊಬ್ಬರು ನಗುತ್ತ ಕಲ್ಯಾಣದಾಗ ರೊಕ್ಕಾ ಕೊಟ್ಟು ಬೈಸಿಕೋತಾರಂತ. ನಿನಗ ಪುಕಟನ್ಯಾಗ ಬೈತಾರಲ್ಲಾ. ಸಂತೋಷಪಡು. ಅದಕ್ಯಾಕ ಚಿಂತೀ ಮಾಡತೀ? ಅಂತ ಹೇಳುತ್ತಿದ್ದರು. ಅಂದರೆ ಹಳೆಯ ಕಾಲದಲ್ಲಿ ಬೈದವರು ದೊಡ್ಡವರಲ್ಲ, ಬೈಸಿಕೊಂಡವರು ದೊಡ್ಡವರಾಗಿರುತ್ತಿದ್ದರು! ಶರಣರೇ ಹೇಳಿಲ್ಲವೆ, ಬೈದವರೆನ್ನ ಪೊರೆದವರೆಂಬೆ ಎಂದು.

ಈಗ ಕನ್ನಡದ ಬೈಗಳಲ್ಲದೆ ಇಂಗ್ಲಿಷಿನ ಬೈಗುಳಗಳೂ ಬಹಳ ಜನಪ್ರಿಯವಾಗಿವೆ. ಯಾಕೆಂದರೆ ಕನ್ನಡ ನಮ್ಮ ಮಾತೃಭಾಷೆ. ಅದರಲ್ಲಿ ಕೆಟ್ಟ ಶಬ್ದಗಳನ್ನು ಅದರಲ್ಲೂ ಒಂದಿಷ್ಟು ಸಂಕೋಚವಾಗುವಂಥ ಶಬ್ದಗಳನ್ನು (ಎಲ್ಲರಿಗೂ ತಿಳಿಯುವಂತೆ) ಹೇಳುವುದು ಕಷ್ಟವಲ್ಲವೆ? ಈಗ ಹುಡುಗ ಹುಡುಗಿಯನ್ನು ಆಯ್ ಲವ್ ಯೂ ಎನ್ನುತ್ತಾನೆಯೇ ಹೊರತು ನಾ ನಿನ್ನ ಪ್ರೀತಿಸುವೆ ಎಂದು ದೇವರಾಣೆಯಾಗಿ ಕನ್ನಡ ಸಿನಿಮಾದಲ್ಲೂ ಕೂಡ ಹೇಳುವುದಿಲ್ಲ! ಅಷ್ಟೇ ಏಕೆ, ಡಾಕ್ಟರ ಹತ್ತಿರ ಹೋದಾಗಲೂ ನಾವು ನಮಗೆ ಡೀಸೆಂಟ್ರಿ ಹತ್ತಿದೆ ಎನ್ನುತ್ತೇವೆಯೇ ಹೊರತು ಶೌಚಕ್ಕೆ ಹತ್ತಿದೆ ಎನ್ನುತ್ತೇವೆಯೇ?

ಇರಲಿ, ಈಗ ಬೈಗುಳ ಪಟ್ಟಿಗೆ ಬರೋಣ. ಸ್ಟುಪಿಡ್, ಫೂಲ್ ಎಂದು ಬೈದರೆ ಅಜ್ಜ ಅಜ್ಜಿಯರಿಗೆ ಕೂಡ ಖುಷಿಯಾಗುತ್ತದೆ. ಅದೇ ಮೂರ್ಖ–ಗೀರ್ಖ ಎಂದು ಬೈದರೆ ಸಿಟ್ಟು ಬರದಿರುತ್ತದೆಯೇ?

ಹೀಗೆ ಎಲ್ಲರಿಗೂ ಅವರವರ ಭಾಷೆಗಿಂತ ಪರಂಗಿ ಭಾಷೆಯಲ್ಲಿಯ ಬೈಗುಳಗಳೇ ಪ್ರೀತಿ ಎನ್ನುವುದಂತೂ ಪರಮಸತ್ಯ!!

❖

# ಕಿಟಕಿ ಜಾಗ..........

- ಎಚ್. ಗೋಪಾಲಕೃಷ್ಣ

**ನ**ಗರ ಸಾರಿಗೆ ಬಸ್ಸಿನಲ್ಲಿ ಯಾವಾಗಲೂ ಪ್ರಯಾಣಿಸುವ ನನಗೆ ಕೂತುಕೊಳ್ಳುವ ಸೀಟು ಸಿಗುವುದು ತುಂಬಾ ಅಪರೂಪ-ಅಪರೂಪ ಏನು ಇಲ್ಲ ಎಂದೇ ಹೇಳಬೇಕು. ನುಗ್ಗಿ ಬಸ್ಸು ಹತ್ತುವ ಚಾಣಾಕ್ಷತೆ ಇಲ್ಲದಿರುವುದು ಮತ್ತು ನಿಂತು ಪಯಣಿಸುವ ಇತರ ಪ್ರಯಾಣಿಕರಿಗಿಂತಲೂ ನನ್ನದೇನು ಹೆಚ್ಚುಗಾರಿಕೆ ಎಂಬ ಮನೋಭಾವದಿಂದಲೋ ಕೂತಿರುವ ಜಾಗವನ್ನು ಮತ್ತೊಬ್ಬರಿಗೆ ಬಿಡುವಂತಹ ಕರ್ಣಗಾರಿಕೆಯನ್ನೂ ರೂಢಿಸಿಕೊಂಡಿರುವವನು ನಾನು. ಮೊನ್ನೆ ಏನಾಯಿತು ಅಂತೀರೀ....

ಆಫೀಸಿನಿಂದ ಮನೆಗೆ ಹೋಗಲು ಬಸ್ಸಿಗೆ ಕಾಯುತ್ತಿದ್ದೆ. ಮನೆ ಹತ್ತಿರದ ಸ್ಟಾಪನ್ನೂ ದಾಟಿಕೊಂಡು ಮತ್ತೂ ಆರು ಮೈಲಿ ದೂರ ಹೋಗುವ ಖಾಲಿ ಖಾಲಿ ಬಸ್ಸು ಬಂದು ಎದುರಿಗೆ ನಿಲ್ಲಬೇಕೇ? ಅದೂ ಕಿಟಕಿ ಪಕ್ಕದ ಸೀಟು ಖಾಲಿ ಇರುವ ಬಸ್ಸು? ಬಹಳ ಖುಷಿಯಿಂದ ಬಸ್ಸು ಹತ್ತಿದೆ ಮತ್ತು ಕಿಟಕಿ ಪಕ್ಕ ಕೂತೆ. ಕಂಡಕ್ಟರು ಟಿಕೇಟು ಕೇಳಿಕೊಂಡು ಬಂದಾಗ ಬಸ್ಸು ಹೋಗುವ ಕೊನೆಯ ಸ್ಟಾಪಿಗೆ ಟಿಕೇಟು ಖರೀದಿಸಿದೆ. ಮುಂದಿನ ಒಂದು ಒಂದೂವರೆ ಗಂಟೆ ಕಿಟಕಿ ಪಕ್ಕ ಕೂತು ಬಸ್ಸಿನಿಂದ ಆಚೆ ನೋಟ ಹರಿಸುತ್ತಾ ಬೆಂಗಳೂರಿನ ಒಂದು ಭಾಗವನ್ನು ಕಣ್ಣಿನ ಮೂಲಕ ಹೃದಯದಲ್ಲಿ ತುಂಬಿಕೊಳ್ಳಬಹುದು ಎಂದು ಕವಿಗಳ ಹಾಗೆ ಮನಸ್ಸು ಯೋಚಿಸುತ್ತಿತ್ತು.

ನಾಲ್ಕೋ ಐದೋ ಸ್ಟಾಪುಗಳು ಆದವು. ಮನೆ ಹತ್ತಿರದ ನಾನು ಇಳಿಯಬೇಕಾದ್ದೂ ಬಂದಿತು, ಟಿಕೆಟ್ಟು ಕೊನೆಯವರೆಗೆ ಇದ್ದುದ್ದರಿಂದ ಹಾಗೇ ಕೂತೆ ಕಿಟಕಿಯಿಂದ ಆಚೆಗೆ ತಲೆ ಹಾಕಿದೆ. ಎರಡು ಮೂರು ಸ್ಟಾಪಿನ ನಂತರ ಒಂದು ಹನ್ನೆರೆಡು ಹದಿಮೂರು ವಯಸ್ಸಿನ ಹುಡುಗಿ ಬಸ್ಸು ಹತ್ತಿದಳು. ನಿಂತು ಸುತ್ತಲೂ ದೃಷ್ಟಿ ಹರಿಸಿದಳು. ಹೆಂಗಸರ ಸೀಟಿನಲ್ಲಿ ಒಂದು ಸೀಟು ಖಾಲಿ ಇತ್ತು. ಹುಡುಗಿ ಅತ್ತ ನೋಡಿದವಳು ಅದನ್ನು ಬಿಟ್ಟು ನಾನು ಕೂತಿದ್ದೆಡೆಗೆ ಬಂದಳು. ಪಕ್ಕದ ಸೀಟು ಖಾಲಿ ಇತ್ತು, ಹುಡುಗಿ ಅಲ್ಲಿ ಕೂತುಕೊಳ್ಳಲಿ ಅಂತ ಪಕ್ಕಕ್ಕೆ ಕೊಂಚ ಸರಿದೆ.

ಅಂಕಲ್ ನನಗೆ ಕಿಟಕಿ ಪಕ್ಕದ ಜಾಗ ಬಿಡ್ತೀರಾ ಅಂತ ಕೇಳಿತು.

ಯಾಕಮ್ಮಾ? ಕಿಟಕಿ ಪಕ್ಕ ಬೇಕು ಅಂತಲೇ ನಾನು ಕೂತಿದ್ದೀನಿ.... ಅಂದೆ.

ಅಂಕಲ್, ಪ್ಲೀಸ್ ಕಿಟಕಿ ಪಕ್ಕ ಬಿಟ್ಟುಕೊಡಿ ಪ್ಲೀಸ್ ಅಂತ ಬೇಡಿತು ಅಂತ ಮುಖ ಸಿಂಡರಿಸಿಕೊಂಡೇ ಈ ಪಕ್ಕಕ್ಕೆ ಸರಿದೆ.

ಪಕ್ಕದಲ್ಲಿ ಕೂತು ನಿರಾಳವಾಗಿ ಉಸಿರಾಡಿತು ಹುಡುಗಿ. ಕೈಚೀಲದಿಂದ ಒಂದು ಬ್ಯಾಗು ತೆಗೆದು ಅದರಲ್ಲಿ ಬಗ್ಗಿ ನೋಡಿ ತಲೆಯಾಡಿಸಿದ ಹಾಗೆ ಮಾಡಿದಳು. ಎರಡು ಮೂರು ಕ್ಷಣಗಳಿಗೊಮ್ಮೆ ಕಿಟಕಿಯಿಂದ ಆಚೆ ತಲೆ ಹಾಕಿ ಯಾರನ್ನೋ ನಿರೀಕ್ಷಿಸುತ್ತಿದ್ದಾಳೇನೋ ಅನ್ನುವ ಭಾವ ನೀಡಿದಳು. ಹುಡುಗಿ ಅದೇನೋ ಆತಂಕದಲ್ಲಿದೆ ಅನಿಸಿತು. ಪಾಪ ಅದೇನು ದುಗುಡವೋ ಅನಿಸಿ ಮಾತಿಗೆ ಎಳೆದೆ.

ಎಲ್ಲಿಂದ ಬರ್ತಾ ಇದೀಯಾ ಅಂತ ಕೇಳಿದೆ.

ಸಂಜೀವಿನಿ ನಗರಕ್ಕೆ ಮನೆ ಕೆಲಸಕ್ಕೆ ಹೋಗಿದ್ದೆ.....

ಯಾಕೆ ಓದಲ್ವಾ ಸ್ಕೂಲು ಕಾಲೇಜು ಹೋಗಲ್ಲವಾ?

ಇಲ್ಲ ಅಂಕಲ್ ಹೈಸ್ಕೂಲು ಓದಬೇಕಾದರೆ ಅಪ್ಪ ತೀರಿದರು, ಮನೇಲಿ ನಾನೇ ದೊಡ್ಡವಳು ಅದಕ್ಕೇ ಓದು ನಿಲ್ಲಿಸಿ ಮನೆ ಕೆಲಸ ಮಾಡ್ತೀನಿ.

ಅಮ್ಮ ಇಲ್ಲವಾ?

ಅಮ್ಮ ಇದ್ದಾರೆ, ಒಬ್ಬ ತಮ್ಮನೂ ಇದ್ದಾನೆ, ಅಮ್ಮ ಎಲ್ಲೋ ಕೆಲಸಕ್ಕೆ ಹೋಗ್ತಾಳೆ ಅವಳೂ ಬರೋದು ನಾನು ಮನೆ ಸೇರಿದಮೇಲೇನೆ.

ತಮ್ಮನ್ನ ಯಾರು ನೋಡ್ಕೋತಾರೆ ಹಾಗಿದ್ರೆ?

ಅವನು ನಾಲ್ಕನೇ ಕ್ಲಾಸು, ಸ್ಕೂಲು ಮುಗಿಸಿಕೊಂಡು ಬಂದು ಪಕ್ಕದ ಮನೇಲಿ ಇರ್ತಾನೆ.

ಪಾಪ ನೀನು ಹೋಗಿ ಅಡಿಗೆ ಪಡಿಗೆ ಮಾಡಬೇಕೇನೋ?

ಹೌದು ಅಂಕಲ್, ಇವತ್ತು ಸ್ವಲ್ಪ ಲೇಟಾಗಿಹೋಯಿತು.

ಬ್ಯಾಗಿನಿಂದ ಒಂದು ಪ್ಲಾಸ್ಟಿಕ್ ಕವರ್ ಆಚೆ ತೆಗೆದಳು, ಅದನ್ನ ಕೊಂಚ ತೆರೆದು ಒಳಗಡೆ ಇರುವುದನ್ನು ಬಿಡಿಸಿ ನೋಡಿದಳು. ಕಿಟಕಿಯಿಂದ ಮತ್ತೆ ಆಚೆ ನೋಡುತ್ತಾ ಕೂತಳು.

ಮತ್ತೆರೆಡು ಸ್ಟಾಪು ಆದವು. ಈಗ ಸೀಟಿನಲ್ಲಿ ನೇರವಾಗಿ ಕೂತು ಕಿಟಕಿಯಿಂದ ಆಚೆಗೆ ದೃಷ್ಟಿ ನೆಟ್ಟಳು. ಹುಡುಗಿ ಅದೇನೋ ಅಡ್ವೆಂಚರ್ ಮಾಡಲಿಕ್ಕೆ ಹೊರಟಿದೆ ಅನಿಸಿತು. ಏನು ಮಾಡುತ್ತಾಳೆ ಅಂತ ತೆರೆದ ಕಣ್ಣು ಬಿಟ್ಟುಕೊಂಡು ಕೂತೆ. ಕಿಟಕಿಯ ಆಚೆ ಮಕ್ಕಳ ಶಬ್ದ ಜೋರಾಗಿ ಹೋಗುತ್ತಿರುವ ಬಸ್ಸಿನಿಂದ ಕೇಳಿಸಿತು. ಇವಳು ಅರ್ಧ ನಿಂತು ಕೈ ಆಡಿಸಿದಳು. ರಸ್ತೆಯ ಪಕ್ಕದಲ್ಲಿ ನಿಂತಿದ್ದ ಎಂಟು ಹತ್ತು ವಯಸ್ಸಿನ ಮಕ್ಕಳು ಬಸ್ಸನ್ನು ನೋಡುತ್ತಾ ಹೋ ಅಂದವು, ಕೆಲವು ಅಕ್ಕಾ ಅಕ್ಕಾ ಅಲ್ಲಿ ಅಂತ ಕೂಗಿದವು. ಪಕ್ಕದ ಹುಡುಗಿ ನೇರವಾಗಿ ಎದ್ದಳು. ಕೈಯಲ್ಲಿದ್ದ ಪ್ಲಾಸ್ಟಿಕ್ ಕವರನ್ನ ಮಕ್ಕಳ ಹತ್ತಿರ ಬೀಳುವ ಹಾಗೆ ಎಸೆದಳು.

ನಾಳೆ ಬೇಗ ಬರ್ತೀನ್ರೋ ಸಿಗ್ತೀನಿ... ಅಂತ ಕೂಗಿದಳು ಹೊರಗಡೆಯ ಮಕ್ಕಳಿಗೆ ಕೇಳಿಸುವ ಹಾಗೆ.

ಹುಡುಗಿ ಕೂಡುವ ತನಕ ಕಾದೆ. ಯಾರು ಅವರು? ಅಂದೆ.

ಮೊದಲು ನಮ್ಮ ಮನೆ ಇಲ್ಲೇ ಇತ್ತು, ಎಲ್ಲರೂ ಆಟಕ್ಕೆ ಜತೆ ಸೇರ್ತಾ ಇದ್ದೆವು. ಅಪ್ಪ ಹೋದಮೇಲೆ ನಾವು ಮನೆ ದೂರ ಮಾಡಿದೆವಲ್ಲಾ ಈ ಮಕ್ಕಳು ಆಗಾಗ ನಮ್ಮನೆಗೆ ಬರುತ್ವೆ. ಎರಡು ತಿಂಗಳ ಹಿಂದೆ ಬಂದಿದ್ವು, ಕೆಲಸಕ್ಕೆ ಹೋಗ್ತಾ ಇದೀನಿ ಅಂತ ಹೇಳಿದೆ. ಚಾಕಲೇಟು ಕೊಡಿಸೋಲ್ವಾ ಅಂತ ಕೇಳಿದವು. ಅದಕ್ಕೆ ಮನೆಯವರು ಕಾಸು ಅದೇ ಸಂಬಳ ಕೊಟ್ಟಾಗ ಚಾಕಲೇಟು ತರ್ತೀನಿ. ಅವು ಇಲ್ಲೇ ಆಡ್ತಾ ಇರುತ್ತವೆ. ಅವು ಕಾಣಿಸಿದರೆ ನಾನೂ ಕೈ ಆಡಿಸಿ ಚಾಕಲೇಟಿನ ಕವರು ಅವರಿಗೆ ಎಸೀತೀನಿ.

ಹೋ ಅದಕ್ಕೇನೋ ಈ ಸೀಟೇ ಬೇಕು ಅಂದಿದ್ದು?

ಹೌದು ಅಂಕಲ್. ಆ ಕಡೆ ಸೀಟು ಬಿಡಿ ಅಂತ ಕೇಳಿದೆನಲ್ಲಾ ಅದಕ್ಕೇ ಅಂಕಲ್....

ಗುಡ್ ಅಂದೆ ಯಾಕೋ ಮನಸ್ಸು ಪಿಚ್ ಅನಿಸಿತ್ತು.

ಮಗೂ ಮುಂದಿನ ಸಲ ನಿನ್ನ ಸ್ನೇಹಿತರಿಗೆ ಚಾಕಲೇಟು ಇದರಲ್ಲಿ ಕೊಡಿಸು ಅಂತ ಅವಳ ಕೈಗೆ ಎರಡು ನೋಟು ತುರುಕಿ ಮುಂದಿನ ಸ್ಟಾಪಿನಲ್ಲಿ ಬಸ್ಸಿನಿಂದ ಇಳಿದೆ. ಮನೇಗೆ ವಾಪಸ್ಸು ನಡೆದೇ ಹೋಗೋಣ ಅನಿಸುವ ಮಟ್ಟಿಗೆ ಹುಡುಗಿಯ ಮುಗ್ಧ ಮನಸ್ಸು ನನ್ನ ಮನಸ್ಸನ್ನ ಕವಿದಿತ್ತು. ಅಬ್ಬಾ ಸ್ನೇಹದ ಬೆಲೆಯೇ ಅನ್ನಿಸಿತು. ನನಗೆ ಇದು ಹೊಸಾ ಅನುಭವ!

❖

---

## ಹಬ್ಬದ ಹೂವಿನ ಯಾಪಾರ

ಗಂಡು : ಎಷ್ಟಮ್ಮ ಮಲ್ಲಿಗೆ ಹೂವು ಮೊಳ

ಹೂವಾಕೆ : ಯಾರಿಗೆ ಹೂವು? ನಿಮ್ಮ ಹೆಂಡ್ತೀನೋ ಇಲ್ಲ ನಿಮ್ಮ ಪ್ರೇಯಸಿಗೋ

ಗಂಡು : ತಲೆ ಹರಟೆ ನಿಂಗ್ಯಾಕೆ ಅದೆಲ್ಲ ರೇಟ್ ಹೇಳು

ಹೂವಾಕೆ : ಹಾಗಲ್ಲ ರೇಟು ಎಷ್ಟಾದರೂ ಸರಿ ಪ್ರೇಯಸಿಗಾದರೆ ತಗೊಂಡು ಹೋಗ್ತಾರೆ. ಹೆಂಡ್ತಿಗಾದ್ರೆ ರೇಟು ಕೇಳ್ಕೊಂಡು ಹಾಗೇ ಹೋಗ್ತಾರೆ. ಅದಕ್ಕೆ ಕೇಳ್ದೆ.

ಗಂಡು : ರೇಟು ಹೇಳು ಅಷ್ಟೇ ಸಾಕು

ಹೂವಾಕೆ : ಇಪ್ಪತ್ತು ರೂಪಾಯಿ ಮೊಳ

ಗಂಡು : ಎರಡು ಮೊಳ ಕೊಡು. ನನ್ನ ಹೆಂಡತಿಗೆ

ಹೂವಾಕೆ : ಹೂವು ತಗೊಂಡು ಹೋಗೋರೆಲ್ಲ ಹೀಗೇ ಹೇಳಿ ತಗೊಂಡು ಹೋಗೋದು

– ಬೇಲೂರು

# ಅಪರಂಜಿ ಸದಸ್ಯತ್ವದ ಮುನ್ನೋಟ

(29-2-2012ರ ವರೆಗೆ)

**ಕಳೆದ ತಿಂಗಳು ತಮ್ಮ ಚಂದಾವನ್ನು ನವೀಕರಿಸಿದ ನಮ್ಮ ಆತ್ಮೀಯ ಓದುಗರ ವಿವರ ಇಂತಿದೆ.**

| ಚಂದಾ ಸಂಖ್ಯೆ | ಹೆಸರು | |
|---|---|---|
| 2738 | ಶ್ರೀ ಎಸ್. ರಾಮಸ್ವಾಮಿ | ವಾರ್ಷಿಕ ಚಂದಾ |
| 2910 | ಶ್ರೀ ಎಚ್. ಪಾರ್ಥಸಾರಥಿ | ವಾರ್ಷಿಕ ಚಂದಾ |
| 3483 | ಶ್ರೀ ಕೆ. ರಾಮರಾವ್ | ವಾರ್ಷಿಕ ಚಂದಾ |
| 8122 | ಶ್ರೀ ಎಸ್. ಗುರುನಾಥ್ | ವಾರ್ಷಿಕ ಚಂದಾ |
| 8245 | ಶ್ರೀ ಎಚ್.ಎಸ್. ರಮೇಶ್ | ವಾರ್ಷಿಕ ಚಂದಾ |
| 8446 | ಶ್ರೀ ಎಚ್.ಎನ್. ಅಶೋಕ್ | ವಾರ್ಷಿಕ ಚಂದಾ |
| 8461 | ಶ್ರೀ ರಮಾನಂದ ಹರಪನ ಹಳ್ಳಿ | ವಾರ್ಷಿಕ ಚಂದಾ |
| 8564 | ಶ್ರೀ ಎಸ್.ಎನ್. ರಾಮಚಂದ್ರ ರಾವ್ | ವಾರ್ಷಿಕ ಚಂದಾ |
| 8585 | ಶ್ರೀ ವಿ. ಜಗನ್ನಾಥ್ | ವಾರ್ಷಿಕ ಚಂದಾ |
| 8666 | ಶ್ರೀ ಆರ್. ತಿಪ್ಪೇಸ್ವಾಮಿ | ವಾರ್ಷಿಕ ಚಂದಾ |
| 8465 | ಶ್ರೀ ಎ.ಎನ್. ಹೆಬ್ಬಾರ್ | ವಾರ್ಷಿಕ ಚಂದಾ |
| 3554 | ಶ್ರೀಮತಿ ಸೌಜನ್ಯ ಎನ್.ಎಚ್. | ವಾರ್ಷಿಕ ಚಂದಾ |
| 2630 | ಶ್ರೀ ಎಲ್. ಚಂದ್ರಶೇಖರ್ | ವಾರ್ಷಿಕ ಚಂದಾ |
| 8118 | ಶ್ರೀ ಎಸ್. ಗುಂಡೂರಾವ್ | ವಾರ್ಷಿಕ ಚಂದಾ |

**ನಮ್ಮ ಬಳಗಕ್ಕೆ ಹೊಸದಾಗಿ ಸೇರಿರುವ ಈ ಓದುಗರಿಗೆ ತುಂಬುಹೃದಯದ ಸ್ವಾಗತ.**

| | | |
|---|---|---|
| 5132 | ಶ್ರೀಮತಿ ಪುಷ್ಪಾ ಮೋಹನ್ | ಹತ್ತು ವರ್ಷದ ಚಂದಾ |
| 8665 | ಶ್ರೀ ಬಿ.ಆರ್.ವಿ. ಮೂರ್ತಿ | ವಾರ್ಷಿಕ ಚಂದಾ |
| 8667 | ಶ್ರೀಮತಿ ಕೆ.ಎನ್. ನೀಲಾದೇವಿ | ವಾರ್ಷಿಕ ಚಂದಾ |
| 8668 | ಶ್ರೀ ಎಂ. ಕೃಷ್ಣ ಮೂರ್ತಿ | ವಾರ್ಷಿಕ ಚಂದಾ |
| 8669 | ಶ್ರೀಮತಿ ಸತ್ಯಪ್ರೇಮ ಎಸ್. ಗುರುಮೂರ್ತಿ | ವಾರ್ಷಿಕ ಚಂದಾ |
| 8670 | ಶ್ರೀಮತಿ ಸಾವಿತ್ರಿ ಕೆ.ಎಸ್. ರಾಮಚಂದ್ರ | ವಾರ್ಷಿಕ ಚಂದಾ |

**ಕೆಳಗಿನವರ ವಿಳಾಸ ಬದಲಾವಣೆಯನ್ನು ದಾಖಲಿಸಿಕೊಂಡಿದ್ದೇವೆ.**

| | |
|---|---|
| 2630 | ಶ್ರೀ ಎಲ್. ಚಂದ್ರಶೇಖರ್ |
| 8606 | ಶ್ರೀ ಬಿ.ಎಸ್. ಕುಮಾರಯ್ಯ |
| 8070 | ಶ್ರೀಮತಿ ಕೆ.ಎಲ್. ಶ್ಯಾಮಲ |

**ವಾರ್ಷಿಕ ಚಂದಾದಿಂದ ಅಜೀವ ಚಂದಾಕ್ಕೆ ಬದಲಾವಣೆ.**

| | |
|---|---|
| 8525 | ಶ್ರೀ ಎಚ್.ಕೆ. ಅಂಬಿಕಾ |